ಉಂಬನಿತರ್ಕೆ ಕೊಟ್ಟು ಪಗೆಯೊಳ್ಪಲವುಂ ತೆರದಿಂದೆ ಸೇವೆಯಂ |
ಕೊಂಬ ವಿವೇಕಿಯಂತೆ ವಿರಸಾನ್ನಮನೇ ತನುವಿಂಗೆ ಜೋಕೆಯಿಂ ||
ತುಂಬಿ ಜಪಂ ತಪಂ ಪರಮಶಾಸ್ತ್ರರಹಸ್ಯದೊಳಾತ್ಮಕಾರ್ಯಮಂ |
ಬೆಂಬಿಡದಾವಗಂ ನೆಗಳ್ವವಂಗೆಣೆಯಾರಪರಾಜಿತೇಶ್ವರಾ || ೧೭ ||

"ಹಗೆಗೆ ಊಟಕ್ಕೆ ಹಾಕಿ ಮೈಮುರಿಯುವಂತೆ ದುಡಿಸಿಕೊಳ್ಳುವ ವಿವೇಕಿಯಂತೆ ತನ್ನ ದೇಹಕ್ಕೆ ನೀರಸವಾದ ಆಹಾರವನ್ನು ತುಂಬಿ ಜಪವನ್ನೂ ತಪಸ್ಸನ್ನೂ ಶಾಸ್ತ್ರದ ರಹಸ್ಯವನ್ನೂ ಅರಿತು ಆತ್ಮೋದ್ಧಾರವನ್ನು ಸದಾ ಸಾಧಿಸುವ ಸಾಧಕನಿಗೆ ಸಮನಾರು?"—ದೇಹವನ್ನು ಬಿಡುವಂತಿಲ್ಲ, ಅಂತೆ ಕಟ್ಟಿಕೊಳ್ಳುವಂತೂ ಇಲ್ಲ. ಕೊಬ್ಬದಂತೆ ನೋಡಿಕೊಂಡು ಇದರಿಂದಲೇ ಪಾರಮಾರ್ಥಿಕ ಪ್ರಗತಿಯನ್ನು ಸಾಧಿಸಿಕೊಳ್ಳಬೇಕು.

ಉಂಬುದು ನೀರಸಂ ಪೊರೆವುದೊಂದೊಡಲಿರ್ಪುದು ಗೂಢವಾಸವಾ |
ಡುಂಬೊಲನೇಳು ತತ್ತ್ವಮೊಳುವಾತು ಸರಸ್ವತಿಯೊಳ್ನಿರಂತರಂ ||
ಹಂಬಲಘಪ್ರಣಾಶದೊಳಗೀ ಕ್ಷಣಮಾತ್ರನೊಳಾಗಿ ಬಾಳ್ವ ಧೀ |
ರಂ ಬಹುಕರ್ಮಮಂ ಕ್ಷಣಕೆ ಖಂಡಿಸನೇ ಅಪರಾಜಿತೇಶ್ವರಾ || ೧೮ ||

ಗುರಿಯತ್ತ ಸಾಗಬೇಕೆಂದಿರುವ ಸಾಧಕನ ಬಾಳ್ವೆ ಹೇಗೆ ಸಿಂಗರಗೊಳ್ಳಬೇಕೆಂಬುದನ್ನು ರತ್ನಾಕರ ಹೃದಯಸ್ಪರ್ಶಿಯಾಗುವಂತೆ ಚಿತ್ರಿಸಿರುವನು. "ದೇಹವನ್ನು ಹೇಗೋ ಕಾಪಾಡಿಕೊಳ್ಳಬೇಕಲ್ಲವೆ? ಅದಕ್ಕಾಗಿ ನೀರಸವಾದ ಆಹಾರವನ್ನೇ ಸ್ವೀಕರಿಸಲಿ. ಅಂದರೆ ಬದುಕುವುದಕ್ಕೋಸ್ಕರ ತಿನ್ನಬೇಕೇ ವಿನಾ ತಿನ್ನುವುದಕ್ಕೋಸ್ಕರ ಬದುಕಬಾರದು. ಏಕಾಂತದಲ್ಲಿದ್ದುಕೊಂಡು 'ಏಳು ತತ್ತ್ವ'ಗಳೊಡನೆ ಸರಸವಾಡಿಕೊಂಡಿರಲಿ. ಸದಾ ಶಾರದೆಯೊಡನೆ ಒಳ್ಳೆ ಮಾತನಾಡುತ್ತಿರಲಿ. ಕರ್ಮಶತ್ರುವನ್ನು ಧ್ವಂಸಮಾಡುವ ಸನ್ನಾಹವನ್ನೆಸಗುತ್ತಿರಬೇಕು. ಆತ್ಮವನ್ನೀಕ್ಷಿಸುತ್ತ ತನ್ಮಯನಾಗಬೇಕು. ಈ ರೀತಿ ಬಾಳುವ ಧರ್ಮವೀರ ಚಣದಲ್ಲಿ ಕರ್ಮವನ್ನು ನಾಶಮಾಡದಿರುವನೆ?" ಇಂಥವರನ್ನು ಧೀರರೆಂದು ಕರೆಯುವುದರಲ್ಲೂ ಔಚಿತ್ಯವಿದೆ.

ಜಯಸಿದ್ಧಿಯೆಂಬುದು ವೈರಿಭೂಪರನೊತ್ತಿ | ಜಯಿಸಿದರದು ಲೌಕಿಕಾರ್ಥ |
ಬಯಬಡಿಸುವ ಕಾಲಕರ್ಮವನೊತ್ತಿ | ಜಯಿಸಿದರದು ಪರಮಾರ್ಥ[1] || ೫ ||

—ಎಂದು ಭರತೇಶನಾಸ್ಥಾನದಲ್ಲಿ ಕವಿ ಹಾಡಿರುವನು.

ಕರ್ಮಾಳಿಗಳ ಗೆಲ್ವರೆನಗೆ ಯೋಚನೆಯೈಸೆ | ಪೆರ್ಮಡುವಿನ ಮಧ್ಯದಲ್ಲಿ ||
ಕೂರ್ಮನಂತಿರ್ದನ ಗೆಲ್ವರೊಂದೆಣಿಕೆಯೆ | ಮರ್ಮಜ್ಞರಲ್ಲವೆ ನೀವು[2] || ೧೮ ||

ಭರತೇಶ ಎಂದೂ ಬಾಹ್ಯಶತ್ರುಗಳಿಗಾಗಿ ಚಿಂತಿಸಿದವನಲ್ಲ. ಕರ್ಮಾಳಿಗಳನ್ನು ಎಂದಿಗೆ ಗೆದ್ದೇನೊ ಎಂಬುದೆ ಆತನ ಚಿಂತೆಯಾಗಿತ್ತು. "ಹಂಸನಾಥನ ನೋಡುವಾಗ ಕರ್ಮಾಳಿ ವಿಧ್ವಂಸನವಹುದು![3]" ಎಂದು ಭರತೇಶ ತನ್ನ ಸ್ವಾನುಭವವನ್ನು ಬಿತ್ತರಿಸಿರುವನು.

೧. ಭ. ವೈ. ೨ನೇ ಸಂ ;
೨. ಭ. ವೈ. ೨೪ನೇ ಸಂ;
೩. ಭ. ವೈ. ೨೪ನೇ ಸಂ. ೧೭.

ತನ್ನೊಳೆ ತನ್ನನೋಳ್ಪ ಋಷಿಗನ್ಯರ ನೋಟಮದೇಕೆ ಚಿದ್ಗುಣೋ |
ತ್ಪನ್ನ ಸುಧಾನ್ನಮುಣ್ಬ ಮುನಿಗೊಳ್ಪುಣಿಸೆಂಬ ವಿವಕ್ಷೆಯೇಕೆ ಸಿ ||
ದ್ಧಂ ನಮ ಎಂಬ ವಾಕ್ಯಮಿರೆ ಬೇರ್ನುಡಿಯೇಕೆ ನಿಜಾತ್ಮ ರೂಪದೊಳ್ |
ನಿನ್ನೊಡನಾಡುವಂಗುಳಿದ ಗೋಷ್ಠಿಗಳೇಕಪರಾಜಿತೇಶ್ವರಾ || ೧೯ ||

ತನ್ನಲ್ಲಿ ತನ್ನನ್ನೇ ನೋಡುವಂಥ ಋಷಿಗೆ ಬೇರೆ ದೃಶ್ಯಗಳೇಕೆ? ತನ್ನಾತ್ಮದಲ್ಲೇ ಉದ್ಭವವಾಗುವ ಅಮೃತವನ್ನು ಸೇವಿಪ ಯತಿಗೆ ಲೌಕಿಕವಾದ ಭೂರಿಭೋಜನ ಬೇಕೆ? 'ಸಿದ್ಧಂನಮ' ಎಂಬ ಮಾತಿರುವಾಗ ಬೇರೆ ನುಡಿಯೇತಕ್ಕೆ? ಅಪರಾಜಿತ, ನಿನ್ನೊಡನೆ ಆತ್ಮರೂಪಿಯಾಗಿ ಆಡುತ್ತಿರುವವನಿಗೆ ಅನ್ಯಗೋಷ್ಠಿಗಳಿಂದೇನಾಗಬೇಕು?—ಸಾಧಕನ ಅವಸ್ಥೆಯನ್ನು ದಾಟಿ ಪರಿಪೂರ್ಣತೆಗೆ ತೀರ ಹತ್ತಿರವಾದ ಮಹಾಯೋಗಿಯ ಮಹಿಮಾಪೂರ್ಣವಾದ ಬಾಳ್ವೆಯನ್ನು ಇಲ್ಲಿ ಚಿತ್ರಿಸಿರುವನು.

ತಪಸ್ಸಿಗೆ ಅದ್ಭುತವಾದ ಅಲೌಕಿಕ ಶಕ್ತಿಗಳುದ್ಭವಿಸುವುವು; ಅವುಗಳಲ್ಲಿ ಅಮೃತ ಸ್ರವಿಸುವಿಕೆಯೂ ಒಂದು. ಈ ಶಕ್ತಿ ಬಂದ ಮೇಲೆ ಯೋಗಿ ನಿರಾಹಾರಿಯಾಗಿರಬಲ್ಲನು.

"ಬಾಹುಬಲಿ ಸ್ವಾಮಿಗೆ ಅನೇಕ ಪ್ರಕಾರವಾದ ಋದ್ಧಿಗಳುಂಟಾದುವು; ಅಪಕ್ವಾಹಾರದ ವಮನ, ಮುನಿಯ ಉಗುಳು, ಬೆವರು ಇವೆಲ್ಲ ಪ್ರಾಣಿಗಳ ಕಠಿಣ ಕಾಯಿಲೆಗಳಿಗೆ ಔಷಧಿಯಾದವು. ಇದಕ್ಕೆ 'ಔಷಧರ್ದಿ' ಮಹಿಮೆಯೆಂದು ಹೆಸರು. ಉಪವಾಸವಿದ್ದು ತಪವೆಸಗಿದ ಬಾಹುಬಲಿಸ್ವಾಮಿಗೆ ತಪಶ್ಶಕ್ತಿಯಿಂದ ಅಮೃತವನ್ನು ಸ್ರವಿಸುವ ಋದ್ಧಿಯುಂಟಾಯಿತು. ತಪಸ್ಸಾಮರ್ಥ್ಯದಿಂದ ಮನೋಬಲ, ವಾಗ್ಬಲ, ಕಾಯಬಲ ಋದ್ಧಿಗಳುಂಟಾದವು. ಈ ಮುನಿ ಉಂಡಮನೆಯಲ್ಲಿ ಭೋಜನಸಾಮಗ್ರಿ ವೃದ್ಧಿಯಾಗುವಂಥ 'ಅಕ್ಷೀಣಾಲಯ ಋದ್ಧಿ' ಮತ್ತು 'ಅಕ್ಷೀಣಮಹಾಭೋಜನ ಋದ್ಧಿ' ಪ್ರಾಪ್ತಿಯಾಯಿತು.[1]" ಭರತೇಶವೈಭವದಲ್ಲೂ 'ಚಿದ್ಗುಣೋತ್ಪನ್ನಸುಧಾನ್ನ'ದ ಬಗ್ಗೆ ಉಲ್ಲೇಖವಿದೆ. "ಆತ್ಮಸುಧೆಯನಾತ್ಮಗರ್ಪಿಸುತಖಿಲ ಭವ್ಯಾತ್ಮರಿತ್ತನ್ನವ ಮೆಯ್ಗೆ ಆತ್ಮಸಾಕ್ಷಿಯೊಳರ್ಪಿಸುವ ಯೋಗಿ[2]" "ಚಿದ್ಗುಣದನ್ನವ ತಾನುಂಡು ತನುವಿಗೆ ಪುದ್ಗಲದನ್ನವ ನೀವ ಸದ್ಗುರುವಿಗೆ ಭಕ್ತಿಮಿಗೆ ಭುಕ್ತಿಯಿತ್ತರೆ ಸದ್ಗತಿವಡೆವುದೇನರಿದೆ?[3]" ಯೋಗಿಗಳ ಅಲೌಕಿಕತೆ ಸಂಸಾರಿಗಳಿಗರ್ಥವಾಗಬಲ್ಲದೆ? ನಮ್ಮ ಪುಣ್ಯದಿಂದ ರತ್ನಾಕರನೂ ಯೋಗಿಯಾಗಿರುವುದರಿಂದ ಜೊತೆಗೆ ಯೋಗಿಗಳಲ್ಲಿ ಕವಿಯಾಗಿರು

೧. ಪ್ರಾಪ್ತೌಷಧರ್ದ್ಧೇ ರಸ್ಯಾಸೀತ್ಸನ್ನಿಧಿರ್ಜಗತೇ ಹಿತಃ | ಆಮರ್ಶಕ್ಷ್ವೇಲಜಲ್ಲಾದ್ಯೇ ಪ್ರಾಣಿನಾಮುಪಕಾರಿಣಃ || ೧೫೩ ||
ಅನಾಶುಷೋಸ್ಯ ತಸ್ಯಾಸೀದ್ರಸರ್ದ್ಧಿಃ ಶಕ್ತಿಮಾತ್ರತಃ | ತಪೋಬಲ ಸಮದ್ಭೂತಾ ಬಲರ್ದ್ಧಿರಪಿಪಪ್ರಥೇ || ೧೫೪ ||
ಅಕ್ಷೀಣಾವಸಥಃ ಸೋಭೂತ್ತಥಾ ಕ್ಷೀಣಮಹಾಶನಃ | ಸೂತೇ ಹಿ ಫಲ ಮಕ್ಷೀಣಂ ತಪೋಕ್ಷೂಣ ಮುಪಾಸಿತಂ || ೧೫೫ ||
—ಜಿನಸೇನರ ಪೂ. ಪು., ಪ. ೩೭, ಪು. ೬೭೨, ಸಂ. ಶ್ರೀ ಎ. ಶಾಂತಿರಾಜಶಾಸ್ತ್ರಿಗಳು.
೨. ಭ. ವೈ. ೩ನೇ ಸಂ. ೪೪;
೩. ಭ. ವೈ. ೩ನೇ ಸಂ. ೪೫

ವುದರಿಂದ ಇಂಥ ರಹಸ್ಯಮಯವಿವರಣೆಯನ್ನು ನಾವು ಪಡೆದೆವು.

ಬಿಡದೆಕಷಾಯಮಂ ಸುಡದೆಯಿಂದ್ರಿಯ ತೃಷ್ಣೆಗಳಂ ಪರೀಷಹ |
ಕ್ಕೊಡನಿದಿರಾಗಿ ಗೆಲ್ಲದೆ ಸುಗುಪ್ತಿಗಳಂ ಪುಗದಾತ್ಮನಂ ಮಲಂ ||
ಬಿಡದೊಡಲಿಂದೆ ಬೇರ್ಪಡಿಸಿ ನೋಡದೆ ಸುಮ್ಮನೆ ಕರ್ಮಶತ್ರುವೇ |
ಬಿಡುಬಿಡು ಪೋಗೆನಲ್ಕುಡಿಗೆ ಪೋದಪುದೇ ಅಪರಾಜಿತೇಶ್ವರಾ || ೨೦ ||

ಮುಕ್ತನಾಗಬೇಕಾದರೆ ಶ್ರದ್ಧಾಪೂರ್ಣವೂ ಸಾಹಸಪೂರ್ಣವೂ ಆದ ಪ್ರಯತ್ನಬೇಕು. ಬಾಯಿ ಮಾತಿಗೆ ಮಾವಿನಕಾಯಿಯು ಉದುರೀತೆ? "**'ಕಷಾಯ'**ಗಳನ್ನು ಬಿಡದೆ, ಇಂದ್ರಿಯಲಾಲಸೆಯನ್ನು ಸುಡದೆ, **'ಪರೀಷಹ'**ಗಳನ್ನೆದುರಿಸಿ ಗೆಲ್ಲದೆ, **'ತ್ರಿಗುಪ್ತಿ'**ಗಳನ್ನು ಪರಿಪಾಲಿಸದೆ, ಮಲಭರಿತವಾದ ದೇಹದಿಂದ ಪರಿಶುದ್ಧಾತ್ಮನನ್ನು ಬೇರ್ಪಡಿಸಿ ನೋಡದೆ, ಸುಮ್ಮನೆ 'ಎಲೆ ಕರ್ಮಶತ್ರುವೆ ಹೊರಟುಹೋಗು' ಎಂದಮಾತ್ರಕ್ಕೆ ಅದುಹೋದೀತೆ?"—ಮೊದಲು ಸಾಧಕನಾಗಬೇಕು. ಅನಂತರ ಮನಃಪೂರ್ವಕ ಪ್ರಯತ್ನಶೀಲನಾಗಬೇಕು ಎಂದು ಒತ್ತಿ ಒತ್ತಿ ಹೇಳುತ್ತಿರುವನು. ಭರತೇಶವೈಭವದಲ್ಲೂ ರತ್ನಾಕರ ಇದೇ ಮಾತನ್ನು ಹೇಳಿರುವನು.

ಬೊಗ್ಗನೊಂದೇ ದಿನದೊಳು ತೋರನಾತ್ಮನು | ಬಗ್ಗಿದಾಗಳೆ ಬಾಗಿಲಹುದೆ? ||
ನುಗ್ಗೆಯ ಮರನಲ್ಲ ಕರ್ಮವೆಂಬುದು ಕರ್ಮ | ಜಗ್ಗಲೊಯ್ಯನೆತೋರುತಿಹನು[1] || ೭೬ ||

ಶತಕದ ಭಾಷೆ ಕಟ್ಟುನಿಟ್ಟಾದುದು; ಬಂಧ ಬಿಗಿಯಾದುದು. ಭರತೇಶವೈಭವದಲ್ಲಾದರೋ ಸರಸವಾದ ಭಾಷೆಯಲ್ಲಿ ಬಂಧುರವಾದ ಬಂಧದಲ್ಲಿ ರತ್ನಾಕರ ಕಲ್ಪನಾಪೂರ್ಣವಾಗಿ ವಿಷಯವನ್ನು ಬಣ್ಣಿಸುವನು. ಆದರೂ ಆಗಾಗ ಶತಕ ಹಾಗೂ ವೈಭವದ ಭಾವ ಒಂದೇ ಆಗುವುದನ್ನು ಅಲ್ಲಗಳೆಯಲಾದೀತೆ?

ರತ್ನಾಕರನ ಆತ್ಮಪರಿಶೋಧನೆ

ಲೋಕವನ್ನು ಸುಧಾರಿಸಲು ಹೊರಟವನು ಮೊಟ್ಟಮೊದಲು ತನ್ನನ್ನು ತಾನೇ ಸುಧಾರಿಸಿಕೊಳ್ಳಬೇಕು. ಇಲ್ಲದಂದು ಆತನ ಮಾತಿಗೆ ಯಾರೂ ಬೆಲೆಕೊಡಲಾರರು. ಆತನ ಮಾತು ಅನ್ಯರ ಮೇಲೆ ಪ್ರಭಾವ ಬೀರಲಾರದು. ರತ್ನಾಕರನಿಗೆ ಈ ಗುಟ್ಟು ಗೊತ್ತಿಲ್ಲದೇ ಇಲ್ಲ. ತನ್ನಲ್ಲಿರುವ ಕುಂದುಕೊರತೆಗಳನ್ನು ನೆನೆದು ಇವನು ಆಗಾಗ ಚಿಂತಾಕ್ರಾಂತನಾಗದಿರನು. ತಾನಿನ್ನು ಏನೂ ಸಾಧಿಸಿಲ್ಲವಲ್ಲ ಎಂದು ತಳಮಳಗೊಳ್ಳುವನು. ತನ್ನಲ್ಲಿ ಅಂಥ ಅರ್ಹತೆಯಿದೆಯೇ ಎಂದು ಕುದಿಯುವನು. ಸಂದರ್ಭೋಚಿತವಾಗಿ ಆತ್ಮನಿಂದೆಯನ್ನು ಮಾಡಿಕೊಳ್ಳುವುದೂ ಕೂಡ ಸಮ್ಯಕ್ತ್ವದ ಎಂಟು ಗುಣಗಳಲ್ಲೊಂದಾಗಿದೆ[2]. ರತ್ನಾಕರನ ಭಾವೋದ್ರೇಕವನ್ನು ನೋಡಿದರೆ ಇಂಥ ಸಂದರ್ಭದಲ್ಲಿ ನೋಡಬೇಕು.

೧. ಭ. ವೈ. ೨ನೇ ಸಂ.

೨. ಸಮ್ಯಕ್ತ್ವದ ಎಂಟು ಗುಣಗಳು—(೧) ಸಂವೇಗ, (೨) ನಿರ್ವೇಗ, (೩) ಆತ್ಮನಿಂದಾ, (೪) ಗರ್ಹಣಾ, (೫) ಉಪಶಮ, (೬) ಅರ್ಹದಾದಿಭಕ್ತಿ, (೭) ಅನುಕಂಪಾ, (೮) ಆಸ್ತಿಕ್ಯ.—ಜೈ. ಆ. ಸಂ., ಪು. ೧೧.

ಪುರುಪರಮೇಶನಾದಿಯೆನೆ ತೀರ್ಥಂಕರರ್ಮೊದಲಾಗಿ ಕಾನನಾಂ |
ತರದೊಳಗದ್ರಿಯೊಳ್ ಚಳಿಯೊಳಾತಪದೊಳ್ಮಳೆಯೊಳ್ ಕ್ಷುಧಾತೃಷಾ ||
ಭರಮನಡರ್ತುಗೆಲ್ಲದೆ ಜಿನೇಶ್ವರರಾದರೆ ಕೋಡಿ ಬಾಡಿ ಜೋ |
ಕರಿಪೆನಗೆತ್ತ ನಿರ್ಜರೆಯ ಮಾತು ಜಡಂಗಪರಾಜಿತೇಶ್ವರಾ || ೨೧ ||

ಆದಿದೇವ ಮುಂತಾದ ತೀರ್ಥಂಕರರೂ ಕೂಡ ಜಿನೇಶರಾಗಲು ಎಷ್ಟೊಂದು ಕಷ್ಟ ಕಾರ್ಪಣ್ಯಗಳನ್ನು ಸಹಿಸಬೇಕಾಯಿತು! ಅರಣ್ಯದಲ್ಲಿ ಅಲೆದಾಡಿ ಪರ್ವತಾಗ್ರದಲ್ಲಿ ಪರದಾಡಿ, ಚಳಿ ಮಳೆಗಾಳಿಗಳಿಗೆ ಮೈಯಿತ್ತು ಹಸಿವು ನೀರಡಿಕೆಯನ್ನು ಸಹಿಸಿ ತಪಸ್ಸು ಮಾಡದೆ ಹೋಗಿದ್ದರೆ ಜಿನೇಂದ್ರರಾಗುತ್ತಿದ್ದರೆ? ನಿರುತ್ಸಾಹಿಯಾಗಿ ಸೋಂಬೇರಿಯಾಗಿರುವ ನಾನೆಂದರೇನು? ಮುಕುತಿಯೆಂದರೇನು?"—ಅನ್ಯರ ಅವಗುಣಗಳನ್ನು ಎತ್ತಿ ತೋರಿಸಿ ಟೀಕಿಸುವವರು ಲೆಕ್ಕವಿಲ್ಲದಷ್ಟು ಮಂದಿ ಇದ್ದಾರೆ. ಆದರೆ ತನ್ನಲ್ಲಿರುವ ಕುಂದುಕೊರತೆಯನ್ನು ಇಣಿಕಿ ನೋಡುವವರು ವಿರಳ; ಲೋಕದಿದಿರು ಅವನ್ನು ಆಡಿತೋರುವವರು ಇನ್ನೂ ವಿರಳ. ರತ್ನಾಕರ ತನ್ನ ಬೆನ್ನನ್ನು ಅನ್ಯರು ನೋಡುವತನಕ ಕಾಯದೆ ತಾನೇ ನೋಡಿಕೊಂಡಿರುವನು; ಅಲ್ಲಿರುವ ಕೊಳೆಯನ್ನು ಕಂಡು ಕೊಕ್ಕರಿಸಿದ್ದಾನೆ. ಅಷ್ಟಕ್ಕೇ ಬಿಡದೆ ಕೊಳೆಯನ್ನು ತೊಳೆದುಕೊಳ್ಳಲು ಹೆಣಗಾಡಿದ್ದಾನೆ. ತನ್ನನ್ನು ತಾನೇ ಹಂಗಿಸಿಕೊಂಡಿರುವನು. ತನ್ನಲ್ಲಿ ಆಗಾಗ ಹೆಡೆಯೆತ್ತುವ 'ಅಹಂ' ಸರ್ಪದ ಹಲ್ಲುಗಳನ್ನು ರತ್ನಾಕರ ಕಾಲಕಾಲಕ್ಕೆ ಕಿತ್ತುಬಿಸುಟಿರುವನು. "ಕೋಡಿ ಬಾಡಿ ಜೋಕರಿಪೆನಗೆತ್ತ ನಿರ್ಜರೆಯ ಮಾತು ಜಂಡಂಗಪರಾಜಿತೇಶ್ವರಾ!" ಈ ಹಂಗಿಸುವಿಕೆಯೇ ಇಲ್ಲಿ ಕಲೆಯ ರಂಗಾಗಿ ರಂಜಿಸಿದೆ! ಬಸವಣ್ಣನವರೂ ತಮ್ಮ ಬಗ್ಗೆ ಹೀಗೇ ಹೇಳಿಕೊಂಡಿರುವರು. "ಆನೆಯಾದಾರಿಯಲ್ಲಿ ಹೋಯಿತ್ತೆಂದೊಡೆ ಆಡೂ ಆದಾರಿಯಲ್ಲಿ ಹೋಯಿತ್ತೆನ್ನಬಹುದೆ? ಸಂಗನ ಶರಣರಿಗೆ ಆನುಸರಿಯೆಂದು ಗಳಹಲುಬಹುದೆ?.... ಹೇಳಾಕೂಡಲ ಸಂಗಮದೇವಾ![1]"

ಓದಿದ ತತ್ವಮಿಲ್ಲ ಪರಿದಿಟ್ಟ ಪರಿಗ್ರಹಮಿಲ್ಲ ತಗ್ಗಿ ತಂ |
ಪಾದ ಕಷಾಯಮಿಲ್ಲ ನೆರೆಗೆಲ್ದ ಪರೀಷಹಮಿಲ್ಲ ಸದ್ಗುಣಾ ||
ಮೋದತೆಯಿಲ್ಲ ಮಾಡಿದುರುಧರ್ಮವಿಕಾಸತೆಯಿಲ್ಲ ನಿಮ್ಮೊಳ |
ತ್ಯಾದರಭಕ್ತಿಯಿಲ್ಲ ಸುಖಿಯಾಗುವೆನೆಂತಪರಾಜಿತೇಶ್ವರಾ || ೨೨ ||

"ನಾನೊಬ್ಬ ಜಡ! ತತ್ವವನ್ನು ಗ್ರಹಿಸಿರುವೆನೆ? 'ಪರಿಗ್ರಹ'ಗಳನ್ನಾದರೂ ತೊರೆದೆನೆ? ಕಷಾಯಗಳಾದರೂ 'ಉಪಶಮ'ಗೊಂಡವೆ? 'ಪರೀಷಹ'ಗಳನ್ನಾದರೂ ಸಹಿಸುವ ಶಕ್ತಿಯಿದೆಯೆ? 'ಸದ್ಗುಣ'ಗಳ ಮೇಲಾದರೂ ಪ್ರೇಮವಿದೆಯೆ? ಹೇಳಿಕೊಳ್ಳುವಂಥ ಧರ್ಮಪ್ರಭಾವನೆಯನ್ನೂ ಮಾಡಿಲ್ಲವಲ್ಲ! ಇದಾವುದಿಲ್ಲದಿದ್ದರೂ ಹೋಗಲಿ ಭಕ್ತಿಯಾದರೂ ಇದೆಯೆ? ಹೀಗಿರುವಾಗ ಹೇಗಪ್ಪ ಉದ್ಧಾರವಾಗಲಿ?—ತನ್ನ ಮನಸ್ಸಿನ ತಳಮಳಕ್ಕೆ ರತ್ನಾಕರ ಕಣ್ಣಿಗೆಕಟ್ಟುವಂತೆ ರೂಪವಿತ್ತಿದ್ದಾನೆ!

೧. ಬ. ವ. ೩೨೮

ಎಂತೋ ಶಿವಭಕ್ತಿಯ ನಾನುಪಮಿಸುವೆನಯ್ಯಾ !
ಎಂತೋ ಶಿವಾಚಾರವೆನಗೆ ವೇದ್ಯವಪ್ಪುದಯ್ಯಾ?
ಕಾಮ, ಕ್ರೋಧ, ಲೋಭ, ಮೋಹದಿಂದ ಕಟ್ಟುವಡೆದೆನು ;
ಹಸಿವು ತೃಷೆ ವ್ಯಸನದಿಂದ ಕುದಿಯುತ್ತಿದ್ದೇನೆ;
ಪಂಚೇಂದ್ರಿಯ, ಸಪ್ತಧಾತು ಹಂಚುಹರಿಮಾಡಿ ಕಾಡಿಹುವಯ್ಯಾ!
ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ—
ಕೂಡಲಸಂಗಮದೇವಾ, ನಾನೇವೆನೇವೆನಯ್ಯಾ?[೧]

ಜಗತ್ತಿನ ಮಹಾಸಾಧಕರಲ್ಲಿ ಇಂಥ ಒಳತೋಟಿ ಅನಿವಾರ್ಯ. ಬಾಹ್ಯಾಭ್ಯಂತರವನ್ನೆಲ್ಲ ಪರಿಶುದ್ಧಿ ಮಾಡಿಕೊಳ್ಳಬೇಕೆಂದು ಈ ಸಾಧಕರು ಪರಿತಪಿಸುವರು. ರತ್ನಾಕರನ ಆತ್ಮಪರಿಶೋಧನೆಗೂ ಬಸವಣ್ಣನವರ ಆತ್ಮಪರಿಶೋಧನೆಗೂ ಅಂತರವಿದೆಯೆ? ಈ ಸಾಧಕರಿಬ್ಬರ ಸಮಸ್ಯೆಯೂ ಒಂದೆ; ಇವರಿಬ್ಬರ ಗುರಿಯೂ ಒಂದೆ!

ಬೋಧಿಪೆನೆಂಬೆನೆಲ್ಲರುಮನಾಗಮಪದ್ಧತಿ ಬಾರದಾಯ್ತು ಬ |
ಲ್ಬಾಧೆಯನಾಂತು ಸೈರಿಸುತಮಾತ್ಮನೊಳಿರ್ದ ಮಲೀಮಸಂಗಳಂ ||
ಸೋದಿಪೆನೆಂಬೆನಳ್ಳೆದೆತನಂ ಬಿಡದಾಯ್ತು ನಿಜಾತ್ಮ ದೃಷ್ಟಿಯಂ |
ಸಾಧಿಸೆನೆಂಬೆನೆಂದೊಡೆ ಮನಂ ಚಳಮಾಯ್ತಪರಾಜಿತೇಶ್ವರಾ || ೨೩ ||

"ಅಪರಾಜಿತೇಶ್ವರಾ, ಎಲ್ಲರಿಗೂ ಧರ್ಮಬೋಧೆ ಮಾಡುವೆನೆಂದು ಕೊಚ್ಚಿಕೊಳ್ಳುವೆನು; ಆದರೆ ನನಗೇ ಆಗಮಪದ್ಧತಿ ತಿಳಿದಿಲ್ಲವಲ್ಲ! 'ಪರೀಷಹ'ಗಳನ್ನೆಲ್ಲ ಸಹಿಸಿಕೊಂಡು, ಆತ್ಮದಲ್ಲಿರುವ ಕೊಳಕನ್ನೆಲ್ಲ ನಿರ್ಮೂಲ ಮಾಡುವೆನೆಂದು ಹೇಳಿಕೊಳ್ಳುತ್ತಿರುವೆನು. ಆದರೆ ಹೇಡಿತನ ನನ್ನನ್ನು ಇನ್ನೂ ಬಿಟ್ಟಿಲ್ಲವಲ್ಲ! ಆತ್ಮದರ್ಶನವನ್ನು ಸಾಧಿಸಿಯೇ ತೀರುವೆನೆಂದು ಸಾರಿರುವೆನಾದರೂ ಮನದ ಚಂಚಲತೆ ಇನ್ನೂ ಹೋಗಿಲ್ಲವಲ್ಲ!"

ಭೂರಿಮತಂಗಳಂ ತಿಳುವುದುಂ ಪಲರಂ ಮತಿದೋರಿ ಧರ್ಮದೊಳ್ |
ಸೇರಿಪುದುಂ ಮಹೋಗ್ರ ತಪದೊಳ್ಪಟುವಪ್ಪುದುಮಾತ್ಮನಂ ಮನೋ ||
ರಾಗದೊಳೀಕ್ಷಿಸುತ್ತೆ ಭವಬಂಧಮನಿಕ್ಕುವ ಬುದ್ಧಿ ಸುಮ್ಮನೆ |
ಬಾರದದರ್ಕೆ ನಿಮ್ಮ ಕರುಣೋನ್ನತಿ ಬೇಕಪರಾಜಿತೇಶ್ವರಾ || ೨೪ ||

"ನಾನಾ ಧರ್ಮಗಳ ರಹಸ್ಯವನ್ನು ಗ್ರಹಿಸಬೇಕಾದರೆ, ಹಲವರನ್ನು ಸುಧಾರಿಸಿ ಧರ್ಮಮಾರ್ಗದಲ್ಲಿ ನೆಲೆಗೊಳಿಸಬೇಕಾದರೆ, ಉಗ್ರತಪದಲ್ಲಿ ಪ್ರವೀಣನಾಗಬೇಕಾದರೆ, ಆತ್ಮನನ್ನು ಆನಂದದಿಂದ ಸಂದರ್ಶಿಸಿ ಭವಬಂಧನದ ಬೆಸುಗೆಯನ್ನು ಬಿಡಿಸಬೇಕಾದರೆ ದೇವಾ, ನಿನ್ನ ಕೃಪೆಯಿರಬೇಕಪ್ಪ!"—ಭಕ್ತಿಪಂಥದ ಪ್ರಭಾವ ರತ್ನಾಕರನ ಮೇಲೆ ಸಾಕಷ್ಟು ಬಿದ್ದಿದೆ. ಶಿವಶರಣರ ಹರಿದಾಸರ ಮಾರ್ಗವನ್ನು ಕಂಡು ರತ್ನಾಕರ ಮೆಚ್ಚಿಕೊಂಡಿರುವನು; ಭಕ್ತಿಯ ಪ್ರವಾಹವನ್ನು ಹರಿಸಿ ಜಿನಧರ್ಮವನ್ನು ಸುಧಾರಿಸಲು ರತ್ನಾಕರ ಹೆಣಗಾಡಿರುವನು. ಕಾಲಲಬ್ಧಿಯೆನ್ನುವ[೨] ಮಾತಿಗೆ ಬದಲಾಗಿ ಪರಮಾತ್ಮನ ಕೃಪೆಯೆಂದು ಬಳಸಿರುವುದೇ ಭಕ್ತಿಪಂಥದ

೧. ಬ. ವ. ೪೭.

೨. ಆತ್ಮೋದ್ಧಾರಕ್ಕಾಗಿ ತಳಮಳವೇಳುವ ಸುಸಂದರ್ಭಕ್ಕೆ ಕಾಲಲಬ್ಧಿಯೆನ್ನುವರು.

ಪ್ರಭಾವಕ್ಕೆ ಸಾಕ್ಷಿಯಾಗಿದೆ. ಕರ್ಮಗಳು ಉಪಶಮವಾದಾಗ ಆತ್ಮೋನ್ನತಿಯ ಚಿಂತೆ ಜೀವಕ್ಕೆ ತಾನಾಗೆ ಬರುವುದು. ಇಂಥ ಸಂದರ್ಭವನ್ನೇ ಕಾಲಲಬ್ಧಿಯೆನ್ನುವುದು.

ಜೈನಧರ್ಮದ ಶುದ್ಧ ನಿಶ್ಚಯಮಾರ್ಗ ಪೌರುಷಪೂರ್ಣವಾದುದಾದರೂ ಸಾಮಾನ್ಯ ಚೇತನಗಳಿಗೆ ಇದು ಹಿಡಿಸುವುದು ಕಷ್ಟ. ನಿರಾತಂಕವಾಗಿರಬೇಕಾದರೆ ಎರಡು ಮಾರ್ಗಗಳಿವೆ. ಒಂದು ತಾಯ ಕಂಕುಳಲ್ಲಿರುವ ಕೂಸಿನಂತೆ ಪರಮಾತ್ಮನ ಮೇಲೆ ಭಾರಹಾಕಿ ಹಾಯಾಗಿರುವುದು; ಇನ್ನೊಂದು ಒರೆಯಿಂದ ಕಳಚಿದ ಖಡ್ಗವನ್ನು ಹಿಡಿದುಕೊಂಡು ಜಳಪಿಸುತ್ತ ಅಸಹಾಯ ಶೂರನಾಗಿ ವಿಜೃಂಭಿಸುವುದು. ಮಗು ತನ್ನ ಭಾರವನ್ನು ತಾಯಿಯ ಮೇಲೆ ಹಾಕಿ ಭರವಸೆಯಿಂದ ನಿರ್ಭಯವಾಗಿರುವುದು; ಶೂರಾಗ್ರೇಸರನಿಗಾದರೋ ತನ್ನನ್ನು ತಾನು ರಕ್ಷಿಸಿಕೊಳ್ಳುವ ಪೌರುಷವಿರುವುದರಿಂದ ನಿರಾತಂಕನಾಗುವನು. ಜೈನಧರ್ಮ ಪೌರುಷವಾದಿ ಹಾಗೂ ಆಶಾವಾದಿ! ನಮ್ಮ ಏಳುಬೀಳಿಗೆ ನಾವೇ ಹೊಣೆಯೆಂದೂ, ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕೆಂದೂ ಒತ್ತಿಒತ್ತಿ ಹೇಳುತ್ತದೆ. ಜೀವಿಯ ಆಗುಹೋಗುವಿನ ಮೇಲೆ ಅನ್ಯರ ಕೈವಾಡವನ್ನು ಜಿನಧರ್ಮ ನಿಶ್ಚಯದೃಷ್ಟಿಯಿಂದ ಒಪ್ಪುವುದಿಲ್ಲ. "ವಾಸ್ತವಿಕ ಅಥವಾ ಕಾಲ್ಪನಿಕವಾದ ಅತಿಮಾನುಷಶಕ್ತಿಯ ಬಳಿ ಮಾನವರು ವರವನ್ನು ಅಂಗಲಾಚುವಂತೆ ಜಿನಧರ್ಮ ಎಂದೂ ಪ್ರೇರೇಪಿಸಲಾರದು....ಜಿನಧರ್ಮವನ್ನು ಪರಿಪಾಲಿಸುವವರನ್ನೆಲ್ಲ ಪರಮಾತ್ಮರನ್ನಾಗಿ ಮಾಡುವುದೇ ಇದರ ಗುರಿಯಾಗಿದೆ....ಈ ಧರ್ಮವನ್ನು ಅನುಸರಿಸಿದಾತ ಅನ್ಯದೇವತೆಯ ದಾಸನಾಗದೆ ಕೊನೆಗೆ ತಾನೇ ದೇವನಾಗಿ, ಅನಂತಸುಖಿಯಾಗಿ ಸಿದ್ಧಲೋಕದಲ್ಲಿ ನಿತ್ಯಪದವಿಯನ್ನನುಭವಿಸದಿರನು![೧]"

ಕುಡುವ ಸಮರ್ಥರಾರಖಿಳಲೋಕಕೆ ನೀ ಪೊರಗಾಗಿ ಮಾನವಂ |
ಪಡೆವ ಪದಂಗಳಾವುವು ತಪಂ ಶ್ರುತಮುಂ ಪೊರಗಾಗಿ ಬಲ್ಲವಂ ||
ಪಿಡಿವ ಸುವಸ್ತುವಾವುದು ಮಣಿತ್ರಯಂ ಪೊರಗಾಗಿ ಸೋಲ್ತು ಕ |
ಣ್ಣಿಡುವೆಡೆ ಯಾವುದಾತ್ಮವಿಭವಂಪೊರಗಾಗಪರಾಜಿತೇಶ್ವರಾ || ೨೫ ||

ರತ್ನಾಕರನಿಗೆ ಭಕ್ತಿಮಾರ್ಗ ತುಂಬ ಪ್ರಿಯವಾದುದು. ವ್ಯವಹಾರದೃಷ್ಟಿಯಿಂದ, ಸಾಮಾನ್ಯರ ಗಮನವನ್ನು ಭಗವಂತನ ಕಡೆ ಸೆಳೆಯುವುದಕ್ಕಾಗಿ ಭಕ್ತಿಮಾರ್ಗವನ್ನು ಸರ್ವಾಂಗಸುಂದರವಾಗಿ ಪ್ರತಿಪಾದಿಸಿರುವನು. ಜ್ಞಾನಮಾರ್ಗದ ಕಠಿಣದ ದಾರಿಯಲ್ಲಿ ಭಕ್ತಿಯ ಸಾಲುಮರಗಳನ್ನು ನೆಟ್ಟು ಪ್ರಯಾಣಿಕರಿಗೆ ತಂಪು ಮಾಡಿದವರಲ್ಲಿ ರತ್ನಾಕರ ಅಗ್ರಗಣ್ಯ.[೨] "ದೇವ, ಲೋಕಕ್ಕೆ

೧. Jainism aims, not at turning mankind into an army of hungry beggars constantly begging for boons from some real or imaginary superhuman agency ....But at raising every one who cares to follow its method to the supreme status of godhood....In other words, those who follow Jainism become not attendants upon any real or mythological god or goddess, but Gods themselves, and, endowed with omniscience and all other divine qualities, live for ever in the enjoyment of perfect freedom and bliss—C. R. Jain, Introduction, *Ratnakarnada Sravakachara*, pages VII-VIII.

೨. ಜೈನಧರ್ಮವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಾತನ್ನು ಹೇಳಿರುವೆನು.

ಸುಖಸಂಪದವನ್ನು ಕೊಡುವವರು ನಿನ್ನನ್ನುಳಿದು ಮತ್ತಾರಿರುವರು? ತಪಸ್ಸು ಮತ್ತು ಶಾಸ್ತ್ರವನ್ನು ಮರೆತು ಮಾನವ ಪಡೆವ ಪದವಿಯೇನಿದೆ? ರತ್ನತ್ರಯವನ್ನುಳಿದು ಜ್ಞಾನಿ ಬಯಸಬಹುದಾದುದೇನಿದೆ? ಆತ್ಮನ ಅನಂತಸಿರಿಯೊಂದನ್ನು ಬಿಟ್ಟರೆ ಇನ್ನೆಲ್ಲಿ ಮನಸೋತು ಕಣ್ಣಿಡಬಹುದು?—ಇಲ್ಲಿ ರತ್ನಾಕರ ಭಕ್ತಿಮಾರ್ಗವನ್ನೂ ಜ್ಞಾನಮಾರ್ಗವನ್ನೂ ಯುಕ್ತಿಯಿಂದ ಬೆಸದಿರುವನು. “ಆರಿಂದಾದುದೊ ರಾಜ್ಯಲಕ್ಷ್ಮಿಯದು ನಿಮ್ಮಿಂದಾದುದು!....ಆಚರಣಕ್ಕೆ ನೀನೇ ಪತಿ! ನಿನ್ನಮಾಣ್ದವಂ ಕಷ್ಟಸಂಸಾರಾಂಬೋಧಿಯಂ ದಾಂಟಲೇನರಿವನೆ?....[೧]” ಎಂದು ಈ ಹಿಂದಾಗಲೆ ರತ್ನಾಕರಶತಕದಲ್ಲಿ ಮನಮುಟ್ಟುವಂತೆ ಜಿನಭಕ್ತಿಯನ್ನು ಹರಿಸಿರುವನು. ಈ ಶತಕಗಳೆರಡರಲ್ಲೂ ಭಕ್ತಿವೃಕ್ಷ ಆಳವಾಗಿ ಬೇರು ಬಿಟ್ಟಿದೆ. ರತ್ನಾಕರ ಭಕ್ತಿವೃಕ್ಷವನ್ನು ನಟ್ಟು, ಭೋಗದ ಶಾಖೋಪಶಾಖೆಗಳನ್ನು ಹರಡಿಸಿ ಕೊನೆಯಲ್ಲಿ ವಿರಕ್ತಿಯ ಫಲವನ್ನು ಬಿಡಿಸುವಂಥ ಕಲೆಗಾರ! ಅಂಥ ದೈವಿಕ ಕಲೆಯನ್ನು ಕಾಣಬೇಕಾದರೆ ನಾವು ಮತ್ತೆ ಭರತೇಶ ವೈಭವಕ್ಕೇ ಹೋಗಬೇಕು.

ಬಯಸದೆ ನಿನ್ನನೋಡಿದರೆ ಮೂಲೋಕವಿ | ಸ್ಮಯ ಭೋಗಗಳ ತಂದುಕೊಡುವಾ ||
ನಿಯಮದುದಾರಶೀಲನೆ ನನ್ನೊಳಿರು ಸುಖಿ | ಮಯನೆ ಚಿದಂಬರ ಪುರಷಾ[೨] || ೧೩೬ ||
ಸಿರಿಗೇನು ಕಡಮೆ ಸಿಂಗರಕೇನು ಕಡಮೆ ಸೌಂ | ದರಕೇನು ಕಡಮೆ ನೀನಿರಲು ||
ಎರವಿಲ್ಲದೆನ್ನಂತರಂಗದೊಳಿರು ಪ್ರಬಂ | ಧುರನೆ ಚಿದಂಬರಪುರುಷ[೩] || ೯೪ ||
ಈವರದೇವ ಕಾವರದೇವ ನಿಜಭವ್ಯ ಜೀವರದೇವ ಮನ್ಮತಿಗೆ ||
ಪೀವರದೇವ ಸನ್ಮತಿದೋರು ದೇವರ | ದೇವ ನಿರಂಜನಸಿದ್ಧಾ[೪] || ೧ ||

ರತ್ನಾಕರನಿಗೆ, ಕೋರೈಸುವ ಜ್ಞಾನಮಾರ್ತಾಂಡಪ್ರಭೆಗಿಂತ, ಭಕ್ತಿಯ ಬೆಳದಿಂಗಳಿನ ಮೇಲೆ ಪ್ರೇಮ ಹೆಚ್ಚು. ಭರತೇಶವೈಭವದುದ್ದಕ್ಕೂ ಭಕ್ತಿಯ ಹೆದ್ದೊರೆ ಭೋರ್ಗರೆವುದನ್ನು ಯಾರು ಬೇಕಾದರೂ ಗಮನಿಸಬಹುದು. ಅಲ್ಲಿ ಭಕ್ತಿ ಬರುಬರುತ್ತ ವಿರಕ್ತಿಗೆ ಹತ್ತಿರವಾದರೆ ಶತಕದಲ್ಲಾದರೊ ವಿರಕ್ತಿಯೇ ಭಕ್ತಿಯ ಕಡೆಗೆ ಸಾಗಿದೆ.

ಸಿದ್ಧಿಗನುಗುಣವಾಗಿ ಸಾಧನೆ ಮಾಡದಿದ್ದರೆ ಹೇಗೆ? ಸಾಧನೆ ಮಾಡುವಾಗ ಸಂದರ್ಭೋಚಿತವಾದ ಪರಿಶ್ರಮಕ್ಕೆ ಅಳುಕಿದರಾದೀತೆ?

ಪುಟವಿಡುವಲ್ಲಿ ಕಿಚ್ಚಿನುರಿಗಂಜಿದೊಡಾ ಕನಕಕ್ಕೆ ಕೂಡಿದಾ |
ಕುಟಿಲತೆ ಪೋಕುಮೇ? ಮಲಕಲಂಕಮನೂದಿ ಕಳಲ್ಚಿ ಕಾಂತಿಸಂ ||
ಪುಟದೊಳಗಾತ್ಮನಂ ನಿಲಿಸಿ ನಿರ್ಮಲನಾಗುವೆನೆಂಬ ಭವ್ಯನು |
ತ್ಕಟತಪದುಬ್ಬೆಗಳ್ಕಿದೊಡೆ ಸಿದ್ಧಿಪುದೇ ಅಪರಾಜಿತೇಶ್ವರಾ || ೨೬ ||

ಪುಟಕ್ಕಿಟ್ಟಾಗ ಬಂಗಾರ ತಕತಕ ಕುದಿಯುವುದೇನೊ ನಿಜ. ಆದರೆ ಆ ಕಿಚ್ಚಿನುರಿಗೆ ಅದು ಸಹಿಸಲಾರದೆಂದು ತೆಗೆದರೆ ಅಪರಂಜಿಯಾದೀತೆ? ಕರ್ಮಮಲವನ್ನು ನೀಗಿಕೊಂಡು ಅಕಲಂಕನಾಗಬೇಕಾದರೆ ಆತ್ಮನನ್ನು ಕಾಂತಿಸಂಪುಟದಲ್ಲಿ ನೆಲೆಗೊಳಿಸಿ ನಿರ್ಮಲನಾಗಬೇಕಾದರೆ ತಪದ

೧. ರತ್ನಾ. ಶ. ೭೮   ೨. ಭ. ವೈ. ೧೦ನೇ ಸಂ;
೩. ಭ. ವೈ. ೭೨ ನೇ ಸಂ;   ೪. ಭ. ವೈ. ೭೬ನೇ ಸಂ.

ಬೇಗೆಯನ್ನು ಸಹಿಸಿದರೆ ತಾನೆ? ಇಲ್ಲದಿದ್ದರೆ ಸಿದ್ಧಿ ಹೇಗೆ ದೊರೆತೀತು?—ಎಂದು ರತ್ನಾಕರ ಲೋಕ ಒಪ್ಪುವಂತೆ ತರ್ಕಬದ್ಧವಾಗಿ ಪ್ರಶ್ನಿಸಿರುವನು. ವ್ಯಾವಹಾರಿಕವಾಗಿ ಅಧ್ಯಾತ್ಮವನ್ನು ಪ್ರತಿಪಾದಿಸಿರುವನು. ಸಾಮಾನ್ಯರ ಮನವೊಲಿಸಲು ಇದು ಸಾಧುವಾದ ಮಾರ್ಗವೂ ಅಹುದು. ಭಗವಾನ್ ಕುಂದಕುಂದಾಚಾರ್ಯರು ಇಂಥ ಮಾರ್ಗವನ್ನೇ ಅನುಮೋದಿಸಿರುವನು. “ಅನಾರ್ಯರು, ಅನಾರ್ಯ ಭಾಷೆಯ ಮುಖಾಂತರವೇ ತಿಳಿವಳಿಕೆಯನ್ನು ಹೊಂದಬಲ್ಲರು; ಸುಸಂಸ್ಕೃತ ಭಾಷೆಯಿಂದ ಅವರಿಗೆ ಬೋಧಿಸಲು ಕಷ್ಟವಾಗುವುದು. ಹಾಗೆಯೇ ಪರಮಾರ್ಥವನ್ನೂ ಕೂಡ ವ್ಯವಹಾರದ ಮುಖಾಂತರವೇ ಜನರಿಗೆ ಉಪದೇಶಿಸಬೇಕಾಗಿದೆ. ವ್ಯವಹಾರವನ್ನುಳಿದು ಪರಮಾರ್ಥವನ್ನು ವಿವರಿಸುವುದು ಕಷ್ಟ.[೧]”

ಲಂಪಟತನಕ್ಕಾಗಿ ಅನಂತಜನುಮಗಳು ಮೀಸಲಾಯಿತಲ್ಲ ಎಂದು ರತ್ನಾಕರ ತನ್ನ ಭವಪರಂಪರೆಯನ್ನು ನೆನೆದು ಪರಿತಪಿಸುವನು.

ರಾಗಕೆ ರೋಷಕಾಗಿ ಲಲನಾದಿ ವಿಯೋಗದೊಳುಗ್ರ ಯುದ್ಧದೊಳ್ |
ನೀಗಿದೆನಂಗಕೋಟಿಗಳನಂತದರಿಂ ಭವರೋಗಿಯಾದೆನಾ ||
ರೋಗದ ಮೂಲಮಂ ಸುಡುವ ಘೋರತಪಂದಳೆದೊಂದು ಕಾಯಮಂ |
ತ್ಯಾಗಿಸಲಂಜುತಿರ್ದಪೆನಲಾ ಧೃತಿದೋರಪರಾಜಿತೇಶ್ವರಾ || ೨೭ ||

“ಪ್ರಣಯಾಸಕ್ತನಾದ ನಾನು ಲಲನೆಯರ ವಿಯೋಗವಾದಾಗ ವಿರಹದಿಂದ ವಿಹ್ವಲಗೊಂಡೆನು; ಘೋರ ಯುದ್ಧಗಳಲ್ಲಿ ರೋಷಾವೇಶಗೊಂಡು ಕಾದಾಡಿದೆನು; ಈ ಮಹತ್ಕಾರ್ಯಗಳಿಗಾಗಿ ಒಂದೇ, ಎರಡೇ, ಕೋಟಿ ಕೋಟಿ ಜನುಮಗಳನ್ನು ನೀಗಿಕೊಂಡೆನಲ್ಲ! ಇಷ್ಟೆಲ್ಲ ಬಾಳ್ಗೇಡಿಯಾಗಿ ನಾನು ಸಾಧಿಸಿದ್ದಾದರೂ ಏನು? ಬೆಂಬಿಡದ ಭವರೋಗವನ್ನು ತಾನೆ? ಭವರೋಗದ ತಾಯ್ಬೇರನ್ನೇ ಕೊಯ್ವಂಥ ತಪಸ್ಸಿಗಾಗಿ ಒಂದು ಜನುಮವನ್ನಾದರೂ ತೇಯಲು ಹಿಂಜರಿಯುತ್ತಿರುವೆನಲ್ಲ! ಅಪರಾಜಿತೇಶ್ವರಾ, ನನ್ನಲ್ಲಿ ನೀನಾದರೂ ಧೈರ್ಯವನ್ನು ತುಂಬಬಾರದೆ?—ರತ್ನಾಕರನೊಬ್ಬನೇ ಅಲ್ಲ ಜಗತ್ತಿನ ಜೀವಕೋಟಿಯೆಲ್ಲ ಭವರೋಗದಿಂದ ನರಳುತ್ತಿದೆ. ಆದರೆ ಎಷ್ಟು ಜನ ಈ ರೋಗದಿಂದ ವಿಮುಕ್ತರಾಗಲು ಔಷಧಿಯನ್ನರಸಿರುವರು? ಹೊರಟವರಲ್ಲೆಷ್ಟು ಜನ ಔಷಧಿಯನ್ನು ಪಡೆದಿರುವರು? ಪಡೆದವರಲ್ಲೆಷ್ಟು ಜನ ಔಷಧಿಯನ್ನು ಕುಡಿದು ಕಟ್ಟುನಿಟ್ಟಾಗಿ ಪಥ್ಯವನ್ನು ಮಾಡಿರುವರು? ಹೋಗಲಿ, ಕುಡಿದವರಲ್ಲೆಷ್ಟು ಜನ ದಕ್ಕಿಸಿಕೊಂಡಿರುವರು?

ಕುರಿ ಕೊಲ್ಲುವವನನ್ನೇ ನಂಬುವುದು. ನಾವೂ ಕೂಡ ನಮಗೆ ಚಿರಪರಿಚಿತವಾದ ಹುಟ್ಟು ಸಾವಿನ ನಿಟ್ಟಿನಲ್ಲೇ ನಡೆಯುತ್ತಿರುವೆವು. ಸಂಸಾರಕ್ಕೂ ನಮಗೂ ಜನುಮಜನುಮದ ಚಿರಸಂಬಂಧವಿರುವಾಗ ಒಮ್ಮೆಗೇ ನಡೆವ ದಿಕ್ಕನ್ನಾಗಲಿ ದಾರಿಯನ್ನಾಗಲಿ ಮಾರ್ಪಡಿಸುವುದು ಅಷ್ಟೊಂದು ಸುಲಭವಲ್ಲ. “ಕಾಮಭೋಗಾದಿ ಕರ್ಮಬಂಧಕ್ಕೆ ಕಾರಣವಾದ ಸಂಗತಿಗಳು ಎಲ್ಲರೂ ಅನುಭವಿಸಿದವೂ ಕೇಳಿ ಪರಿಚಿತವೂ ಇರುತ್ತವೆ. ಅದರಿಂದ ಗ್ರಹಿಸಲು ಸುಲಭ

೧. ಜಹ ಣವಿ ಸಕ್ಕಮಣಜ್ಜೋ ಅಣಜ್ಜ ಭಾಸಂ ವಿಣಾಉಗಾಹೆ ಉಂ |
ತವ ವವಹಾರೇಣ ವಿಣಾ ಪರಮತ್ಥುವ ಏಸಣಾ ಮಸಕ್ಕಂ || ೮ || —ಸ. ಸಾ.

ವಾಗಿರುತ್ತವೆ. ಆದರೆ ಆತ್ಮವು ತನ್ನಲ್ಲಿ ತಾನು ಐಕ್ಯವಾಗುವುದನ್ನು ಬಹುಜನರು ಅನುಭವಿಸದೇ ಇರುವುದರಿಂದ ಅದು ಸುಲಭವೆನಿಸುವುದಿಲ್ಲ."[1]"

ರತ್ನಾಕರ, ಸಿದ್ಧನಾಗಲು ತವಕಪಡುವಾಗ ಒಂದೊಂದು ಚಣವು ಆತನ ಪಾಲಿಗೆ ಯುಗವಾಗುವುದು; ಕಳವಳದಿಂದ ಬಸವಳಿದು ಮೊರೆಯಿಡುವನು.

ಪೋಗದೆ ಪೋದಪೋದ ಭವಕೋಟಿಗಳೊಳ್ಬಳಿಸಂದು ಕೊಂದು ತಾಂ |
ಕೂಗುವ ಮೋಹರಾಕ್ಷಸನನುಗ್ರತಪೋಭರ ಧೀರನಾಗಿ ನಾಂ ||
ತಾಗುವೆನೆಂದು ತಳ್ತಿರಿದು ಗೆಲ್ವೆನದೆಂದು ಜಗಕ್ಕೆ ಮಿತ್ರನಾ |
ನಾಗುವೆನೆಂದು ನಿನ್ನೆಡೆಯನೆಯ್ದುವೆನೆಂದಪರಾಜಿತೇಶ್ವರಾ || ೨೮ ||

ದೇವ, ಈ ಮೋಹರಾಕ್ಷಸನ ಅವಾಂತರ ಹೇಳತೀರದು; ಜನುಮಜನುಮದಲ್ಲೂ ಬೆನ್ನುಹತ್ತಿ ಬಂದು ನನ್ನನ್ನು ಕೊಲ್ಲುತ್ತಿರುವನಲ್ಲ! ನಾನು ಉಗ್ರ ತಪೋಭರಧೀರನಾಗುವುದೆಂದಯ್ಯ? ಮೋಹರಾಕ್ಷಸನನ್ನಿದಿರಿಸಿ ಹಣಾಹಣಿಯಾಡಿ ಯಾವಾಗ ಗೆದ್ದೇನಪ್ಪ? ಲೋಕಕ್ಕೆ ಎಂದಿಗೆ ಆಪ್ತನೆನಿಸೇನು? ನಿನ್ನೆಡೆ ನನ್ನನ್ನು ಯಾವಾಗ ಕರೆಸಿಕೊಳ್ಳುವ ತಂದೆ?—ಇಲ್ಲಿ ರತ್ನಾಕರನ ಕಳವಳಕ್ಕೆ ಕಲೆಯ ರಂಗೇರಿದೆ! ಕಾತರತೆಗೆ ಕೋಡು ಮೂಡಿದೆ!

ಏಕೆನ್ನಂ ನೋಡದಯ್ಯೋ ಭವ ಭವ ಭವದೊಳ್ ತಂದೆ ಚಂದ್ರಾವತಂಸಾ |
ಏಕೆನ್ನಂ ಮಾಯೆಯಿಂದಂ ಶಿವ ಶಿವ ಶಿವ ಬೆಳ್ಮಾಡುತಿರ್ದಪ್ಪೆ ಈಶಾ ||
ಏಕೆನ್ನಂ ಕಾಲನಿಂದಂ ಹರ ಹರ ಹರ ನೀಂ ಕಾಡುತಿರ್ದಪ್ಪೆ ದೇವಾ |
ಲೋಕೈಕಾರಾಧ್ಯ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ[2] ||

ಚಂದ್ರಶೇಖರ, ಏಕಪ್ಪ ನನ್ನನ್ನು ಹುಟ್ಟುಸಾವಿನ ಗೊಂದಲದಲ್ಲಿ ನರಳಿಸುತ್ತಿರುವೆ? ಶಿವ, ಏಕಯ್ಯ ನನ್ನನ್ನು ಮಾಯೆಯಿಂದ ಬೆಪ್ಪುಮಾಡುತ್ತಿರುವೆ? ಈಶ, ನನ್ನನ್ನೇಕೆ ಯಮನಿಂದ ಕಾಡಿಸುತ್ತಿರುವೆ? ದೇವ, ಜಗತ್ಸ್ವಾಮಿ, ಪಂಪಾಪುರದರಸ ವಿರೂಪಾಕ್ಷ ನನ್ನನ್ನು ಕಾಪಾಡಯ್ಯ! —ಎಂದು ಹರಿಹರ ಬೊಬ್ಬೆಹಾಕುವುದಕ್ಕೂ ಇತ್ತ ರತ್ನಾಕರ ಜಿನೇಂದ್ರನನ್ನು ಅಂಗಲಾಚುವುದಕ್ಕೂ ಏನಾದರೂ ವ್ಯತ್ಯಾಸವಿದೆಯೆ?

ಹೇವರಮಂ ಕ್ಷಣಾಂತರಕೆ ತೋರ್ಪ ಸುಖಕ್ಕೊಲವಿಂದೊ ನಾಳೆಯೋ |
ಸಾವ ಜನಂಗಳೊಳ್ಮಮತೆ ಮತ್ಸರವೀಗಳೊ ಬೈಗಿನಾಗಳೋ ||
ಜೀವ ಶರೀರದೊಳ್ಬರ್ದುಕುವಾಸೆ ವಿರಕ್ತಿಯೊಳಾತ್ಮ ತತ್ವಮಂ |
ಭಾವಿಸಿ ಮುಕ್ತನಾಗಲರಿದಾಯ್ತುಕಟಾ ಅಪರಾಜಿತೇಶ್ವರಾ || ೨೯ ||

ಮರುಚಣದಲ್ಲಿ ಜುಗುಪ್ಸೆಯನ್ನುಂಟುಮಾಡುವ ಲೌಕಿಕಸುಖಕ್ಕೆ ಬಾತುಬಾಯಿ ಬಿಡುವೆವು! ಇಂದೋ ನಾಳೆಯೊ ಸುಡುಗಾಡಿಗೆ ಹೋಗುವಂಥವರಲ್ಲಿ ಮಮತೆಯೇನು, ಮಾತ್ಸರ್ಯವೇನು? ಈಗಲೋ ತಪ್ಪಿದರೆ ಸಂಜೆಗೆ ಬೆಂದುಹೋಗುವ ದೇಹದೊಡನೆ ಬಾಳಲು ಹೆಣಗಾಟವೆಪ್ಪು! ಇದರಿಂದಲೇ ನಮಗೆ ವಿರಕ್ತಿಯೂ ಉಂಟಾಗದು; ಆತ್ಮತತ್ತ್ವವನ್ನೂ ಅರಿಯೆವು; ಮುಕ್ತಿಯನ್ನೂ ಕಾಣೆವು!—ಆವೇಶಗೊಂಡು ಮಾನವರ ಹಾಗೂ ತನ್ನ ಮರಳ್ತನಕ್ಕೆ ರತ್ನಾಕರ ಬಣ್ಣಕಟ್ಟಿರುವನು. ಇಂಥ ಜುಗುಪ್ಸೆ ಬಂದ ಹೊರತು, ಬಹುಕಾಲದಿಂದ ನಮ್ಮ ಅತಿಥಿಯಾಗಿ, ಸತ್ಕರಿಸಿಕೊಳ್ಳುತ್ತಿರುವ ಮೋಹಾಸುರ ಕಾಲ್ತೆಗೆಯಲಾರನು. ಬೇರುಬಿಟ್ಟಿರುವ ಆ ನಮ್ಮ ಅತಿಥಿ ಮರ್ಯಾದೆಯಿರುವ, ಮನ್ನಣೆಯಿರುವ ಸ್ಥಳವನ್ನು ಏಕೆ ಬಿಟ್ಟುಹೋದಾನು? "ತನುವೇಂ ತಾಮ್ರನಿವಾಸಮೋ ಮಳಲ ಬೆಟ್ಟೊಳ್ತೋಡಿ ಬೀಡಂ ಮರುಳ್ಮನಂ ಒಲ್ದಿರ್ಪವೊಲಿಂದೊ ನಾಳೆಯೊ ತೊಡಂಕೇಂ ನಾಳಿದೋ ಈಗಳೋ....ರತ್ನಾಕರಾಧೀಶ್ವರಾ!"[1]" ರತ್ನಾಕರಶತಕದ ಈ ವೃತ್ತವನ್ನು ಅಪರಾಜಿತಶತಕದ ಶ್ಲೋಕದೊಡನೆ ಹೋಲಿಸಿ ನೋಡಬೇಕು. ಎರಡರ ಕಟ್ಟಡವೂ ಒಂದೇ ಮಾದರಿಯದಲ್ಲವೆ? ಎರಡರ ರಚನಾಕಾರನೂ ಒಬ್ಬನೇಯೆಂದು ಎಂಥ ಗಾಂಪನಾದರೂ ಹೇಳದಿರಲಾರ!

ರೋಗಿಗಪಥ್ಯಮೇ ರುಚಿಯೆನಿಪ್ಪುದು ವೈದ್ಯಮೆ ಕೈಪೆಯಾದೊಡಾ |
ರೋಗವಿನಾಶಕಾವುದು ಹಿತಂ ಮನುಜಂಗದರಂತೆ ಭೋಗಮೇ ||
ರಾಜಿಸುತಿರ್ಕುಮಾದೊಡಮದಂ ಕಡೆಗೊತ್ತಿ ತಪೋವ್ರತಾಗಮೋ |
ದ್ಯೋಗದೊಳಾದದಿರ್ದೊಡವನೇಂ ಕಿಡನೇ ಅಪರಾಜಿತೇಶ್ವರಾ || ೩೦ ||

"ರೋಗಿಗೆ ಅಪಥ್ಯವೇ ಸವಿಯಾಗಿ, ಔಷಧವೇ ಕಹಿಯೆನಿಸಿದರೆ ಆ ರೋಗ ನಿವಾರಣೆಯಾಗುವುದೆಂತು? ಅಂತೆ ಭೋಗೋಪಭೋಗದಲ್ಲಿ ಮಾನವ ಓಲಾಡಿಕೊಂಡು, 'ತಪಸ್ಸು', 'ನೋಂಪಿ'[2] ಮತ್ತು ಆಗಮಗಳನ್ನು ಕಡೆಗಣಿಸಿದಂದು ಹಾಳಾಗದಿರುತ್ತಾನೆಯೆ?"

ನಾಗನರಾಮರೇಂದ್ರರ ಸುಖಂ ಸಿರಿಯುಂ ನಿಜದಿಂದೆ ಭಾವಿಸಲ್ |
ಜೋಗಿಮಹೇಂದ್ರಜಾಲದ ಕುಮಂತ್ರದೆ ತೋರಿದ ಮಾಮರಂಗಳೊಳ್ ||
ತೂಗುವ ಪಣ್ಗಳಂ ಸವಿದೆನೆಂಬನ ಸಂಭ್ರಮದಂತೆ ಕರ್ಮ ಸಂ |
ಯೋಗದಿನಾಯ್ತು ಪೋಯ್ತೆನಿಸುಗುಂ ಪಿರಿದೇನಪರಾಜಿತೇಶ್ವರಾ || ೩೧ ||

ದೇವತೆಗಳನ್ನು ಅಮರರೆನ್ನುವುದಾಗಲಿ, ಅವರ ಸಂಪದವನ್ನು ಸ್ಥಿರವೆನ್ನುವುದಾಗಲಿ ಮೂರ್ಖತನವೆನ್ನುತ್ತಾನೆ ರತ್ನಾಕರಯೋಗಿ! "ಭೋಗೀಂದ್ರ, ನರೇಂದ್ರ, ಅಮರೇಂದ್ರ ಇವರ ಸುಖವೂ ಸಂಪದವೂ ಮಹೇಂದ್ರಜಾಲದಿಂದ ಅಂದರೆ ಕಣ್ಣುಕಟ್ಟುವಿದ್ಯೆಯಿಂದ ಕಾಣಿಸಿಕೊಂಡ ಮಾವಿನಮರದಲ್ಲಿ ಜೋಲಾಡುವ ಮಾಟದ ಹಣ್ಣುಗಳಿದ್ದಂತೆ! ಅಂಥ ಹಣ್ಣನ್ನು ಸವಿದು ಪಡೆವ ಸಂಭ್ರಮದಂತೆ ಮೇಲಿನವರ ವೈಭವವೆಲ್ಲ ಕೇವಲ ಭ್ರಮೆ! 'ಪುಣ್ಯಕರ್ಮ'ದಿಂದ ಅವೆಲ್ಲ ಕಾಣಿಸಿಕೊಂಡು ಅದು ಮುಗಿದ ಮರುಕ್ಷಣದಲ್ಲೇ ಮಾಟಮಾಯವಾಗದಿರದು" ಭರತೇಶವೈಭವದಲ್ಲೂ ರತ್ನಾಕರನ ಧೋರಣೆ ಹಾಗೂ ದಾಟಿ ಇದೇ ಆಗಿದೆ.

---

೧. ಸುದ ಪರಿಚಿದಾಣುಭೂದಾ ಸವ್ವಸ್ಸ ವಿ ಕಾಮಭೋಗ ಬಂಧ ಕಥಾ |
ಏಯತ್ತಸ್ಸುವಲಂಭೋಣವರಿ ಣ ಸುಲಹೋ ವಿಹತ್ತಸ್ಸ || ೪ || —ಸ. ಸಾ.

೨. ರತ್ನಾ. ಶ., ೫೫

೧. ರತ್ನಾ. ಶ. ೧೩.

೨. ವ್ರತಗಳಿಗೆ ಜೈನರಲ್ಲಿ 'ನೋಂಪಿ'ಯೆಂಬ ಮಾತನ್ನು ಬಳಸುವರು.

ಅನಿಮಿಷಸುಖ ನಿತ್ಯವಲ್ಲ ನರಕದ ವೇ | ದನೆ ನಿತ್ಯವಲ್ಲವವೆರಡೂ ||
ಕನಸ ಕಾಂಬಂತೆ ಕನಸ ಮರೆವಂತೆ ಜೀ | ವನ ಭ್ರಾಂತಿಯಲ್ತೆ ಹೆಚ್ಚೇನು[1] || ೬೭ ||
ಮರನೇರಿ ನಕ್ಕಾಡಿ ಕೆಳಯಿಕೆ ಬೀಳ್ವಂತೆ | ಸುರರು ಭೂತಳಕೆ ಬೀಳುವರು ||
ಧರೆಯೊಳು ಬಿದ್ದಳುತಿದ್ದು ಮೇಲಕ್ಕೆ ಬಹ ಪರಿಯೊಳು ಬಹರು ನಾರಕರು[1] || ೬೮ ||

ಭರತೇಶವೈಭವ ಮತ್ತು ಶತಕಗಳೆರಡರಲ್ಲೂ ಇಂಥ ಸಂದರ್ಭಗಳನ್ನು ರತ್ನಾಕರ ಹೃದಯ ಸ್ಪರ್ಶಿಯಾಗುವಂತೆ ಬಣ್ಣಿಸಿರುವನು. "ಅಮರೇಂದ್ರೋನ್ನತಿ, ಖೇಚರೇಂದ್ರವಿಭವಂ, ಭೋಗೀಂದ್ರ ಭೋಗಂ, ಮಹೇಂದ್ರ ಮಹಮೈಶ್ವರ್ಯಮಿವೆಲ್ಲಮಧ್ರುವಂ![2]"ಎಂದು ಪಂಪ ಮಹಾಕವಿ ದೇವಲೋಕಕ್ಕೂ ಕೇಳಿಸುವಂತೆ ಕಹಳೆಯೂದಿರುವನು!

ನಿಮ್ಮತ್ತಣ ಭಕ್ತಿಯೊಂದೆ ನಿಜಸಿದ್ಧಿಯಲಾ !

ಜಿನಭಕ್ತಿಯನ್ನು ಹರಡಿದವರಲ್ಲಿ ರತ್ನಾಕರ ಅಗ್ರಗಣ್ಯ; ಲೋಕದ ಅನುಭಾವಿಗಳಲ್ಲಿ ಈತನೂ ಒಬ್ಬ. ಈತನ ಕೃತಿಗಳಲ್ಲೆಲ್ಲ ಭಕ್ತಿರಸ ತಾನೇ ತಾನಾಗಿ ಹರಿದಿದೆ. ಜಿನಧರ್ಮದ ಜ್ಞಾನಮಾರ್ಗಕ್ಕೆ ಭಕ್ತಿಯ ರಸಲೇಪನವೆಸಗಿದ ಮಹಾಪುರುಷ ಈ ರತ್ನಾಕರ ಸಂಸಾರದಲ್ಲಿದ್ದು ಕೊಂಡೇ ನೆನೆದಾಗ ಮುಕ್ತನಾದ ಭರತೇಶನನ್ನು ಸರ್ವಾಂಗ ಸುಂದರವಾಗಿ ಕಡೆದು ಸಾಭರಣಾಂ ಕಿತ ಸಿದ್ಧನೆಂದು ಮೆರೆಸಿ ಶೃಂಗಾರಸಿದ್ಧನೆಂದು ಸಾರಿ ಜೈನಸಾಹಿತ್ಯದಲ್ಲಿ ಹೊಸ ದೃಷ್ಟಿಯನ್ನು ಬೀರಿದ ಮಹಾಕವಿ ಈ ರತ್ನಾಕರ! ಜಿನಭಕ್ತಿಯನ್ನು, ವೈಷ್ಣವದಾಸರಿಗೆ ಹೊಯ್‌ಕೈಯಾಗು ವಂತೆ, ಶಿವಶರಣರಿಗೆ ಸರಿಮಿಗಿಲಾಗುವಂತೆ ರತ್ನಾಕರ ಕನ್ನಡನಾಡಿನಲ್ಲಿ ಹರಡಿ ಜಿನಧರ್ಮದ ಮಾನವೀಯತೆಗೆ ಮೆರಗಿಟ್ಟಿರುವನು.

ಮುಕ್ತಿಯೊಳಲ್ಲದಿಲ್ಲ ಸುಖವಂತದು ಕರ್ಮವಿನಾಶವಿಲ್ಲದೆ |
ವ್ಯಕ್ತಿಗೆ ಬಾರದಾ ದುರಿತನಾಶಕೆ ದೀಕ್ಷೆಯೆಬೇಕು ಮೋಹದಾ ||
ಶಕ್ತಿಯೊಳಿರ್ದವಂಗೆ ರುಚಿದೋರದು ದೀಕ್ಷೆಯದರ್ಕೆ ನಿಮ್ಮ ಸ |
ದ್ಭಕ್ತಿಯೆ ಬೀಜಮೊಯ್ಯನದನೀವುದು ಮುಂದಪರಾಜಿತೇಶ್ವರಾ || ೩೨ ||

ವಿಷಯವನ್ನು ಮಂಡಿಸುವುದರಲ್ಲಿ ರತ್ನಾಕರ ಮಹಾನಿಪುಣ; ಅಂತೆ ಪ್ರತಿಪಾದಿಸುವು ದರಲ್ಲೂ ಪ್ರವೀಣ! "ಸುಖಕ್ಕೆ ಮುಕ್ತಿಯೇ ತೌರೂರು. ಕರ್ಮ ವಿನಾಶವಾದ ಹೊರತು ಮುಕುತಿ ಲಭಿಸುವಂತಿಲ್ಲ. ದೀಕ್ಷಾಬದ್ಧನಾದ ವಿನ ಕರ್ಮವನ್ನು ಧ್ವಂಸ ಮಾಡುವದಕ್ಕಾಗುವುದಿಲ್ಲ. ಮೋಹದಲ್ಲಿ ಮುಳುಗಿದಾತನಿಗೆ ದೀಕ್ಷೆಗೆ ಮನಸ್ಸು ಬಾರದು. ಕ್ರಮವಾಗಿ ಇವನ್ನೆಲ್ಲ ಸಾಧಿಸಿ ಕೊಳ್ಳಬೇಕಾದರೆ ಜಿನಭಕ್ತಿಯೇ ಬಿತ್ತ! ಅಪರಾಜಿತ, ನನ್ನಲ್ಲಿ ಆ ಭಕ್ತಿಯನ್ನು ಅಂಕುರಾರ್ಪಣ ಮಾಡಯ್ಯ!" ಮುಚ್ಚುಮರೆಯಿಲ್ಲದೆ ರತ್ನಾಕರ ತನ್ನ ಸಿದ್ಧಾಂತವನ್ನು ಭಕ್ತಿಯ ಬುನಾದಿಯ ಮೇಲೆ ಸ್ಥಾಪಿಸಿರುವನು. ಸ್ಪಷ್ಟವಾಗುವಂತೆ ಸಮರ್ಥಿಸಿರುವನು. ಮುಕುತಿಯ ತಾಯ್ಬೇರೇ ಬಕುತಿಯೆಂದು ಸಾರಿರುವನು. ಯುಗಧರ್ಮವಾದ ಭಗವದ್ಭಕ್ತಿಯನ್ನು ಜಿನಧರ್ಮದ

೧. ಭ. ವೈ. ೧೭ನೇ ಸಂ.
೨. ಆ. ಪು. X-೫೯.

ಶಕ್ತಿಯಾಗಿ ಆವಾಹನೆ ಮಾಡಿರುವನು. "ಉತ್ತಮ ದೀಕ್ಷಾವಿಧಿಯುಂ 'ಸಮಾಧಿಮರಣಂ' 'ಕರ್ಮಕ್ಷಯಂ' 'ಬೋಧಿಲಾಭ'ಮಮೋಘಂ ದೊರೆಕೊಳ್ವುದಕ್ಕೆಮಗೆ ಮುಕ್ತಿಶ್ರೀ ಮನೋ ವಲ್ಲಭಾ![1]" (ಉತ್ತಮವಾದ ಜಿನದೀಕ್ಷೆ ಲಭಿಸಲಿ! ಸಮಾಧಿಮರಣ ಪ್ರಾಪ್ತಿಯಾಗಲಿ! ಕರ್ಮ ವೆಲ್ಲ ಕ್ಷಯಿಸಲಿ! ಅಮೋಘವಾದ ಕೇವಲಜ್ಞಾನ ಸಿದ್ಧಿಸಲಿ! ಮುಕುತಿ ವನಿತೆಯ ಪತಿಯೆ, ಇವನೆಲ್ಲ ದಯಪಾಲಿಸು) ಎಂದು ಪಂಪ ಮಹಾಕವಿಯೂ ಪ್ರಾರ್ಥನೆ ಮಾಡಿರುವನು.

ರತ್ನಾಕರನ ದೃಷ್ಟಿಯಲ್ಲಿ ಗೃಹಸ್ಥಪದವಿ, ಮುನಿಪದಕ್ಕಾಶಿಸುವ ಪಯಣಿಗನ ಮೊದಲ ಮಜಲು (ನಿಲ್ದಾಣ). ಗೃಹಸ್ಥನಾಗಿದ್ದುಕೊಂಡೇ ಭಕ್ತಿಯ ಮೊರೆಹೊಕ್ಕು ಆತ್ಮವಿಕಾಸ ಕಾರ್ಯ ದಲ್ಲಿ ತೊಡಗಬಹುದೆಂದು ಈ ಜಿನಯೋಗಿ ಭರವಸೆ ಕೊಟ್ಟಿರುವನು.

ಶಕ್ತಿಗೆ ತಕ್ಕ ದಾನ ಗುರುಪೂಜನ ಸುವ್ರತ ಪರ್ವಕಾಲ ನಿ |
ರ್ಭಕ್ತಿಗಳಂ ನೆಗಳ್ಚುತೆ ಜಿನಾಗಮಗೋಷ್ಠಿಗಳಲ್ಲಿ ಧರ್ಮಸಂ ||
ಯುಕ್ತರ ಮೇಳದೊಳ್ ಕಳೆಯುತುಂ ದಿನಮಂ ನಡೆವಂಗೆ ಮೋಹದಾ |
ಶಕ್ತಿ ಸಡಿಲ್ದು ಪೋಪುದಿದು ಭಕ್ತಿಯಲಾ ಅಪರಾಜಿತೇಶ್ವರಾ || ೩೩ ||

"ಶಕ್ತಿಯಿದ್ದಷ್ಟು ದಾನವೆಸಗಬೇಕು, ಗುರುಪೂಜೆ ಮಾಡಬೇಕು, ನೋಂಪಿಗಳನ್ನಾಚರಿಸಿ ಪರ್ವಕಾಲದಲ್ಲಿ ಉಪವಾಸವಿರಬೇಕು, ಜಿನಾಗಮ ಗೋಷ್ಠಿ(ಸಭೆ)ಗಳಲ್ಲಿ ಹಾಗೂ ಸಾಧು ಸಂತರ ಸಹವಾಸದಲ್ಲಿ ಕಾಲವನ್ನು ಕಳೆಯಬೇಕು. ಹೀಗೆ ದಿನಚರಿಯನ್ನು ಮಾಡಿಕೊಂಡರೆ ಮೋಹಾಸುರನ ಶಕ್ತಿ ಕುಂದಿಹೋಗುವುದು. ಇದೇ ಭಕ್ತಿ ಮಾರ್ಗ!"—ಮೊದಲು ಭಕ್ತಿ ಬೆಳೆಯುತ್ತಾ ಹೋಗಬೇಕು. ಎಷ್ಟೆಷ್ಟು ಇದು ಉದ್ದೀಪನಗೊಂಡರೂ ಅಷ್ಟಷ್ಟು ಜೀವನ್ಮುಕ್ತಿ ಸದರವಾಗುವುದು.

ರತ್ನಾಕರ ಭಕ್ತಿಪ್ರಿಯ; ಜ್ಞಾನಮಾರ್ಗಕ್ಕಿಂತಲೂ ಭಕ್ತಿಮಾರ್ಗ ಸಾಮಾನ್ಯ ಚೇತನಕ್ಕೆ ಸುಲಭ ವೆಂಬುದು ಈತನ ಅನುಭವ. ಅಂದು ಕನ್ನಡನಾಡಿನಲ್ಲಿ ಹರಿದಾಸರು ತಂಬೂರಿಯನಾದದಲ್ಲಿ ಭಕ್ತಿಯನ್ನು ಹರಿಸಿ ಕನ್ನಡಿಗರನ್ನು ಆಮೋದಗೊಳಿಸುತ್ತಿದ್ದರು. ಶಿವಶರಣರು ಮನೆಮನೆಗೂ ಜಂಗಮಮೂರ್ತಿಗಳಾಗಿ ಪ್ರತ್ಯಕ್ಷರಾಗಿ ಶಿವಮಹಿಮೆಯನ್ನು ಬಿತ್ತುತ್ತಿದ್ದರು. ಪ್ರತಿಭಾಶಾಲಿ ಯಾದ ರತ್ನಾಕರನಲ್ಲೂ ವಾತಾವರಣ ತನ್ನ ಪ್ರಭಾವವನ್ನು ಬೀರಿ ಜಿನಭಕ್ತಿಯನ್ನು ಉದ್ದೀಪನ ಗೊಳಿಸಿತು. ರತ್ನಾಕರಶತಕದಲ್ಲೂ ಶ್ರಾವಕರ ಸದಾಚಾರದ ದಿನಚರಿಯನ್ನು ಈ ಯೋಗಿ ಸೊಗಸಾಗಿ ಹಾಕಿಕೊಟ್ಟಿರುವನು.

ತನುವಂ ಸಂಘದಸೇವೆಯೊಳ್ಮನಮನಾತ್ಮಧ್ಯಾನದಭ್ಯಾಸದೊಳ್ |
ಧನಮಂ ದಾನಸುಪೂಜೆಯೊಳ್ದಿನಮನರ್ಹದ್ಧರ್ಮ ಕಾರ್ಯಪ್ರವ ||
ರ್ತನೆಯೊಳ್ಪರ್ವವನೊಲ್ದು ನೋಂಪಿಗಳೊಳಿರ್ದಾಯುಷ್ಯಮಂ ಮೋಕ್ಷ ಚಿಂ |
ತನೆಯೊಳ್ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ || ೪೩ ||

ತನುಮನಧನಗಳನ್ನು ತ್ರಿಕರಣಪೂರ್ವಕವಾಗಿ ಹೇಗೆ ಸದ್ವಿನಿಯೋಗಗೊಳಿಸಬಹುದೆಂಬು ದನ್ನು ರತ್ನಾಕರ ಹೃದಯಂಗಮವಾಗಿ ವಿವರಿಸಿರುವನು. ಲೋಕ ರತ್ನಾಕರನ ಮಾತಿಗೆ ಕಿವಿ

೧. ಆ. ಪು. X-೫೯.

ಯಿತ್ತೆಂದು ಬಡವ, ಬಲ್ಲಿದರೆಂಬ ಭೇದವಳಿದು ಎಲ್ಲರೂ ಹಾಯಾಗಿರಬಹುದು.

ದಾನಧರ್ಮ ಬೋಧಿಸುವುದು ಸುಲಭ; ಅದನ್ನು ಮಾಡಿ ತೋರಿಸುವುದು ಎಷ್ಟು ಜನಕ್ಕೆ ಸಾಧ್ಯವಾದೀತು? ಸಿರಿವಂತರಲ್ಲದವರನ್ನು ದಾನಧರ್ಮಕ್ಕಾಗಿ ಬುದ್ಧಿವಂತರು ಪೀಡಿಸಲೂ ಬಾರದು. ಸಿರಿವಂತನಾಗಿದ್ದೂ ಲೋಭೇಶ್ವರರಾದರೆ ಅಂಥವನನ್ನು ಯಾರೂ ಉದ್ಧಾರ ಮಾಡಲಾರರು. ನಿರ್ಗತಿಕರಾದವರು ತಮ್ಮ ಕೈಲಿಲ್ಲವಲ್ಲ ಎಂದು ದೈನ್ಯತೆಯನ್ನು ತೋರಬೇಕಾದುದಿಲ್ಲವೆಂದು ರತ್ನಾಕರ ಧೈರ್ಯ ಹೇಳುವನು; ಈತನ ಮಾರ್ಗ ತುಂಬ ಸರಳವಾದುದು, ಬಡವ ಬಲ್ಲಿದರಿಬ್ಬರೂ ಅಕ್ಕಪಕ್ಕದಲ್ಲಿ ಅನ್ಯೋನ್ಯವಾಗಿ ಬಾಳುವಂಥದು.

ಮಾಡುವುದರ್ಕೆ ಶಕ್ತಿತನಗೊಚ್ಚತಮಿಲ್ಲದೊಡೊಲ್ದು ಧರ್ಮಮಂ |
ಮಾಡುವರಲ್ಲಿ ನೋಡಿ ಪರಿಣಾಮವನೆಯ್ದುವುದೊರ್ಮೆ ನೋಳ್ಪುದುಂ ||
ಕೂಡದೊಡಂತೆ ಕೇಳ್ದು ಸುಖಿಯಪ್ಪುದು ನಿಮ್ಮನೆನಂಬಿ ಧರ್ಮಮಂ |
ಜೋಡಿಸಿಕೊಂಬುದರ್ಕೆ ಬಿರಿಸುಂಟೆ ಜನಕ್ಕಪರಾಜಿತೇಶ್ವರಾ || ೩೪ ||

"ದಾನಧರ್ಮವೆಸಗಲು ನಿನಗೆ ಶಕ್ತಿಯಿಲ್ಲದಂದು ಮಾಡುವವರನ್ನಾದರೂ ನೋಡಿ ಸಂತೋಷಪಡು; ಅಂಥ ಮಹನೀಯರನ್ನೂ ಅಂಥ ಸಂದರ್ಭವನ್ನೂ ಕಣ್ಣಾರೆ ಕಾಣುವ ಅವಕಾಶ ಸಿಕ್ಕದಿದ್ದರೆ ಕಿವಿಯಾಲ್ಲಾದರೂ ಕೇಳಿ ನಲಿದಾಡು. ದೇವರನ್ನು ನಂಬಿ ಶುಭ ಪರಿಣಾಮದಲ್ಲಿ ಬಾಳಿ ಪುಣ್ಯವನ್ನು ಸಂಗ್ರಹಿಸುವುದಕ್ಕೆ ಅಡ್ಡಿಯೇನಾದರೂ ಇದೆಯೆ?"— ಆತ್ಮವಿಕಾಸ ಶ್ರೀಮಂತರ ಸೊತ್ತೇನಲ್ಲ; ಹಣ ತೆತ್ತು ಆತ್ಮವಿಕಾಸವನ್ನು ಮಾಡಿಕೊಂಡವರೂ ಇಲ್ಲ. ಶುಭ ಪರಿಣಾಮವೇ ಆತ್ಮೋದ್ಧಾರದ ಅಡಿಗಲ್ಲು! ಶ್ರೀಮಂತಿಕೆಯ ಮದ ಮೂಲೋತ್ಪಾಟನವಾಗಿ, ಧನಲೋಭ ಹಿಂಗದ ಹೊರತು ಶ್ರೀಮಂತರಿಗೆ ಶುಭ ಪರಿಣಾಮ ಬರಲಾರದು; ನರಳುವವರನ್ನು ಕಂಡು ಅವರ ಕರುಳು ನುಲುಚದ ಹೊರತು ಅವರಲ್ಲಿ ಮಾನವೀಯತೆ ನೆಲಸದು. ಒಂದು ದೃಷ್ಟಿಯಲ್ಲಿ ಕಡುಬಡವರು ಪುಣ್ಯವಂತರೆಂದೇ ಹೇಳಬೇಕು. ಬಡವರಾದರೇನಂತೆ ಅವರ ಅಂತರಂಗ ಶುಭಪರಿಣಾಮದ ಶ್ರೀಮಂತಿಕೆಯಿಂದ ತುಂಬಿ ತುಳುಕುವಾಗ, ಸುಸಂಸ್ಕಾರವನ್ನು ಬೆಳೆಸಿಕೊಂಡಾಗ, ಅಥವಾ ಭಕ್ತಿಪಂಥದ ಅನುಯಾಯಿಗಳಾದಾಗ ನಿರ್ಗತಿಕರಿಗೂ ನಿರಂಜನ ಪದವಿ ಕರತಲಾಮಲಕವಾಗದಿರದು! ಮೋಕ್ಷದ ಹೆಬ್ಬಾಗಿಲು ತೆರೆಯುವುದು ಸಂಸ್ಕಾರ ಸಂಪನ್ನರಿಗೇ ಹೊರತು ಬಡವರಿಗೂ ಅಲ್ಲ, ಬಲ್ಲಿದರಿಗೂ ಅಲ್ಲ!

ಎಲ್ಲರ್ಗೆ ಬಾರದೆಂದೆನಬೇಡ ಕೆಲವರೆದೆ | ಯಲ್ಲಿ ಹೊಳೆವುದಾತ್ಮಯೋಗಾ ||
ಬಲ್ಲವರಾತ್ಮ ಯೋಗವ ಮಾಡಿರರಿಯದ | ರೆಲ್ಲರವರ ಮೆಚ್ಚಿರೆಂದಾ[1] || ೯೩ ||
ಬಂದರೆ ಧ್ಯಾನಿಸಬೇಕು ಬಾರದಿರೊಲ | ವಿಂದ ಧ್ಯಾನವ ನಂಬಬೇಕು ||
ನಿಂದಿಸುತಿಹುದು ನಿರ್ಭವ್ಯರ ಗುಣವದು | ಕುಂದಿದರುಂಟೆ ಸಮ್ಯಕ್ತ್ವಾ[1] || ೧೨೫ ||

ಭರತೇಶವೈಭವದಲ್ಲೂ ರತ್ನಾಕರನ ಅಭಿಪ್ರಾಯ, ಶಕ್ತಿಯಿದ್ದವರು ಮಾಡಲಿ, ಅಶಕ್ತರು ನೋಡಿ ಸಂತಸಗೊಳ್ಳಲಿ ಎಂಬುದೇ ಆಗಿದೆ.

ವಿರಕ್ತಿ ಕೆಲವರಿಗೆ ತಾನಾಗೇ ಬರುವುದು. ಕೆಲವರು ಮತ್ತೆಮತ್ತೆ ಲೌಕಿಕ ಸುಖದ

೧. ಭ. ವೈ. ೧೭ನೇ ಸಂ.

ಅನಿತ್ಯತೆಯನ್ನು ಭಾವಿಸುತ್ತ 'ವಿರಕ್ತಿ'ಯನ್ನು ಸನಿಹಕ್ಕೆ ಕರೆದುಕೊಳ್ಳುವರು. ವಿರಕ್ತಿಯನ್ನು ಆಹ್ವಾನಿಸುವ ಪರಿಯನ್ನು ರತ್ನಾಕರ ಮನೋವಿಜ್ಞಾನದ ರೀತಿ ವಿವರಿಸಿರುವನು.

ಹವಣಿಸಿಕೊಂಬುದೊಯ್ಯನೆ ಪರಿಗ್ರಹಮಂ ಗತಿನಾಲ್ಕರಂದಮಂ |
ಶಿವಪದದಂದಮಂ ತಿಳಿಯುತಿರ್ಪುದು ಕಾಯದಕಷ್ಟಮಂ ನಿಜಾ ||
ತ್ಮ ವಿಪುಲಶುದ್ಧಿಯಂ ನೆನೆಯುತಿರ್ಪುದುಕೂಡೆ ವಿರಕ್ತಿತಾನೆ ಸಂ |
ಭವಿಪುದು ದೇಹಿಗೆಂದೊರೆವುದೋಜೆಯಲಾ ಅಪರಾಜಿತೇಶ್ವರಾ || ೩೫ ||

"ಪರಿಗ್ರಹಗಳನ್ನು ಪರಿಮಿತಗೊಳಿಸಬೇಕು; ಚತುರ್ಗತಿಗಳ ಜಂಜಾಟವನ್ನೂ ಶಿವಪದದ ಸೌಖ್ಯವನ್ನೂ ತುಲನಾತ್ಮಕವಾಗಿ ಚಿಂತಿಸಬೇಕು; ಕಾಯದ ಕಾರ್ಪಣ್ಯವನ್ನೂ ತನ್ನಾತ್ಮನ ನಿರ್ಮಲ ಸ್ವಭಾವವನ್ನೂ ಅಕ್ಕಪಕ್ಕದಲ್ಲಿಟ್ಟು ಪರಿಭಾವಿಸುತ್ತಿರಬೇಕು; ಇಂತೆಸೆದಾಗ 'ವಿರಕ್ತಿ' ಸಂಸಾರಿಯೆಡೆ ತಾನಾಗೆ ಬಾರದಿರದು!" ಜನ್ಮಜನ್ಮಾಂತರಗಳಿಂದ ಆತ್ಮನಿಗೆ ಮನಸ್ಸು ಮೋಸ ಮಾಡುತ್ತಾ ಬಂದಿದೆ. ಸಂಸಾರಸುಖವೇ ಸುಖವೆಂದು ನಂಬಿಸುತ್ತಾ ಬಂದಿದೆ. ಚಿರಪರಿಚಿತವಾದ ಮಾರ್ಗದಲ್ಲಿ ನಡೆದಾಗ ದೂರ ಕಾಣುವುದಿಲ್ಲ. ಈಗ ಸಂಸಾರದಲ್ಲಿ ತೊಳಲಿ ತೊಳಲಿ ಜೀವಿಯ ಸ್ಥಿತಿಯೂ ಹಾಗಾಗಿದೆ. ಮತ್ತೆ ಮತ್ತೆ ಸಂಸಾರದ ಸುಳಿಗೆ ಜೀವ ತಾನಾಗೆ ಬೀಳುತ್ತಿದೆ. ಲೌಕಿಕ ಸುಖ ದೊರೆತಾಗ ಅದರಲ್ಲಿ ಮುಳುಗಿ ದೊರೆಯದಂದು ಅದಕ್ಕಾಗಿ ಚಿಂತಿಸಿ ಇದು ಪರಿತಪಿಸುವುದು. ಭವರೋಗಿಯ ಬವಣೆ ನಿವಾರಣೆಯಾಗಬೇಕಾದರೆ ರೋಗದ ಮೂಲವನ್ನು ಪತ್ತೆಹಚ್ಚಬೇಕು. ಧರ್ಮಾನುರಾಗವೇ ಭವರೋಗನಿವಾರಣೆಗೆ ಎಸಗಬೇಕಾದ ಪ್ರಥಮ ಚಿಕಿತ್ಸೆ! ಈ ಚಿಕಿತ್ಸಾಕಾರ್ಯವನ್ನೇ ರತ್ನಾಕರ ಆಗಾಗ ವಿವರಿಸಿರುವುದು. ಹಿಂದೊಮ್ಮೆ ಇದೇ ಶತಕದಲ್ಲಿ "ಬಳಿಕಣುಪೆಕ್ಕೆ ಪನ್ನೆರಡರಲ್ಲಿ....ತವಕೃಪಾತ್ಮನಲಾ ಅಪರಾಜಿತೇಶ್ವರಾ[1]" ಜೀವಕ್ಕೆ ಲೌಕಿಕದ ಮೇಲಿರುವ ಆಸಕ್ತಿಯನ್ನು ತಪ್ಪಿಸಬೇಕಾದರೆ ಇನ್ನೊಂದು ಪ್ರಬಲವಾದ ಆಸಕ್ತಿ ಹುಟ್ಟಿದರೇನೇ ಸಾಧ್ಯ; ಅಂಥ ಆಸಕ್ತಿ ಧಾರ್ಮಿಕವಾದುದಾದರೆ ಆತ್ಮೋದ್ಧಾರವೂ ಆದಂತಾಗುವುದು. 'ಅನುಪ್ರೇಕ್ಷೆ'ಯಲ್ಲೂ, 'ಧರ್ಮಧ್ಯಾನ'ದಲ್ಲೂ, 'ಕಾರಣಭಾವನೆ'ಗಳಲ್ಲೂ ಮನವನ್ನು ಹರಿಯಬಿಟ್ಟರೆ ವಿಷಯಾಸಕ್ತಿ ತಾನಾಗಿಯೇ ತಗ್ಗುವುದು; ಭಕ್ತಿ ಅನಿವಾರ್ಯವಾಗಿ ನುಗ್ಗಿ ಬರುವುದು.

ಪರಿಗ್ರಹಪಿಶಾಚಿ

ಮಿಕ್ಕ ಪರಿಗ್ರಹಗ್ರಹಿತನನ್ಯರಿನಾದುಪದೇಶ ಲೇಶಮಂ |
ಲೆಕ್ಕಿಪನೇ ವಿರೋಧಿಗಳ ಬಲ್ಲನೆ ಮೆಲ್ಲೆರ್ದೆಯುಂಟೆ ಮತ್ತವಂ ||
ನಕ್ಕುದು ನಕ್ಕುದೇ ಮುನಿದುದುಂ ಮುನಿಸೇ ಅವನಾಟವೆಲ್ಲವುಂ |
ಮಕ್ಕಳ ಮೇಳದಾಟದವೊಲಿರ್ಪುದಲಾ ಅಪರಾಜಿತೇಶ್ವರಾ || ೩೬ ||

"ಪರಿಗ್ರಹಪೀಡಿತನಾದವನು ಅನ್ಯರ ಉಪದೇಶಕ್ಕೆ ಇನಿತಾದರೂ ಕಿವಿಯಿತ್ತಾನೆ? ಅರಿಷಡ್ವರ್ಗದ ಸಂಚನ್ನು ಅವನೆತ್ತಬಲ್ಲನು! ಅಂಥವನಲ್ಲಿ ಮೃದುಹೃದಯವೆಂದರೇನು? ಅವನ

೧. ಅ. ಶ. ೪.

ಸಂತೋಷ, ಸಂತೋಷವಲ್ಲ; ಅವನ ಮುನಿಸು ಮುನಿಸಲ್ಲ! ಅವನಾಟವೆಲ್ಲ ಹುಡುಗಾಟ!" —ಸಂಗ್ರಹಣಬುದ್ಧಿ ಹುಟ್ಟಿತೆಂದರೆ ಹಿತಾಹಿತ ಪರಿಜ್ಞಾನ ಹೇಳದೆ ಕೇಳದೆ ಜಾಗಬಿಡುವುದು. ಲೋಭಾಸುರನಿಗೆ ತನ್ನ ಹೃದಯಮಂದಿರದಲ್ಲಿ ಎಡೆಯಿತ್ತು ಅಂಥವನು ಬಾಳಬಾರದ ಬಾಳನ್ನು ಬಾಳಿ, ಪಡಬಾರದ ಪಾಡನ್ನು ಪಟ್ಟು, ಕೊನೆಗೆ ಸಾಯಬಾರದ ಸಾವನ್ನಪ್ಪುವನು!

ಗ್ರಹವೆಡೆಗೊಂಡವಂಗೆ ಮರವೊರ್ಮೆ ವಿವೇಕವದೊರ್ಮೆಕೂಡೆ ಸಂ |
ಗ್ರಹಿಸುತಮಿರ್ಕುಮಲ್ಲದೆ ಯಥಾಸ್ಥಿತಿಯುಂಟೆ ನಿರಂತರಂ ಪರಿ ||
ಗ್ರಹದೊಳಗಿರ್ದವಂಗೆ ನುಡಿಯುಂ ನಡೆಯುಂ ಕ್ಷಣಿಕಂಗಳಲ್ಲದೇ |
ಸಹಜ ಚರಿತ್ರದೊಳ್ನಿಲುಗೆ ಯೆತ್ತಣ ಮಾತಪರಾಜಿತೇಶ್ವರಾ || ೩೭ ||

"ದೆವ್ವಹಿಡಿದವನಿಗೆ ಒಮ್ಮೆ ಮರೆವು, ಒಮ್ಮೆ ವಿವೇಕವಿರುವಂತೆ ಪರಿಗ್ರಹದಲ್ಲಿ ಮುಳುಗಿದವನಿಗೂ ಮಾತಿನಲ್ಲೂ ನಡೆಯಲ್ಲೂ ಸದಾ ಚಂಚಲತೆಯುಂಟಾಗುವುದು. ಕ್ಷಣಚಿತ್ತಂ ಕ್ಷಣಪಿತ್ತಂ ಇರುವಾಗ ಸಹಜಚರಿತ ಹೇಗೆ ಬಂದೀತು?"—ಪರಿಗ್ರಹವೇ ಸಕಲ ದುರ್ಗುಣಗಳಿಗೂ ಪೀಠ! ಪರಿಗ್ರಹವೊಂದನ್ನು ತೊರೆದೆವೆಂದರೆ ದುರ್ಗುಣದ ತೂಬನ್ನು ತೆಗೆದಂತೆಯೆ! ಪರಿಗ್ರಹವೊಂದನ್ನು ನಾವು ಮನ್ನಿಸಿದಾಗ ಅದರ ಪರಿವಾರದೇವತೆಗಳಾದ **'ಲೋಭ' 'ಮಾಯಾ' 'ಮೋಹ'** ಇವೂ ಬಂದು ಪಾರುಪತ್ಯ ನಡೆಸುವುವು.

ಸೊರ್ಕಿ ಶರೀರ ನಾರಿ ಧನವೆನ್ನವಿವೆಂದವರಲ್ಲಿ ಕಣ್ಮನಂ |
ಸಿರ್ಕಿ ವಿವೇಕಿಗಳ್ನುಡಿದ ಧರ್ಮಮನೊಲ್ಲದೆ ಕೂಳ ಕೊರ್ಬಿನೊಳ್ ||
ಕರ್ಕಶವೃತ್ತಿಯೊಳ್ನಡೆವ ಕಾಮುಕರಂತಕನೊಯ್ಯು ಕಾಲದೊಳ್
ಮರ್ಕಟನಂತೆ ಪಲ್ಗಿರಿವರೇತರ ಬಾಳಪರಾಜಿತೇಶ್ವರಾ || ೩೮ ||

"ಪರಿಗ್ರಹಪೀಡಿತರಾದವರ ಅವಸ್ಥೆ ಅಷ್ಟಿಷ್ಟಲ್ಲ. ದೇಹ, ಹೆಣ್ಣು, ಹೊನ್ನು ಇವನ್ನು ತನ್ನವೆಂದುಕೊಂಡು ಅದರಲ್ಲೇ ತನ್ಮಯರಾಗಿ ಮರುಳಾಗುವರು! ಸೊಕ್ಕಿದ ಈ ಜನ, ತಿಳಿದವರು ಹೇಳುವಂಥ ಧರ್ಮೋಪದೇಶಕ್ಕೆ ಕಿವಿಗೊಡದೆ ಕೂಳಕೊಬ್ಬಿನಲ್ಲಿ ಬಾಳಿ ದುರಾಚಾರಿಗಳೂ ಕಾಮುಕರೂ ಆಗಿಬಿಡುವರು. ಅಂತಕನಾಗಮಿಸಿ ಇವರನ್ನು ದರದರ ಎಳೆದಾಗ ಮರ್ಕಟನಂತೆ ಹಲ್ಗಿರಿವರಲ್ಲ! ಇಂಥ ಬಾಳೂ ಒಂದು ಬಾಳೆ?"—ರತ್ನಾಕರ ಈ ಸಂದರ್ಭದಲ್ಲಿ ರೋಸಿ ರಚ್ಚಿಗೆದ್ದಿರುವನು. ಸಮಾಜದಲ್ಲಿ ಮನ್ನಣೆ ಪಡೆವ ವೇಷಧಾರಿಗಳನ್ನು ಕಂಡು, ಆಷಾಢಭೂತಿಗಳನ್ನು ನೋಡಿ ಈ ಸುಧಾರಕ ಸಿಡಿದುಬಿದ್ದಿರುವನು. ಧರ್ಮಬಾಹಿರರಾದವರು ತಾವೂ ಕೆಟ್ಟು ಅಕ್ಕಪಕ್ಕದವರನ್ನೂ ಕೆಡಿಸುತ್ತಿರುವಾಗ ಸಮಾಜಸುಧಾರಕನಾದ ರತ್ನಾಕರ ಹೇಗೆ ಸುಮ್ಮನಿದ್ದಾನು?

ರಚ್ಚೆಯ ಸಂಭ್ರಮಕೆ ಕುಣಿದಿಚ್ಛೆಯ ಕೂಳುಣುತಂ ಕ್ಷಣಾಂತದೊಳ್ |
ಕಿಚ್ಚಿನ ಕೊಂಡಮಂ ಪುಗುವ ರಂಡೆಯವೊಲ್ವಿಷಯಂಗಳಿಚ್ಛೆಯಂ ||
ಮೆಚ್ಚಿ ಮನಕ್ಕೆ ಬಂದ ತೆರದೊಳ್ನಡೆದೊಲ್ಲದೆ ಸುವ್ರತಂಗಳಂ |
ಹುಚ್ಚರೊ ದುರ್ಗತಿಸ್ಥಳಕೆ ಬೀಳ್ವರದೇಕಪರಾಜಿತೇಶ್ವರಾ || ೩೯ ||

"ರಚ್ಚೆಯ ಸಂಭ್ರಮದಿಂದ ಕುಣಿದು ಇಚ್ಛೆ ಬಂದ ಕೂಳನ್ನು ಬಯಸಿದವಳು ರಂಡೆಯಾದಾಗ ಕೆಂಡದ ರಾಶಿಯನ್ನೇರಬೇಕಾಗುವುದು. ಅಂತೆ ವಿಷಯಲಂಪಟರಾದವರು ಸ್ವೇಚ್ಛಾಪ್ರವರ್ತಿಗಳಾಗಿ ವ್ರತನಿಯಮಗಳನ್ನು ಪಾಲಿಸದೆ ಹಾಳಾಗುವರು. ಅಂಥ ಹುಚ್ಚರು, ಕಿಚ್ಚನ್ನೇರುವ ರಂಡೆಯಂತೆ ಅನಿವಾರ್ಯವಾಗಿ ದುರ್ಗತಿಗಿಳಿಯಬೇಕಾಗುವುದು"—'ಇದು ಭಕ್ತಿಯಲಾ!' 'ನಿಮ್ಮನೆ ನಂಬಿ ಧರ್ಮಮಂ ಜೋಡಿಸಿಕೊಂಬುದರ್ಕೆ ಬಿರಿಸುಂಟೆ ಜನಕೆ?' 'ಕೂಡೆ ವಿರಕ್ತಿ ಸಂಭವಿಪುದು' ಎಂದು ಹಸುಗೂಸಿಗೆ ಹೇಳುವಂತೆ ಮೃದುವಾಗಿ ಬೋಧಿಸಿದರೂ ನೀಚರಾದವರು ದಾರಿಗೆ ಬಂದಿಲ್ಲವೆಂದು ಕಾಣುವುದು. ಅಂಥ ಸಂದರ್ಭದಲ್ಲಿ ರತ್ನಾಕರನಂಥ ತಾಯ್ಗರುಳೂ ಕುದಿದು ಹಬೆಯಾಡುವುದನ್ನು ಇಲ್ಲಿ ಗಮನಿಸಬಹುದು.

ರತ್ನಾಕರನ ಮಾರ್ಗ ರಚನಾತ್ಮಕವಾದುದು. ಈತನಲ್ಲೇಳುವ ಕೋಪತಾಪಗಳು ಎಂದೂ ದ್ವೇಷಧೂಮಾವೃತವಾಗಿ ಸೇಡಿನ ಕಿಡಿಗಾರುವ ಕೋಪತಾಪಗಳಲ್ಲ. ಸದುದ್ದೇಶದಿಂದ ಲೋಕಕಲ್ಯಾಣ ದೃಷ್ಟಿಯಿಂದ ಸಾತ್ವಿಕ ಕೋಪ ಕೋರೈಸಿ ಮರುಕ್ಷಣದಲ್ಲೇ ಕರುಣೆಯ ಕಿರಣರಾಜಿಯನ್ನು ಚೆಲ್ಲಿ ಮಾಯವಾಗುವುದು. ಲೋಕೋದ್ಧಾರಕ್ಕಾಗೆ ಅಹರ್ನಿಶಿ ಪರಿತಪಿಸುವ ಈ ಮಹರ್ಷಿ, ನೀಚರನ್ನು ಕಂಡು ಗದರಿಸಿರುವನು. ನರಕಕ್ಕಿಳಿಯುತ್ತೀರೆಂದು ಈ ಯೋಗಿ ಸಾತ್ವಿಕಾಟೋಪವೆಸಗಿದಾಗ ಎಂಥ ದುರಾತ್ಮರೆದೆಯಾದರೂ ನಡುಗಲೇಬೇಕು. ಮಾನವ ಸ್ವಭಾವವನ್ನರಿತ ಮನಶ್ಶಾಸ್ತ್ರ ವಿಶಾರದನಾದ ರತ್ನಾಕರ ಕ್ಷಣಕ್ಷಕ್ಕೂ ಹೊಸ ಹೊಸ ಮೋಡಿಯನ್ನು ಹಾಕುತ್ತಾ ಹೋಗುವುದನ್ನು ಶತಕಗಳಲ್ಲಿ ಕಾಣಬಹುದು. (ಈ ಮಾತು ತ್ರಿಲೋಕಶತಕಕ್ಕೆ ಮಾತ್ರ ಅನ್ವಯಿಸದು.) ಪಾಪಿಷ್ಟನಿದಿರು ಗುಡುಗಿ ಅವನಲ್ಲಿ ಸುಪ್ತವಾಗಿರುವ ಸಾತ್ವಿಕಕಳೆಯನ್ನು ಎಚ್ಚರಗೊಳಿಸಿ ಅನಂತರ ರತ್ನಾಕರಸಿದ್ಧ ಮೃದುವಚನದ ಮಳೆಗರೆದು ಜೀವಿಗಳನ್ನಾಕರ್ಷಿಸುವನು.

ಪಿಂದಣ ಜನ್ಮಜನ್ಮದೊಳಗೆಲ್ಲಿದನೀ ಭವದತ್ತ ತನ್ನನಾ |
ರ್ತಂದರದೆಲ್ಲಿ ಮುಂದೆ ತನಗಿನ್ನೆಡೆ ಪುಟ್ಟಿದ ತಾಣತಾಣದೊಳ್ ||
ಕುಂದದುಪಾರ್ಜಿಸಿರ್ದ ಧನಮಂ ತನುವಂ ಬರುತೊಂದನುಂ ಮನಂ |
ತಂದುದೆ ನಿಮ್ಮ ನಚ್ಚಿರದೆ ಚಿಂತಿಪುದೇಕಪರಾಜಿತೇಶ್ವರಾ || ೪೦ ||

"ಹಿಂದಣ ಜನ್ಮದಲ್ಲಿ ಎಲ್ಲಿದ್ದೆನೊ? ಈ ಭವಕ್ಕೆ ತನ್ನನ್ನು ಕರೆತಂದವರಾರೋ? ಮುಂದೆಲ್ಲಿ ಹುಟ್ಟಬೇಕಾಗುವುದೊ? ಅಲ್ಲಲ್ಲೆ ಆಶೆಯಿಂದ ಕೂಡಿಹಾಕಿದ ಧನರಾಶಿಯನ್ನು ಭವದಿಂದ ಭವಕ್ಕೆ ಸಾಗಿಸಿಕೊಂಡು ಬರಲಾದೀತೆ? ಹೋಗಲಿ, ಹೊತ್ತ ದೇಹವನ್ನಾದರೂ ಜೊತೆಯಲ್ಲೇ ಕೊಂಡುಹೋಗಲು ಬಂದೀತೆ? ಅಪರಾಜಿತೇಶ, ನಿನ್ನಲ್ಲಿ ಭರವಸೆಯಿಡದೆ ಮನಸ್ಸು ಕೊನೆಮೊದಲಿಲ್ಲದ ಚಿಂತೆಪಡುತ್ತಿರುವುದಲ್ಲ!"—ಇದೇ ಅಭಿಪ್ರಾಯವನ್ನು ರತ್ನಾಕರ ಹಿಂದಾಗಲೇ ಎಷ್ಟೋ ವಿಧವಾಗಿ ವಿವರಿಸಿರುವನು.[೧]

ಇತ್ತೊಡೆ ಬರ್ಪುದೇ ಬಡತನಂ ಕುಡದಿರ್ದೊಡೆ ಲಕ್ಷ್ಮಿ ನಿಲ್ಬುದೇ |
ಸತ್ತೊಡೆ ಜೀವನಂತೆ ಲಯವಾದನೆ ಜೀವಿಸುತಿರ್ದೊಡಿರ್ದನೇ ||

೧. ರತ್ನಾ. ಶ. ೨೭, ೨೯, ೬೩, ೬೪, ಶ್ಲೋಕಗಳನ್ನು ನೋಡುವುದು.

ಎತ್ತಣ ಮಾತಿವೆಲ್ಲ ಬರುತಂ ಬಯಲಾಗುತಮಿರ್ಪುವೈಸೆ ನಿ |
ಮ್ಮತ್ತಣ ಭಕ್ತಿಯೊಂದೆ ನಿಜಸಿದ್ಧಿಯಲಾ ಅಪರಾಜಿತೇಶ್ವರಾ ‖ ೪೧ ‖

"ಕೊಟ್ಟು ಕೆಟ್ಟವರುಂಟೆ? ಕೊಡದೆ ಲೋಭದಿಂದ ಕೂಡಿಟ್ಟು ಉಳಿಸಿಕೊಂಡವರಿದ್ದಾರೆಯೆ? ಮರಣವೇ ಬಾಳಿಗೆ ಕೊನೆಯಾದೀತೆ? ಉಸಿರಾಡುತ್ತಿರುವವರೆಲ್ಲ ಬದುಕಿದಂತಾದೀತೆ? ಇದೆಲ್ಲ ಎಲ್ಲೆ ಮಾತು! ಬಾಳಿನಲ್ಲಿ ಇವು ಬರುತ್ತವೆ ಹೋಗುತ್ತವೆ! ಅಪರಾಜಿತೇಶ, ನಿಮ್ಮಲ್ಲಿ ಭಕ್ತಿಯೊಂದಿದ್ದರೆ ಅದಕ್ಕಿಂತ ಬೇರೆ ಸಿದ್ಧಿ ಯಾವುದು?"—ತಾತ್ವಿಕ ಭಾಷೆಯಲ್ಲಿ ರತ್ನಾಕರ ಗಹನವಾದ ತತ್ವವನ್ನು ಚಮತ್ಕಾರವಾಗಿ ವಿವರಿಸಿರುವನು. ಹಸುವಿನ ಕೆಚ್ಚಲು ಬತ್ತದಂತಿರಬೇಕಾದರೆ ಆಗಾಗ ಹಾಲು ಕರೆಯುತ್ತಿರಬೇಕು. ಕರೆಯುವುದನ್ನು ಬಿಟ್ಟವೆಂದರೆ ಊರುವ ಹಾಲೂ ಹಿಂಗುವುದಲ್ಲದೆ ಕೆಲಕಾಲ ಕೆಚ್ಚಲೂ ಬಿಗಿದು ಹಿಂಸೆಯೂ ಆಗುವುದು. ಸಾವು ಬದುಕಿನ ಒಳಗುಟ್ಟನ್ನು ಈ ಯೋಗಿ ಮಾರ್ಮಿಕವಾಗಿ ಬಿತ್ತರಿಸಿರುವನು. ಸಾವೇ ಬಾಳಿನ ಮುಕ್ತಾಯವಾಗದು, ಅಂತೆ ಉಸಿರಾಟವೇ ಬಾಳಿನ ಗುರಿಯಾಗದು. ಬದುಕುವುದಕ್ಕಾಗೆ ಸಾಯುವುದೊಂದು ವಿಧಾನವಾದರೆ, ಸಾಯುವುದಕ್ಕಾಗೆ ಬದುಕುವುದೊಂದು ಬಗೆ! ಭಕ್ತಿಯೇ ಬದುಕಿನ ಜೀವಾಳವಾದಾಗ ಜೀವನ್ಮುಕ್ತಿ ಸಾಧಕನನ್ನರಿಸಿಕೊಂಡು ಬರುವುದೆಂದು ಭಕ್ತಿವಾರಾಧಿಯಾದ ರತ್ನಾಕರ ಸಾರಿರುವನು. ಹಿಂದಾಗಲೇ "ವ್ರತಮಂ ಮಾಣ್ದೊಡೆ....ಸಡಿಲದೇ ರತ್ನಾಕರಾಧೀಶ್ವರಾ![೧]", "....ನಿನ್ನೆನ್ನ ಸಂಧಾನಂ ನಿತ್ಯಸುಖೈಕವಿನ್ನುಳಿದುವೇಂ ರತ್ನಾಕರಾಧೀಶ್ವರಾ![೨]" ರತ್ನಾಕರ ಇದೇ ಅಭಿಪ್ರಾಯವನ್ನೇ ಮನಮುಟ್ಟುವಂತೆ ಹಾಡಿರುವನು.

ನಿನ್ನಪದಾಬ್ಜಭಕ್ತಿ ವಿಷಯಾರ್ಥವಿರಕ್ತಿ ತಪೋಭರಕ್ಕೆ ಸಂ |
ಪನ್ನತೆವೆತ್ತ ಶಕ್ತಿ ತನುವಂ ಸಲೆ ಭೇದಿಸಿ ತನ್ನ ರೂಪನ ‖
ಚ್ಚಿನ್ನದೆ ಕಾಣ್ಬ ಯುಕ್ತಿ ಗುಣದಲ್ಲನುರುಕ್ತಿ ಇವಾಗೆ ಮುಕ್ತಿ ಜೀ |
ವಂ ನರನಾಗಿವಂ ಪಡೆಯದಿರ್ದೊಡದೇಕಪರಾಜಿತೇಶ್ವರಾ ‖ ೪೨ ‖

ಮುಕ್ತಿಮಾರ್ಗದ ನಾನಾ ಹಂತಗಳನ್ನು ರತ್ನಾಕರ ಇಲ್ಲಿ ನಿರ್ದೇಶಿಸಿರುವನು. "ಮುಕುತಿ ಲೋಕವನ್ನು ಕಾಣಬಯಸುವ ಪಯಣಿಗನಿಗೆ ಮೊಟ್ಟಮೊದಲು ಬಂಡವಾಳವೆಂದರೆ 'ಭಕ್ತಿ'! ದೈವಭಕ್ತಿಯೊಂದಿದ್ದರೆ ಉಳಿದುದೆಲ್ಲ ಸುಲಭಸಾಧ್ಯವಾಗುವುದು. ಭಕ್ತಿಯೆಂಬ ಬಂಡವಾಳ ಮುಳುಗದಂತಿರಲು ವಿಷಯವಾಸನೆಯಲ್ಲಿ ವಿರಕ್ತಿ ಬರಬೇಕು. ಅನಂತರ ತಪೋಭರಕ್ಕೆ ಬೇಕಾದ ಶಕ್ತಿಯಿರಬೇಕು. ಜ್ಞಾನನೇತ್ರದಿಂದ ದೇಹವನ್ನೂ ಆತ್ಮವನ್ನೂ ವಿಂಗಡಿಸಿ ಸ್ವಸ್ವರೂಪವನ್ನು ನೋಡುವ ಯುಕ್ತಿಬೇಕು. ಭಕ್ತಿ, ವಿರಕ್ತಿ, ತಪಶ್ಶಕ್ತಿ, ಆತ್ಮಾವಲೋಕನಾಯುಕ್ತಿ (ಭೇದವಿಜ್ಞಾನ) ಮತ್ತು ಗುಣಗಣದಲ್ಲನುರಕ್ತಿ,[೩] ಇಷ್ಟನ್ನು ಪಡೆದೆವೆಂದರೆ ಮುಕ್ತಿಯನ್ನು

೧. ರತ್ನಾ. ಶ. ೮೫;

೨. ರತ್ನಾ. ಶ. ೧೨೪

೩. ಸಮ್ಯಕ್ತ್ವದ ಎಂಟು ಗುಣಗಳಾದ (೧) ಸಂವೇಗ, (೨) ನಿರ್ವೇಗ, (೩) ಆತ್ಮನಿಂದಾ, (೪) ಗರ್ಹಣಾ, (೫) ಉಪಶಮ, (೬) ಅರ್ಹದಾದಿಭಕ್ತಿ, (೭) ಅನುಕಂಪಾ, (೮) ಆಸ್ತಿಕ್ಯ, ಅಥವಾ ಸಿದ್ಧಪರಮೇಷ್ಠಿಗಳ ಎಂಟು ಗುಣಗಳಾದ (೧) ಕ್ಷಾಯಿಕಸಮ್ಯಕ್ತ್ವ, (೨) ಕ್ಷಾಯಿಕ ದರ್ಶನ, (೩) ಕಾಯಿಕಜ್ಞಾನ, (೪) ಕ್ಷಾಯಿಕವೀರ್ಯ,

ಪಡೆದಂತೆಯೆ. ಮಾನವನಾಗಿ ಹುಟ್ಟಿದ ಮೇಲೂ ಇವನ್ನು ಪಡೆಯದಿದ್ದರೆ ಇನ್ನೆಲ್ಲಿ ಪಡೆಯಲು ಸಾಧ್ಯ?"—ಎಂದು ರತ್ನಾಕರ ಮಾನವಲೋಕದಿದಿರು ಪ್ರಶ್ನಾರ್ಥಕ ಚಿಹ್ನೆಯನ್ನೆಳೆದಿರುವನು! ಜೈನಧರ್ಮದಲ್ಲಿ ಮಾನವಗತಿಗೆ ಮನ್ನಣೆ ಹೆಚ್ಚು. ಸ್ವರ್ಗದಲ್ಲೆಲ್ಲ ಅತ್ಯುತ್ಕೃಷ್ಟವಾದ 'ಸರ್ವಾರ್ಥಸಿದ್ಧಿ'ಯ ಅಹಮಿಂದ್ರನೂ ಕೂಡ ಮುಕ್ತನಾಗಬೇಕಾದರೆ ನರಲೋಕಕ್ಕಿಳಿದು ಮಾನವನಾಗೇ ಹುಟ್ಟಬೇಕು; ಅನಂತರ ಕರ್ಮಕ್ಷಯಗೊಳಿಸಿ ಮುಕ್ತನಾಗಬೇಕು. ನರಕಜೀವ ಸಿದ್ಧನಾಗಬೇಕಾದರೆ ಮಾನವನಾಗಿ ಮೇಲೆದ್ದು ಬರಬೇಕು. ದೇವತೆಗಳಾಗಲಿ ನಾರಕಿಗಳಾಗಲಿ ನೇರವಾಗಿ ತಮ್ಮ ಲೋಕದಿಂದ ಹಾಗೂ ತಾವಿರುವ ಗತಿಗಳಿಂದ ಮುಕ್ತರಾಗಲಾರರು. ಹೀಗಿರುವಾಗ ಮಾನವರಾದವರು ಎಚ್ಚರ ತಪ್ಪಿ ಅಧೋಗತಿಗಿಳಿಯದಿರಲೆಂದು ರತ್ನಾಕರ ಮುನ್ನೆಚ್ಚರಿಕೆಯನ್ನಿತ್ತಿರುವನು?

ನಿನ್ನೊಳಗಾದ ಭಕ್ತಿಗಡ ನಿರ್ವೃತಿ ಬೇಕು ಗಡಂ ವಿಶುದ್ಧದಿಂ |
ತನ್ನಿರವುಂ ಭವತ್ಪ್ರತಿ ಗಡಾಂತುದು ದೀಕ್ಷೆಗಡಂ ಬಳಿಕ್ಕಹೋ ‖
ಸನ್ನಿಗಡಂ ಬಿಸಿಲ್ಗಡ ಭಯಂಗಡ ಬಾಯ್ಸವಿಯಾಸೆಯುಂ ಗಡಂ |
ನನ್ನ ಮನೋವಿಕಾರತೆಯ ನಾಡುವೆನೇನಪರಾಜಿತೇಶ್ವರಾ ‖ ೪೩ ‖

ಪ್ರಯಾಣಕ್ಕನುಗುಣವಾದ ಪೂರ್ವಸಿದ್ಧತೆಯಿಲ್ಲದೆ ಆತುರಾತುರವಾಗಿ ನುಗ್ಗಿ ಕಣ್‌ಕಣ್ ಬಿಡುವ ಗಾಂಪರನ್ನು ರತ್ನಾಕರ ನಮ್ಮ ಮುಂದಿಟ್ಟಿರುವನು. "ದೇವ, ಭಕ್ತಿವುಕ್ಕಿ ಬಂದಿತಲ್ಲವೆ? ಮೋಕ್ಷಕ್ಕೆ ಬಾತುಬಾಯಿ ಬಿಟ್ಟನಲ್ಲವೆ? ಮನಸ್ಸು ನಿನ್ನಲ್ಲೇ ನೆಲೆಸಲು ಧಾವಿಸಿತಲ್ಲವೆ? ಇಷ್ಟಾದ ಮೇಲೆ ದೀಕ್ಷೆಗೆ ತಡವೇಕೆ? ದೀಕ್ಷೆಯೂ ಪೂರೈಸಿತಲ್ಲ! ಇದಾದನಂತರ ಚಳಿಯ ಕೊರೆತ, ಬಿಸಲಿನ ಬೇಗೆ, ನಾನಾ ಭಯ ಬಂದು ಮುತ್ತುತ್ತಿರುವುವಲ್ಲ! ನಾಲಗೆಯ ಚಪಲ ಹೆಚ್ಚುತ್ತಿರುವುದಲ್ಲ! ಬೇರೆಯವರ ಮಾತೇಕೆ ನನ್ನ ಮನೋವಿಕಾರವನ್ನೇ ನಿನಗೆತಿಳಿಸಿರುವೆನು"—ಆರಂಭಶೂರನಾಗಿ ಮುನ್ನುಗ್ಗಿ ದಿಗಂಬರ ದೀಕ್ಷೆಯನ್ನು ಪಡೆದು ಅನಂತರ ಕಟುನಿಯಮಗಳಿಗೆ ದೇಹಮನವೆರಡೂ ಒಗ್ಗದೆ ಪರಿತಪಿಸುವಸಾಮಾನ್ಯ ಚೇತನಗಳನ್ನು ಕುರಿತು ರತ್ನಾಕರ ಇಲ್ಲಿ ಕಟಕಿಯಾಡಿರುವನು; ಅಂಥವರ ಉತ್ಸುಕತೆ, ದುಡುಕು, ಪೂರ್ವಾಪರ ವಿವೇಚನಾರಹಿತ ಕಾರ್ಯಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವನು. ಆದಿದೇವ ಸರ್ವಸಂಗ ಪರಿತ್ಯಾಗಿಯಾಗಿ ದಿಗಂಬರನಾಗಿ ಹೊರಟಾಗ ಸಹಸ್ರಾರು ಜನ ರಾಜ ಮಹಾರಾಜರು ತಾವೂ ದಿಗಂಬರರಾಗಿ ಆತನನ್ನು ಹಿಂಬಾಲಿಸಿದರು. ಎಷ್ಟು ಬೇಡವೆಂದರೂ ಕೇಳದೆ ಭರತೇಶನ ಮಗು ಮರೀಚಿ ಚಂಡಿಹಿಡಿದು ತನ್ನಜ್ಜನಂತೆ ತಾನೇಕಾಗಬಾರದೆಂದು ವಾದಿಸಿ ಕೊನೆಗೆ ದಿಗಂಬರದೀಕ್ಷೆ ಪಡೆದನು. ಎಲ್ಲರೂ ಒಟ್ಟಾಗಿ ತಪಸ್ಸಿಗೆ ನಿಂತರು. ನಿಂತವರಿಗೆಲ್ಲ ಮುಕುತಿವನಿತೆಯ ಮುಖಾರವಿಂದವನ್ನು ಕಾಣುವಾತುರ! ಮುಂದಾದುದನ್ನು ಪಂಪ ಮಹಾಕವಿ ವಿವರಿಸುವನು.

ದಿವಸಮನೊಂದು ಮೇಣೆರಡು ಮೂರೆನೆ ನಿಲ್ಪುದು ಮೂರು ತಿಂಗಳಾ |
ಯ್ತವಚರದಿಂತು ನಿಂದನೊಳನೇ ಶನಿ ನಿಲ್ಪವೊಲಿಲ್ಲಿ ಪಾಳಿಗಿ |

(೫) ಅಗುರುಲಘುತ್ವ, (೬) ಅವ್ಯಾಬಾಧತ್ವ, (೭) ಸೂಕ್ಷ್ಮತ್ವ, (೮) ಅವಗಾಹನತ್ವ ಇವುಗಳಲ್ಲಿ ಅನುರಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು.

ನ್ನೆವರೆಗಮಿರ್ದೆವಿನ್ನೆಮಗೆ ನಿತ್ತರಿಸಲ್ ನೆರವಿಲ್ಲ ತಾರಲಾ |
ದುವು ತನು ಕೂಳ ನೀರ ದೆಸೆಯಿಲ್ಲದೊಡಲ್ಗಳನೆಂತು ತಾಳ್ವವಂ[1] ‖ ೮೯ ‖

"ಒಂದೊ, ಎರಡೋ ಹೆಚ್ಚೆಂದರೆ ಮೂರು ದಿನ ನಿಂತರೆ ನಿಲ್ಲಬಹುದು. ಛೆ! ನಿಂತು ಮೂರು ತಿಂಗಳಾಯಿತಲ್ಲ! ಬೇಸರವೂ ಬೇಸರ! ಹೀಗೆ ಶನಿ ನಿಂತಂತೆ ಎಷ್ಟು ದಿನ ನಿಲ್ಲುವುದು? ಮರ್ಯಾದೆಗೆ ಕಟ್ಟುಬಿದ್ದು ಇದುವರೆವಿಗೂ ಹೇಗೊ ಸಹಿಸಿದ್ದಾಯಿತು. ಇನ್ನು ನಮ್ಮಿಂದಾಗದು! ದೇಹ ತಾರಾದವು! ಕೂಳು ನೀರಿಲ್ಲದೆ ಬದುಕಲಾದೀತೆ?"—ಆದಿದೇವನ ಜೊತೆಯಾಗಿ ತಪಸ್ಸಿಗೆ ಬಂದು ಮುಕುತಿವನಿತೆಯ ಕೃಪಾಕಟಾಕ್ಷಕ್ಕಾಗಿ ಕೈಯೊಡ್ಡಿದ ಸಾಮಾನ್ಯ ಚೇತನಗಳೆಲ್ಲ ತಪದುಬ್ಬೆಗವನ್ನು ತಾಳಲಾರದೆ ತಳಮಳಗೊಂಡುದನ್ನು ಪಂಪ ಸೊಗಸಾಗಿ ವಿವರಿಸಿರುವನು.

ಮಿಂದುಂಡು ಕುಡಿದು ಮಗುಳ್ದುಂ | ಬಂದಿರ್ಪೊಡಮಿರ್ಪಮಿನಿತುಮಿಲ್ಲದೆ ಗುರುಗು ‖
ಮ್ಮೆಂದು ಪಸಿದಿರ್ದು ಬೆದಬೆದ | ಬೆಂದಿನಿಬರ್ ಕಟ್ಟಿಕೊಳ್ವ ಕಣೆಯೇಂ ಪೇಳಿಂ[1] ‖ ೯೦ ‖

"ಮಿಂದು, ಉಂಡು, ಕುಡಿದು ಮತ್ತೆ ಬಂದು ತಪವೆಸಗುವುದಾದರೆ ನಮ್ಮದೂ ಒಪ್ಪಿಗೆಯೆ! ಗುರುಗುಮ್ಮೆಂದು ಹಸಿವಿನಿಂದ ಕಂಗಾಲಾಗಿ ಬೆದಬೆದ ಬೆಂದರೆ ಇವರೆಲ್ಲ ಪಡೆವ ಭಾಗ್ಯವಾದರೂ ಏನಿದೆ?"—ಎಂದು ಉಪಾಯವೇದಾಂತವನ್ನು ಹಾಡಿಕೊಂಡು ಒಬ್ಬೊಬ್ಬರಾಗಿ ಆ ಜಾಗವನ್ನು ತೊರೆದರು. ಮರೀಚಿಯಂತು ಎಲ್ಲರಿಗಿಂತ ಮುಂಚಿತವಾಗಿ ಎಚ್ಚೆತ್ತುಕೊಂಡು ನವೀನವೂ ಶ್ರಮರಹಿತವೂ ಆದ ತಪೋಮಾರ್ಗವನ್ನು ಹುಡುಕಲು ಹೊರಟುಹೋದನು! ಇಂಥವರನ್ನು ಕಂಡೇ 'ಮತ್ತವಂ ನಕ್ಕುದು ನಕ್ಕುದೇ ಮುನಿದುದುಂ ಮುನಿಸೆ ಅವನಾಟವೆಲ್ಲವುಂ ಮಕ್ಕಳ ಮೇಳದಾಟದವೊಲಿರ್ದಪುದಲಾ![2]' ಎಂದು ರತ್ನಾಕರ ನುಡಿದಿರುವಂತಿದೆ.

ದಿಗಂಬರತ್ವ ಶ್ರೇಷ್ಠವೇನೋ ಅಹುದು. ಆದರೆ ಅಂಥ ಮಾರ್ಗಕ್ಕಡಿಯಿಡುವಾಗ 'ಬಾಹ್ಯಾಭ್ಯಂತರ ಪರಿಗ್ರಹ' ಪಿಶಾಚದಿಂದ ಸಂಪೂರ್ಣವಾಗಿ ಬಿಡುಗಡೆ ಪಡೆದಿರಬೇಕು. ಜೈನ ಶ್ರಾವಕರು ಕ್ರಮವಾಗಿ 'ಏಕಾದಶಪ್ರತಿಮೆ'ಗಳನ್ನು ಪಾಲಿಸಿಕೊಂಡು ಬಂದು ಅನಂತರ 'ಸಾಧು'ವಾಗಬೇಕು. ಪಾಕಕ್ಕೆ ಬರುವ ತನಕ ತಡೆಯದೆ ಅವಸರಕ್ಕೆ ಬಿದ್ದು ಬಲವಂತಕ್ಕೆ ಹಣ್ಣಾಗಲು ಯತ್ನಿಸಿದರೆ ಆದೀತೆ?

ಹೊರಗೆ ಸರ್ವವ ಬಿಡಬಹುದು ಚಿತ್ತದೊಳಿದ್ದ | ಕರೆಯನೊಂದನು ಬಿಡಲರಿದು ‖
ಅರುವೆಯ ಬಿಸುಟರೆ ತಪಸಿಯೆ? ಹೆರೆಬಿಟ್ಟ | ರರೆಗೋಲೆ ವಿಷಹೋಯ್ತೆ ಫಣಿಗೆ?[3] ‖

ರತ್ನಾಕರ, ಕಷಾಯದಿಂದ ಕದಡೆದ್ದ ಮುನಿಯನ್ನು ಭರತೇಶವೈಭವದಲ್ಲಿ ಮಾರ್ಮಿಕವಾಗಿ ವಿಡಂಬನೆ ಮಾಡಿರುವನು.

೧. ಪಂಪನ ಆ. ಪು. ix.
೨. ಅ. ಶ. ೩೬;
೩. ಭ. ವೈ. ೫೪ನೇ ಸಂ, ಪ. ೧೯.

ಅನುಭಾವಿಯ ಅಂತರಂಗ

"ಭಕ್ತನೊಬ್ಬನು ಭಕ್ತಿಯ ಹಲವು ಹಂತಗಳನ್ನು ಏರಿ ಆತ್ಮನಿವೇದನೆಯನ್ನೂ ಸರ್ವಸಮರ್ಪಣೆಯನ್ನೂ ಮಾಡಿಕೊಂಡನೆಂದರೆ ಅವನಿಗೆ ಪರಮಾತ್ಮನ ಸಾಕ್ಷಾತ್ಕಾರವಾಗಿ ಅವನೊಬ್ಬ ಅನುಭಾವಿಯಾಗುತ್ತಾನೆ....ಈ ಅನುಭವ ಅತ್ಯಂತ ರಮ್ಯವೂ ಹೌದು. ಭಕ್ತರ ಜೀವನದ ಪರಮಗುರಿಯೇ ಇದು. ಈ ಸಾಕ್ಷಾತ್ಕಾರಕ್ಕೆ ತೃಪ್ತಿಯೆಂಬುದೇ ಇಲ್ಲ. ಅದು ಸಿಕ್ಕಷ್ಟೂ, ಅನುಭವಿಸಿದಷ್ಟೂ ಅಲೌಕಿಕಾನಂದ ಹೆಚ್ಚುತ್ತಾ ಹೋಗುತ್ತದೆ....ಇದಾದರೆ ಎಲ್ಲ ಸಂಶಯಗಳೂ ದುಃಖಗಳೂ ಮಂಜಿನಂತೆ ಕರಗಿ ಮಾಯವಾಗುವುವು.[1]"

ಅನುಭಾವಿಯ ಆಂತರಿಕ ಪರಮಾನಂದವನ್ನು ರತ್ನಾಕರ ರಮಣೀಯವಾಗಿ ಚಿತ್ರಿಸಿರುವನು. ಭರತೇಶವೈಭವದಲ್ಲಿ ಈ ಅಲೌಕಿಕಾನಂದವನ್ನು ಹಂಸಕಲೆಯ ಅಂಚುಕಟ್ಟಿ, ಭೇದವಿಜ್ಞಾನದ ಬಣ್ಣವಿಟ್ಟು ಬಣ್ಣಿಸಿರುವನು!

ನಾಲಗೆಗಾವುದಿಚ್ಛೆ ತವನಾಮರಸಾಯನಮೊಂದೆ ನನ್ನ ಚಿ |
ತ್ತಾಲಯದೊಳ್ಬೆಳರ್ಪ ಮಣಿದೀಪಮದಾವುದು ನಿನ್ನರೂಪೆ ಪೊ ‖
ಯ್ಮಾಲೆಯ ಮೆಯ್ಯ ಭಾರಣೆಯ ಹಿಂಗಿಸುವೌಷಧಿ ಯಾವುದೆನ್ನ ಚಿ |
ತ್ಪಾಲಕ ನಿನ್ನಮಾರ್ಗದ ತಪಂಗಳಲಾ ಅಪರಾಜಿತೇಶ್ವರಾ ‖ ೪೪ ‖

"ದೇವ, ನನ್ನ ನಾಲಗೆ ಬಾತುಬಯಸುವುದು ನಿನ್ನ ನಾಮರಸಾಯನವೊಂದನ್ನೇ! ನನ್ನ ಮನೋಮಂದಿರದಲ್ಲಿ ನಿನ್ನ ಸ್ಫುರದ್ರೂಪವೇ ಮಣಿದೀಪವಾಗಿ ರಾರಾಜಿಸುತ್ತಿರುವುದು! ಆತ್ಮರಕ್ಷಕ, ನನ್ನಾತ್ಮಕ್ಕೆ ಹೊರೆಯಾಗಿರುವ ಹಾಗೂ ಅನುಸರಿಸಿಕೊಂಡು ಬರುತ್ತಿರುವ ಈ ದೇಹದ ಭಾರವನ್ನು ನೀಗಿಕೊಳ್ಳಲು ನೀನು ತೋರಿರುವ ಮಾರ್ಗದಲ್ಲಿ ನಡೆದು ತಪವೆಸಗುವುದೇ ಪರಮೌಷಧಿಯಲ್ಲವೆ?"—ಇಲ್ಲಾಗಲೆ ರತ್ನಾಕರನಲ್ಲಿ ಭರವಸೆ ತುಂಬಿತುಳುಕಿದೆ; ಗುರಿಮುಟ್ಟುವ ಮಾರ್ಗವನ್ನು ಕಂಡುಕೊಂಡು ಇವನು ನಿರ್ಭಯನಾಗಿರುವನು. ಬಾಳೆಲ್ಲ ಆತ್ಮಸಾಕ್ಷಾತ್ಕಾರಕ್ಕಾಗಿ ಮೀಸಲಾದಾಗ ಸಾಧಕನಲ್ಲಿ ಇಂಥ ಸಂತೃಪ್ತಿ ಬಾರದಿರದು. ಸಾಧಕನಿಗೆ ಇಂಥ ಸ್ಥಿತಿ ಲಭಿಸಿತೆಂದರೆ ಅವನ ಅಂತರಂಗವೇ 'ಸಮವಸರಣ'ವಾಗಿ 'ದಿವ್ಯಧ್ವನಿ'ಯ ಸೋನೆ ಎಡೆಬಿಡದೆ ಹನಿದೀತು.

ವಚನದಲ್ಲಿ ನಾಮಾಮೃತ ತುಂಬಿ, ನಯನದಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ,
ಕೂಡಲ ಸಂಗಮದೇವಾ, ನಿಮ್ಮ ಚರಣದಲಾನು ತುಂಬಿ![2] ೪೯೨

ಎನ್ನಕಾಯವ ದಂಡಿಗೆಯ ಮಾಡಯ್ಯಾ;
ಎನ್ನ ಸಿರವ ಸೋರೆಯ ಮಾಡಯ್ಯಾ ;
ಎನ್ನ ನರವ ತಂತಿಯ ಮಾಡಯ್ಯಾ ;
ಎನ್ನ ಬೆರಳ ಕಡ್ಡಿಯ ಮಾಡಯ್ಯ!

೧. ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಜ. ದಾ. ಪು. ೨೫.
೨. ಬ. ವ.

ಬತ್ತೀಸ ರಾಗವ ಹಾಡಯ್ಯಾ; ಉರದಲೊತ್ತಿ ಬಾರಿಸು,
ಕೂಡಲ ಸಂಗಮದೇವಾ[೧] ೫೦೦

ಬಸವಣ್ಣನವರು ಶಿವಶರಣರಲ್ಲಿ ಅಗ್ರಗಣ್ಯರು. ಕೂಡಲಸಂಗನ ಚರಣಕಮಲದಲ್ಲಿ ದುಂಬಿಯಾಗಿ ಝೇಂಕರಿಸಿದ ಮಹಾಮಹಿಮರು! ತಮ್ಮ ಕಾಯವನ್ನೇ ವಾದ್ಯವಾಗಿಸಿ ಬತ್ತೀಸ ರಾಗವನ್ನು ಹಾಡಿಕೊಂಡು ಶಿವಮಹಿಮೆಯನ್ನು ಬಿತ್ತಿ ಕಾಯಕವೆಸಗಿದ ಕಾರಣಪುರುಷರು!

ಕಂಡಕಂಡಲ್ಲಿ ವಿಶ್ವರೂಪ ಕಾಂಬರು
ಉಂಡು ಉಣಿಸಿದ್ದೆಲ್ಲ ನಿನ್ನ ಯಜ್ಞವೆಂಬರು
ಬಂಡುಣಿಯಂದದಿ ನಾಮಾಮೃತವನುಂಬರು
ಹೆಂಡಿರು ಮಕ್ಕಳು ನಿನ್ನ ತೊಂಡಿರೆಂಬರು[೨] ೫

"ಮಾನವನ ಅಂತರಂಗ ಎಲ್ಲಿಯೂ ಒಂದೇ. ದೇಶ ಕಾಲ ಭಾಷೆಗಳು ಇದನ್ನು ಮಾರ್ಪಡಿಸಲಾರವು. ಮನಶ್ಶಾಂತಿಯನ್ನು ಅರಸಲು ಹೊರಟಾಗ ಎಲ್ಲರೂ ಒಂದೇ ಮಾರ್ಗವನ್ನು ಹೇಳುವರು. ಪರಮಾರ್ಥಿಗಳ ಬಳಗ ಎಲ್ಲಿಯೂ ಯಾವಾಗಲೂ ಒಂದೇ. ಒಂದೇ ಮಹಾ ಸಂಗೀತದಲ್ಲಿ ಎಲ್ಲರೂ ತಮ್ಮ ದನಿಯನ್ನು ಕೂಡಿಸುವರು; ಸರ್ವರಲ್ಲಿ ಪ್ರೇಮ ಪರೋಪಕಾರಗಳೇ ತಮ್ಮ ಧರ್ಮವೆಂದು ಘೋಷಿಸುವರು.[೩]"

ತೊಗಲ ಪಸುಂಬೆಯೊಳ್ಪೊಲಸಿನೋವರಿಯೊಳ್ರುಜೆಯೆಂಬ ಚೇಳ್ಗಳಾ |
ಪಗವಿನೊಳಿರ್ಪ ಪೊಲ್ಲನುವಿನೊಳ್ಕವಿದಿರ್ದಪನಾತ್ಮನೆಂಬುದಂ ||
ಬಗೆಯದ ಕಾರಣಂ ಬರ್ದುಕು ರಂಜಿಸಿತಲ್ಲದೆ ತೂಗಿ ನೋಳ್ಪಿನಂ |
ನಗಲೆಡೆಯುಂಟೆ? ತುತ್ತಿಡೆಮನಂಬಹುದೇ ಅಪರಾಜಿತೇಶ್ವರಾ ? || ೪೫ ||

ಸಾಧಕನ ಮನಸ್ಥಿತಿಯಲ್ಲೂ ಏರಿಳಿತವಿದ್ದೇ ಇರುತ್ತದೆ. ಒಮ್ಮೊಮ್ಮೆ ತಾನು ತೊರೆದ ಲೌಕಿಕ ಸುಖದತ್ತ ಮತ್ತೆ ಮನ ಹಾತೊರೆಯುವುದುಂಟು. ಅಂಥ ಸಂದರ್ಭದಲ್ಲಿ ದೇಹದ ಅನಿತ್ಯತೆಯನ್ನೂ ಅಸಹ್ಯ ಸ್ವರೂಪವನ್ನೂ ಸಾಧಕ ತನ್ನ ಬಗೆಗಣ್ಣೆದಿರು ಚಿತ್ರಿಸಿಕೊಂಡು ಚಪಲಚಿತ್ತವನ್ನು ಕಟ್ಟಿಹಾಕಬೇಕಾಗುವುದು. "ದೇಹವೆಂದರೆ ಚರ್ಮದ ಚೀಲ ತಾನೆ? ಈ ತೊಗಲಚೀಲ ಹೊಲಸಿನಾಗರವಲ್ಲ! ಈ ಕಾಯ, ರೋಗರುಜಿನಗಳೆಂಬ ಚೇಳುಗಳ ವಾಸಸ್ಥಾನವಾದ ಹಗೇವಲ್ಲವೆ? ಇಂಥ ಹಗೇವನ್ನು ಆತ್ಮ ತನ್ನದೆಂದು ಆಶ್ರಯಿಸಿಕೊಂಡಿರುವನಲ್ಲ! ಇದು ಗೊತ್ತಿಲ್ಲದೆ ನಮ್ಮ ಬಾಳ್ವೆಗೊಂದು ರಂಜನೆಯುಂಟಾಗಿದೆಯಲ್ಲದೆ ವಿಚಾರ ಮಾಡಿ ನೋಡಿದಾಗ ನಮ್ಮ ಬದುಕನ್ನು ಕಂಡು ನಲಿದೇವೆ? ಹೋಗಲಿ ತುತ್ತೆತ್ತುವುದಕ್ಕಾದರೂ ಮನಬಂದೀತೆ?" ಎಂದು ರತ್ನಾಕರ ಸಿಡಿಮಿಡಿಗೊಂಡಿರುವನು. ಈ ಭಾವನೆಗೆ ಜೈನ ಪರಿಭಾಷೆಯಲ್ಲಿ 'ಅಶುಚಿತ್ವಾನುಪ್ರೇಕ್ಷೆ'ಯೆನ್ನುವರು. ಸಂದರ್ಭೋಚಿತವಾಗಿ ಬಿಗಿಯಾದ ಬಂಧ ವೇರ್ಪಟ್ಟು ಶೈಲಿಯಲ್ಲಿ ನಿರ್ದಾಕ್ಷಿಣ್ಯ ಮನೋಭಾವ ಹಾಗೂ ನಿಷ್ಠುರವಾದ ನಿರ್ಧಾರ ಒಡೆದು ಮೂಡಿದೆ!

೧. ಬ. ವ. ೨. ಶ್ರೀ ಜ. ದಾ., ಪು. ೪೦ ;
೩. ಶ್ರೀ ಜ. ದಾ., ಪು. ೪೧ ;

ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ
ಎಲುವಿನ ತಡಿಕೆ, ಸುಡಲೀ ದೇಹವ,
ಒಡಲವಿಡಿದು ಕೆಡದಿರು.
ಚನ್ನಮಲ್ಲಿಕಾರ್ಜುನನರಿ ಮರುಳೇ![೧]

ಶಿವಶರಣೆಯಾದ ಮಹದೇವಿಯಕ್ಕ ನಶ್ವರವಾದ ದೇಹವನ್ನು ನಂಬಿ ಕೆಡಬೇಡಿಯೆಂದು ಎಚ್ಚರಿಸಿರುವಳು. ಜೊತೆಗೆ ಲೌಕಿಕದತ್ತ ಓಡುವ ಮನವನ್ನು ಹಿತೋಪದೇಶದಿಂದ ಒಲಿಸಿಕೊಳ್ಳುತ್ತಿರುವಳು.

ಮಾಸು ಮುಸುಂಕಿ ತಾಯೊಡಲೊಳೆಂತಿರವರ್ಪುದು ಮೂತ್ರಮಾರ್ಗದೊಳ್ |
ಹೇಸದೆ ಬರ್ಪುದೆಂತು ಮೊರದೊಳ್ಮಲಮೂತ್ರದೊಳಾಳುತೇಳುತಂ ||
ಕೂಸೆನಿಸಿರ್ಪುದೆಂತುಟದನಾಂ ಮರೆದಾಗಳೆ ಠಕ್ಕು ಜವ್ವನಂ |
ಸಾಸದವೆಂದು ನಚ್ಚಿದೆನಲಾ ಮತಿದೋರಪರಾಜಿತೇಶ್ವರಾ || ೪೬ ||

ಒಂದೇ ಅಭಿಪ್ರಾಯವನ್ನು ವಿವಿಧ ರೀತಿಯಲ್ಲಿ ಬಣ್ಣಿಸಿ ಓದುಗನ ಮನಸ್ಸಿಗೆ ನಾಟುವಂತೆ ಮಾಡುವುದೇ ರತ್ನಾಕರನ ಕವಿತೆಯ ಗುಟ್ಟು. 'ನಗಲೆಡೆಯುಂಟೆ? ತುತ್ತಿಡೆ ಮನಂಬಹುದೇ?' ಎಂದು ಛೀಮಾರಿ ಮಾಡಿ ಅಷ್ಟಕ್ಕೇ ಬಿಡಲಾರ. ವಾಚಕರ ಹೃದಯದಲ್ಲೂ ತಮ್ಮ ಬವಣೆಯ ಬಾಳ್ವೆಯನ್ನು ನೆನೆದು ಜುಗುಪ್ಸೆ ಹುಟ್ಟುವ ತನಕ ಬಿಡದೆ ಹಾಡಿದುದನ್ನೇ ಹಾಡುವನು. ಹಾಡು ಅದೇ ಆದರೂ ರಾಗದಲ್ಲಿ ಏರಿಳಿತವಿರುವುದರಿಂದ ರತ್ನಾಕರನ ಚರ್ವಿತಚರ್ವಣದಲ್ಲಿ ಎಂದೂ ಬೇಸರ ಬರಲಾರದು. "ತಾಯ ಬಸುರಲ್ಲಿ ಮಾಸನ್ನು ಹೊದ್ದುಕೊಂಡು ಹೊರಳಾಡಿದ್ದಾಯಿತು; ಹೇಸದೆ ಮೂತ್ರಮಾರ್ಗದಿಂದ ಬಂದುದಾಯಿತು! ಮೊರದೊಳಗೆ ಮಲಮೂತ್ರದಲ್ಲಿ ಕೂಸಾದಂದು ತೇಲಿ ಮುಳುಗಿದ್ದಾಯಿತು! ಆ ಹೊಲಸನ್ನೆಲ್ಲ ಮರೆತು ತೋರ್ಕೆಯ ಯೌವನವನ್ನು ಸ್ಥಿರವೆಂದು ನಂಬಿರುವೆನಲ್ಲ! ಅಪರಾಜಿತೇಶ, ನೀನಾದರೂ ಮತಿದೋರ ಬಾರದೆ?"—ಎಂದು ರತ್ನಾಕರ ಅಂಗಲಾಚಿರುವನು. ಲೌಕಿಕ ಸಂಪದದತ್ತ ಇಣಿಕಿ ನೋಡುವ ಮನದಿದಿರು ಕೊಳಚೆಯ ಕೋಟೆ ಕೊತ್ತಳದಿಂದಾವೃತವಾದ ಬಾಳಿನ ನಾನಾ ಹಾಳೆಗಳನ್ನು ತೆರೆದು ತೆರೆದು ತೋರುತ್ತಿರುವನು.

ಎಷ್ಟೇ ಮಧುರವಾಗಿ ಹಾಡಿದರೂ ರಾಗ, ತಾಳಗಳಲ್ಲಿ ವೈವಿಧ್ಯತೆಯಿಲ್ಲದಿದ್ದರೆ ಕೇಳುವವರಿಗೆ ಬೇಸರಬಾರದಿರದು. ಈ ಗುಟ್ಟನ್ನರಿತ ಸಂಗೀತಗಾರ ವಿವಿಧ ರಾಗಗಳಲ್ಲಿ ಏರಿಳಿತವನ್ನು ತಂದೊಡ್ಡಿ ಸಮ್ಮೋಹನಾಸ್ತ್ರವನ್ನು ಬೀರುವಂತೆ ರತ್ನಾಕರನೂ ಕೂಡ ಶ್ರಾವಕರನ್ನು ಒಮ್ಮೆ ಕೆರಳಿಸುವನು, ಒಮ್ಮೆ ಮುದ್ದಿಸುವನು. ಮಗದೊಮ್ಮೆ ಗದರಿಸುವನು. ನಾನಾ ರೀತಿ ಪುಂಗಿಯನ್ನೂದಿ ಶ್ರಾವಕರನ್ನಾಕರ್ಷಿಸಿ ವಿಷಯಲಂಪಟತನವೆಂಬ ಘಟಸರ್ಪದ ಲೋಲುಪತೆಯ ನಂಜಿನಪಲ್ಗಳನ್ನು ಕಿತ್ತು ತನ್ನ ಕಾವ್ಯಗಾರುಡಿಯನ್ನು ಪ್ರದರ್ಶಿಸುವನು!

ಪಗೆಯ ವಶಕ್ಕೆ ಸಿಲ್ಕಿ ಸೆರೆಯಿರ್ದ ಮಹಾನುಭವಂಗೆ ನಿದ್ರೆ ತಾ |
ನೊಗೆವುದೊ ಭೋಗದಿಚ್ಛೆಯೆ ವಿಡಾಯವೆ ಮಚ್ಚರವುಂಟೆ ದಿವ್ಯಯೋ ||

೧. ಮ. ವ. ೨೦.

ಗಿಗೆ ರಿಪುಮೋಹಮಂ ಜಯಿಸಿ ಮೆಯ್ಸೆರೆಯಂ ಕಳೆವಂದು ಜೋಕೆಯು |
ಜ್ಜುಗವದೆ ಚಿಂತೆಯ್ಮೆಸೆ ಪೆರತೊಂದಿಹುದೇ ಅಪರಾಜಿತೇಶ್ವರಾ ‖ ೪೭ ‖

"ಹಗೆಯ ಕೈಲಿ ಸಿಲ್ಕಿ ಸೆರೆಯಾದಂಥ ಮಹಾಪುರುಷನಿಗೆ ನಿದ್ರೆ ಬಂದೀತೆ? ಮೋಹಾಸುರನ ಹಿಡಿತದಿಂದ ಪಾರಾಗಬೇಕೆಂದಿರುವ ಪರಮಯೋಗಿಗೆ ಭೋಗಾಸಕ್ತಿ ಹುಟ್ಟೀತೆ? ಮುಮ್ಮೈ ಸೆರೆಯಿಂದ ಪಾರಾಗುವ ಚಿಂತೆಯೊಂದೇ ಆತನನ್ನು ಕಾಡುತ್ತಿರುವಾಗ ಬಡಾಯಿಗಾಗಲಿ, ಮಾತ್ಸರ್ಯಕ್ಕಾಗಲಿ ವೇಳೆಯುಂಟೆ? ಹೇಗಪ್ಪ ಪಾರಾಗುವುದು, ಎಂದಿಗೆ ಬಿಡುಗಡೆ ದೊರೆತೀತು ಎಂದು ಎಚ್ಚರದಿಂದ ಪ್ರಯತ್ನಶೀಲನಾಗುವುದೊಂದೇ ಆತನ ಗುರಿಯಾಗಿರುವಾಗ ಅನ್ಯ ಆಲೋಚನೆಗಳಿಗೆಡೆಯೆಲ್ಲಿ?"—ಇಲ್ಲಿಯ ವಿವರಣೆ ಹೃದಯಸ್ಪರ್ಶಿಯಾಗಿದೆ. ಉನ್ನತ ಧ್ಯೇಯಗಳು, ಉದಾತ್ತ ಭಾವನೆಗಳು ಮನದಲ್ಲಿದ್ದಾಗ ಕೀಳು ಭಾವನೆಗಳು ಹುಟ್ಟಲಾರವು. ಅಂಥ ವ್ಯಕ್ತಿ ಲೌಕಿಕಾಸಕ್ತಿಗಳನ್ನು ಹತ್ತಿಕ್ಕಿಯಾದರೂ ತನ್ನ ಧ್ಯೇಯವನ್ನು ಸಾಧಿಸಿಯಾನು. ಪರಮಪರಂಜ್ಯೋತಿರೂಪನಾದ ಆತ್ಮನನ್ನು ಕರ್ಮಸಂಕುಲ ಮುತ್ತಿ ಉರಿದು ಮುಕ್ಕುತ್ತಿರುವುದನ್ನು ಕಾಣಬಲ್ಲ ದಿವ್ಯದರ್ಶಿಯ ಮನೋವೇದನೆ ಎಷ್ಟಿರಬಹುದೆಂಬುದನ್ನು ರತ್ನಾಕರ ಅನುಭವಿಸಿರುವನು. ತನ್ನ ಸ್ವಾನುಭವವನ್ನೇ ಕಾವ್ಯಮಯವಾಗಿ ತಳಮಳಿಸಿರುವನು. ಬೆನ್ನಹಿಂದೆ ಕತ್ತಿಯಿರಿದು ಅಟ್ಟಿಸಿಕೊಂಡು ಬರುತ್ತಿರುವ ಅರಿಸಂಕುಲವನ್ನು ಕಾಣದ ನಾವು ಒನಪು ಒಯ್ಯಾರವನ್ನು ಮಾಡಿಕೊಂಡು ಅಲ್ಲಲ್ಲೇ ಕಣ್ಸನ್ನೆಯಿಂದ ಕರೆಯುತ್ತಿರುವ ಹೆಣ್ಣು ಹೊನ್ನು ಮಣ್ಣು ಈ ತ್ರಿಶೂಲಕ್ಕೆ ಮೈಯೊಡ್ಡಿ ಅಗಚಾಟಲುಪಡುತ್ತಿದ್ದೇವೆ. 'ಕಾಲಲಬ್ಧಿ' ದೊರೆತು, ನಮ್ಮ ಹಿಂದಿರುವ ಭಯಾನಕವಾದ ಕರ್ಮದೈತ್ಯನ ಒಳಸಂಚಿನನುಭವ ಆಯಿತೆಂದರೆ ಒಂದೇ ಚಣದಲ್ಲಿ ಮನಮೋಹಕವಾದ ಲೌಕಿಕ ಸಂಪದವನ್ನೆಲ್ಲ ತ್ಯಜಿಸಿ ಹೊರಡದಿರಲಾರೆವು. ಅಂಥ ಕಾಲ ಬಂದಾಗ ನೀರಲ್ಲಿ ಮುಳುಗಿ ಹೋಗುತ್ತಿರುವವನು ಗುಟುಕು ಗಾಳಿಗಾಗಿ ತಳಮಳಗೊಳ್ಳುವಂತೆ ಸಾಧಕನೂ ಕೂಡ ಆತ್ಮೋದ್ಧಾರಕ್ಕಾಗಿ ಚಡಪಡಿಸದಿರನು. ಕಾಲಲಬ್ಧಿ ಬರುವ ತನಕ ಪ್ರತಿಯೊಬ್ಬನೂ ಕೈಕಟ್ಟಿ ನಿರುದ್ಯೋಗಿಯಾಗಿರಬೇಕೆ ಎಂಬ ಪ್ರಶ್ನೆಯೇಳುವುದು. ನಮ್ಮ ಮನೆಗೂ ವಿದ್ಯುತ್ ಹರಿಸಬೇಕೆಂದು ವಿದ್ಯುತ್ ಕೇಂದ್ರಾಗಾರದವರನ್ನು ಕೋರುತ್ತಿರಬೇಕು; ಜೊತೆಗೆ ನಮ್ಮ ಗೃಹವನ್ನು ವಿದ್ಯುತ್ ಸ್ವೀಕರಿಸಲು ಬೇಕಾದ ಪೂರ್ವಸಿದ್ಧತೆಯೊಡನೆ ಸಜ್ಜುಗೊಳಿಸಿ ಕಾಯುತ್ತಿರಬೇಕು. ಅನುಪ್ರೇಕ್ಷೆಗಳನ್ನು ಚಿಂತಿಸುವುದರಿಂದ, ಶುಭ ಪರಿಣಾಮಗಳಿಂದ, ಕಾರಣಭಾವನೆಗಳಿಂದ ಕಾಲಲಬ್ಧಿಯನ್ನು ಹಾರೈಸಿಕೊಂಡು ಕಾಯುತ್ತಿರಬೇಕು.

ಓದುವ ಪೇಳ್ವ ಕೇಳ್ವ ಪರಿಭಾವಿಪ ಬಲ್ಲನಿತಂ ಪೆರರ್ಗೆ ತಾ |
ನೋದಿಪ ಮೂರು ಸಂಜೆಗಳನಾರು ಸುಪರ್ವದಿನಂಗಳಂ ಸದಾ ‖
ಸಾಧಿಸಿತಕ್ಕ ತತ್ಕ್ರಿಯೆಗಳಂ ನೆಗಳ್ದಿಂತುಟು ದಂದುಗಂಗಳಿಂ |
ಪೋದೊಡೆ ಕಾಲಮೆಲ್ಲ ಶುಭಕಾಲವಲಾ ಅಪರಾಜಿತೇಶ್ವರಾ ‖ ೪೮ ‖

"ಮೂರು ಸಂಜೆಗಳಲ್ಲೂ[೧], ಆರು ಪರ್ವದಿನಗಳಲ್ಲೂ[೨] ಓದುತ್ತ, ಹೇಳುತ್ತ, ಕೇಳುತ್ತ,

೧. ಮೂರು ಸಂಜೆ—(೧) ಬೆಳಿಗ್ಗೆ, (೨) ಮಧ್ಯಾಹ್ನ, (೩) ಸಾಯಂಕಾಲ (ಬೈಗು.)
೨. ಪರ್ವದಿನಗಳು—ಪ್ರತಿ ತಿಂಗಳಲ್ಲೂ ಬರುವ ೨ ಪಂಚಮಿ, ೨ ಅಷ್ಟಮಿ, ೨ ಚತುರ್ದಶಿ.

ಚಿಂತಿಸುತ್ತ, ತನಗೆ ತಿಳಿದುದನ್ನು ಭವ್ಯಾವಳಿಗೆ ತಿಳಿಸುತ್ತ ಕಾಲವನ್ನು ಕಳೆದು, ಸಂದರ್ಭೋಚಿತವಾದ ಸತ್ಕ್ರಿಯೆಗಳನ್ನಾಚರಿಸುವುದರಲ್ಲೇ ನಿರತನಾದರೆ ಕಾಲವೆಲ್ಲ ಶುಭಕಾಲವೇ ಆದೀತು!" —ಆತ್ಮಸಾಕ್ಷಾತ್ಕಾರ ಚಿಂತನೆಯಲ್ಲಿ ಮುಳುಗಿದವನಿಗೆ ರಾಹುಕಾಲವೂ ಇಲ್ಲ, ಗುಳಿಕಕಾಲವೂ ಇಲ್ಲ. ಸ್ವಾರ್ಥತೆಯನ್ನು ಸಾಧಿಸಲು ಹೊರಟಂಥವರು ರಾಹುಕಾಲ, ಗುಳಿಕಕಾಲಗಳನ್ನು ತಪ್ಪದೆ ನೋಡುವರು. ಪರಿಗ್ರಹಪೀಡಿತರನ್ನು ಗ್ರಹಗತಿಗಳು ಕಾಡಿಸುವುವೇ ವಿನಹ ಅಪರಿಗ್ರಹಿಯ ತಂಟೆಗೆ ಯಾವ ಗ್ರಹವೂ ಬರಲಾರದು.

ಯೋಗಿಯ ನಡೆನುಡಿಯ ಒಪ್ಪವನ್ನು ಯೋಗಿಯಾದ ರತ್ನಾಕರನೇ ಚಿತ್ರಿಸಬೇಕು.

ನುಡಿವೊಡೆ ದೇವ ನಿಮ್ಮಯ ಮಹಾಸಭೆಯೊಳ್ನುಡಿವಂತಿರೋಜೆಯಿಂ |
ನುಡಿವುದು ಪೋಗುವಲ್ಲಿ ಮುಳುವಟ್ಟೆಯೊಳೆಯ್ದುವನಂತಿರೋಜೆಯಿಂ ‖
ನಡೆವುದು ಕುಳ್ಳಿತಿರ್ಪೊರಗುವುಣ್ಬೆಡೆಯೊಳ್ಸೆರೆಸಿಲ್ಕಿದಾತನಂ
ತೊಡನೆ ನಿಜಾತ್ಮ ಚಿಂತೆಯೊಳಿಹಂಗಘವೇನಪರಾಜಿತೇಶ್ವರಾ ‖ ೪೯ ‖

"ದೇವ, ನಾವು ಬಾಯಿಬಿಟ್ಟೆವೆಂದರೆ ಸಮವಸರಣದಲ್ಲಿ ದಿವ್ಯಧ್ವನಿ ಹೊರಟಂತಿರಬೇಕು. ಮುಳ್ಳುಹಾದಿಯಲ್ಲಿ ದಾರಿಗ ನಡೆದಂತೆ ನಾವು ಸಂಸಾರದಲ್ಲಿ ಮೈಯೆಲ್ಲ ಕಣ್ಣಾಗಿ ಸಾಗಬೇಕು. ಕೂರುವಾಗ, ಒರಗುವಾಗ, ಹಾಗೂ ಉಣ್ಣುವಾಗ ಶತ್ರುಗಳಿಂದ ಸುತ್ತುಗಟ್ಟಿದ ಸೆರೆಯಾಳಿನಂತೆ ವರ್ತಿಸಿ ಸದಾ ಆತ್ಮಚಿಂತನೆಯಲ್ಲಿರುವುದಾದರೆ ಪಾಪಕರ್ಮ ನಮ್ಮ ಬಳಿ ಸುಳಿಯಲಾದೀತೆ?" —ಆತ್ಮವಿಜ್ಞಾನಿಯ ಆಚರಣೆಯನ್ನು ರತ್ನಾಕರ ಇಲ್ಲಿ ನಿರ್ದೇಶಿಸಿರುವನು. ಆತ್ಮವಿಜ್ಞಾನಿ ನುಡಿದರೆ ಒಳ್ಳೆಯದನ್ನೇ ನುಡಿಯುತ್ತಾನೆ. ಸಂಸಾರದಲ್ಲಿ ತುಂಬಿ ತುಳುಕಿರುವ ಮಾನಮಾಯಾ ಮೋಹಲೋಭವೆಂಬ ಮುಳ್ಳುಗಳು ತನಗೆ ತಾಕದಂತೆ ಆತ ನಡೆಯುತ್ತಾನೆ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ 'ಅಹುದಹುದೆನ'ಬೇಕು.
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ?[೧]

ಅನುಭವಮಂಟಪದ ಕಾರ್ಯದರ್ಶಿಗಳಾಗಿ ಬಸವಣ್ಣನವರು ನುಡಿದಿರುವುದಕ್ಕೂ ಅಭಿನವ ಸಮವಸರಣದ ಚಾಲಕನಾಗಿ[೨] ರತ್ನಾಕರ ಹೇಳಿರುವುದಕ್ಕೂ ಅಂತರವಿದೆಯೆ?

ಲೋಕದ ವಾರ್ತೆಯೊಳ್ಬದಿರನಾತ್ಮಹಿತಂ ಪೊರಗಾದ ಮಾತಿನೊಳ್ |
ಮೂಕತೆ ತನ್ನ ದೇಹ ಪರದೇಹದ ನೋಟದೊಳಂಧಕಂ ಪ್ರಮಾ ‖
ದ್ಯೆಕದೆ ಕಂಡು ರಾಗಿಸಿದೊಡಂ ಸುಡು ಮಾಂಸವಿಕಾರಮೆಂದು ಮೆ |
ಯ್ಯೋಕರಿಪಾತನಂತಕನನಂಜಿಸನೇ ಅಪರಾಜಿತೇಶ್ವರಾ ‖ ೫೦ ‖

೧. ಬ. ವ. ೮೦೨.
೨. ಈ ಮಾತು ಕಾಲ್ಪನಿಕವಾದುದು. ಏಕೆಂದರೆ ಪಂಚಮಕಾಲದಲ್ಲಿ ಭರತಖಂಡದಲ್ಲಿ ಸಮವಸರಣ ವಿರುವುದಿಲ್ಲ.

"ಲೌಕಿಕ ವಾರ್ತೆಯಲ್ಲಿ ಕಿವುಡಾಗಿದ್ದು, ಆತ್ಮಕ್ಕೆ ಹಿತಕಾರಿಯಲ್ಲದ ಮಾತು ಬಂದಾಗ ಮೂಕನಂತಿದ್ದು, ತನ್ನ ಹಾಗೂ ಅನ್ಯರ ದೇಹ ಲಾವಣ್ಯದ ಬಗ್ಗೆ ಕುರುಡನಂತಿದ್ದು, ಅಪ್ಪಿತಪ್ಪಿ ಮೋಹವುಂಟಾದರೆ 'ಮಾಂಸಮಯವಾದ ದೇಹಸೌಂದರ್ಯಕ್ಕೆ ಬೆಂಕಿಹಾಕ' ಎಂದು ಕೊಕ್ಕರಿಸುವವನಿದಿರು ಜವನ ಬೇಳೆ ಏನೂ ಬೇಯಲಾರದು"—ಪ್ರಬುದ್ಧಾವಸ್ಥೆಗೇರಿದ ಸಾಧಕನ ವ್ಯಕ್ತಿತ್ವವನ್ನು ರತ್ನಾಕರ ಇಲ್ಲಿ ಚಿತ್ರಿಸಿರುವನು. ಆತ್ಮನ ಅನಂತಸಿರಿ, ಸಾಧಕನ ಬಗೆಗಣ್ಣೆದಿರು ನರ್ತಿಸುವಾಗ ಆ ಮಹಾದೃಶ್ಯದಲ್ಲಿ ತಲ್ಲೀನನಾದ ಯೋಗಿಗೆ ಅನ್ಯದೃಶ್ಯಗಳಾಗಲಿ, ಅನ್ಯ ವಚನಗಳಾಗಲಿ ಎಂದೂ ರುಚಿಸವು. ಅಳಿಮಾನಸರು ಯಾವುದಕ್ಕಾಗಿ ಅರ್ಹರ್ನಿಶಿ ಪರಿತಪಿಸುವರೋ ಆ ಸಂಪದವೇ ಯೋಗಿಗೆ ಅಸಹ್ಯಕರವಾಗಿ ಕಾಣುವುದು. 'ಲೋಕ ಎಚ್ಚರಗೊಂಡಿರುವಾಗ ಯೋಗಿ ಗೊರಕೆ ಹೊಡೆಯುತ್ತಾನೆ, ಲೋಕ ಗೊರೆಕೆಹೊಡೆಯುವಾಗ ಯೋಗಿ ಕಣ್ಬಿಟ್ಟು ಎಚ್ಚರಗೊಂಡಿರುವನು' ಎಂದು ಭಗವದ್ಗೀತೆ ಸಾರುವುದು.[1] ರತ್ನಾಕರನ ಈ ಶ್ಲೋಕ ಅಂಥ ಅಭಿಪ್ರಾಯವನ್ನೇ ಕಾವ್ಯಮಯವಾಗಿ ಬಿತ್ತರಿಸಿದೆ.

ಕಣ್ಣು, ಬಾಯಿ, ಕಿವಿ, ಮನಸ್ಸು ಇವು 'ಕರ್ಮಾಣುಗಳು' ಹರಿದು ಬರಲು ತೆರೆದ ದ್ವಾರಗಳಿದ್ದಂತೆ. ಇವನ್ನು ಸಂದರ್ಭೋಚಿತವಾಗಿ ವಿವೇಚನೆಯಿಂದ ತೆರೆದು ಮುಚ್ಚುತ್ತಿದ್ದರೆ ಎಷ್ಟೋ ಅನಿಷ್ಟಗಳನ್ನು ತಡೆಗಟ್ಟಬಹುದು.

ನೋಡಿದೊಡೆಲ್ಲಿಯುಂ ತನುವಿನೊಳ್ಮತಿ ಸೋಲದೆ ಶುದ್ಧಜೀವನಂ |
ನೋಡುವ ಮಾತನಾಡಿದೊಡೆ ಶಾಂತಿ ಶುಭಂ ಪವಣಾಗೆ ಪೇಳ್ವ ತಾಂ ||
ಪಾಡಿದೊಡತ್ತಲಿತ್ತ ತೊನೆದಾಡದೆ ನಿನ್ನೊಳೆ ನಟ್ಟ ಚಿತ್ತದಿಂ
ಪಾಡುವನಾಗಿಯುಂ ಕಡು ವಿರಾಗಿಯಲಾ ಅಪರಾಜಿತೇಶ್ವರಾ || ೫೧ ||

"ಯೋಗಿ ಯಾರನ್ನೇ ಕಾಣಲಿ ಮೇಲಿನ ರೂಪಕ್ಕೆ ಮರುಳಾಗದೆ ನಿರ್ಮಲಾತ್ಮವನ್ನು ಮಾತ್ರ ಈಕ್ಷಿಸುವನು; ಬಾಯ್ತೆರೆದರೆ ಶಾಂತಿಪ್ರದವೂ ಶುಭಪ್ರದವೂ ಆದ ನುಡಿಯನ್ನು ಹಿತಮಿತವಾಗಿ ಮಾತಾಡುವನು; ಅಂಥವನು ಪಾಡುವಾಗ ಅತ್ತಿತ್ತ ಕುಲುಕಾಡದೆ ಭಗವಂತನಲ್ಲಿ ತನ್ಮಯನಾಗಿ ಹಾಡುವನು. ಇಂತೆಸಗಿಯೂ ಅವನು ಕಡುವಿರಾಗಿಯೆನಿಸುವನು. ವಿರಾಗಿಯೆಂದರೆ ಲೌಕಿಕಾಸಕ್ತಿಯಿಂದ ಬಿಡುಗಡೆ ಹೊಂದಿ ಪಾರಮಾರ್ಥಿಕಾಸಕ್ತಿಯನ್ನು ಬೆಳೆಸಿಕೊಂಡವನೆಂದೇ ಅರ್ಥ. ಪಾರಲೌಕಿಕಾಸಕ್ತಿಯಿಂದ ತುಂಬಿ ತುಳುಕುವವರನ್ನೇ ಅನಾಸಕ್ತರೆನ್ನುವುದು.

ಕಣ್ಮಲರಳ್ಕರಿಂದೊಸರೆ ನಿಮ್ಮನೆ ನೋಡುತಮಂತರಂಗದೊಳ್ |
ಪೊಣ್ಮೆವಿಶೋಧಿ ಭಾವಿಸುತೆ ನಾಲಗೆ ರಾಗಿಸೆ ಪಾಡುತಂಗದೊಳ್ ||
ಉಣ್ಮರೆ ರೋಮಜಾಲವೆರಗುತ್ತನುಕಂಪನವೆತ್ತ ಕೆಯ್ಗಳಿಂ |
ದಣ್ಮಿ ತವಾಂಘ್ರಿಗಳ್ಗಲರನರ್ಚಿಪೆನೆಂದಪರಾಜಿತೇಶ್ವರಾ || ೫೨ ||

"ದೇವ, ನಿಮ್ಮನ್ನು ನೋಡುವಾಗ ಪ್ರೇಮವುಕ್ಕಿ ಆನಂದಜಲ ಸುರಿಯಬೇಡವೆ? ಅಂತರಂಗ ನಿಮ್ಮನ್ನು ರೂಪಿಸಿಕೊಳ್ಳುವಾಗ ಪಾವನಗೊಂಡು ಬಿರಿಯಬೇಡವೆ? ನಿಮ್ಮನ್ನು ಕೊಂಡಾಡಿ ನಾಲಗೆ ರಾಗಿಸಬೇಡವೆ? ಅಂಗಾಂಗದಲ್ಲೆಲ್ಲ ರೋಮಾಂಚನವಾಗಿ ಪ್ರೇಮಾತಿರೇಕ

೧. ಅ. ಯೋ. II-೬೯.

ದಿಂದ ನಿಮ್ಮ ಚರಣಗಳನ್ನು ಕೈಯಾರೆ ಮುಟ್ಟಿ ಕುಸುಮವನ್ನರ್ಪಿಸಬೇಡವೆ? ಅಪರಾಜಿತ, ಇಂಥ ಪರಮಭಕ್ತಿಯನ್ನು ನನಗೆಂದು ದಯಪಾಲಿಸುವೆ ಅಯ್ಯಾ?

ಕರಣಂಗಳ್ ಕಳೆಯೇರೆ ಲೋಚನಯುಗಂ ನೀರೇರೆ ಮೆಯ್ಯೆಲ್ಲವಂ |
ಕುರವೇರಲ್ ನುಡಿ ಕಂಪವೇರೆ ಚರಣಂಗಳ್ ಲೀಲೆಯೇರಲ್ ಮೊಗಂ ||
ಸಿರಿಯೇರಲ್ ತಲೆಗೇರಿದುತ್ಸವದೆ ನಿಮ್ಮಂ ಪೂಜಿಸುತ್ತಾನು ಮಾ |
ದರದಿಂದೀಕ್ಷಿಸುತಾಡುತಿರ್ಪುದೆನಗಿನ್ನೆಂದೋ ವಿರೂಪಾಕ್ಷನೇ[1]

ರತ್ನಾಕರನ ಕೋರಿಕೆಯೇ ಹರಿಹರನ ಕೋರಿಕೆಯಾಗಿದೆ. ಅನುಭಾವಿಗಳ ಅಂತರಂಗ ಎಲ್ಲಿದ್ದರೂ ಒಂದೆ; ಜಿನಭಕ್ತನಾಗಿರಬಹುದು, ಶಿವಶರಣನಾಗಿರಬಹುದು, ಹರಿದಾಸನಾಗಿರಬಹುದು. ಇವರಿವರ ಆರಾಧನಾದೇವತೆ ಬೇರೆ ಬೇರೆಯಾದರೂ ಇವರೆಲ್ಲರ ಪ್ರಾರ್ಥನೆ ಒಂದೇ ಆಗಿದೆ.

"ಶ್ರೀಕೃಷ್ಣನ ಹೆಸರು ಕಿವಿಗೆ ಬಿದ್ದೊಡನೆಯೇ ಚೈತನ್ಯದೇವನ ಕಣ್ಣುಗಳಿಂದ ಪ್ರೇಮಾಶ್ರು ಸುರಿಯುತ್ತಿತ್ತು. ಭಗವಂತನೇ ನಿಜವಾದ ವಸ್ತು; ಉಳಿದುದೆಲ್ಲ ಅವಸ್ತು. ಮನುಷ್ಯ ಇಚ್ಛೆಪಟ್ಟರೆ ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಲ್ಲ, ಆದರೆ ಏನು ಮಾಡುವುದು; ಆತ ಕಾಮ ಕಾಂಚನಗಳ ಭೋಗದಲ್ಲೇ ಮತ್ತನಾಗಿದ್ದಾನೆ. ಹಾವಿನ ತಲೆಯ ಮೇಲೆ ರತ್ನವಿದೆ, ಆದರೂ ಅದು ಕಪ್ಪೆಯನ್ನು ತಿಂದೇ ಸಾಯುತ್ತದೆ[1]"—ಲೌಕಿಕ ಸೆಳೆತದಿಂದ ಪಾರಾಗಬೇಕಾದರೆ ನಮ್ಮ ಅಂತಃಕರಣದಲ್ಲಿ ಪರಮಾತ್ಮನ ವಿಚಾರವನ್ನು ತುಂಬಿಕೊಳ್ಳಬೇಕು. ತ್ರಿಕರಣಗಳೂ ದೇವನಿಗಾಗಿ ಮೀಸಲಾಗಬೇಕು.

ಮಾತಿನ ಮಾಲೆಯೇಕೆ ಜಿನ ನಿನ್ನೆಡೆ ತನ್ನೆಡೆಯಲ್ಲದನ್ಯರೊಳ್ |
ಪ್ರೀತಿಯ ನಾವನೆಯ್ದಿದನವಂ ತಳುವೇನಳಲೆಯ್ದಿದಂ ಮಹಾ |
ಭೀತಿಯನೆಯ್ದಿದಂ ಭವಸಮುದ್ರಮನೆಯ್ದಿದನೆಂದೊಡಾತ್ಮ ಸ |
ದ್ಭೂತಿಗೆ ನೀನೆ ಮಾನ್ಯ ಪೆರರಿಂ ಫಲವೇನಪರಾಜಿತೇಶ್ವರಾ || ೫೩ ||

"ದೇವ, ನೀನಿರುವ ಜಾಗವೇ ತಾನೂ ತಲುಪಬೇಕಾಗಿರುವೆಡೆಯೆಂಬುದನ್ನು ಮರೆತು ಯಾರು ಅನ್ಯಚಿಂತೆ ಮಾಡುವರೋ ಅವರು ಅಳಲನ್ನಪ್ಪಿಕೊಂಡಂತಾಗುವುದು; ಮಹಾಭೀತಿಗೊಳಗಾದಂತಾಗುವುದು; ಭವಸಮುದ್ರದಲ್ಲಿ ಮುಳುಗಿದಂತೆಯೇ ಲೆಕ್ಕ! ಆತ್ಮಸಿರಿ ಬೇಕೆನಿಸಿದರೆ ನಿನ್ನೊಬ್ಬನನ್ನೇ ಮರೆಹೋಗಬೇಕು! ಅನ್ಯರಿಂದ ಅದನ್ನು ಪಡೆಯಲಾದೀತೆ?"—ಜಿನೇಂದ್ರನಲ್ಲಿ ಅನನ್ಯಶರಣು ಬಂದ ಹೊರತು ಸಂಸಾರದಿಂದ ಪಾರಾಗಲಾರೆವು.

ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ ಬಂಧು ಸ |
ದ್ಭಾವದೆ ಪೂಜಿಪಾತನೆ ಸಖಿಂ ಶ್ರುತಯೋಗಸಮೃದ್ಧನೆನ್ನ ಸಂ |
ಜೀವಕನೆಂಬೆನೇಕಿನಿತು ಪಕ್ಷವಿದೆಂಬೆಯ ನನ್ನ ಮೆಚ್ಚಿನಾ |
ದೇವನಂ ನಚ್ಚಿದಾತನೆನಗನ್ಯನೆ ಪೇಳಪರಾಜಿತೇಶ್ವರಾ || ೫೪ ||

೧. ಹರಿಹರ, ಪಂ. ೧೮

೧. ಶ್ರೀ ರಾ. ಕೃ. ವ. ವೇ., ಪೂ., ಪು. ೧೫೫.

"ದೇವ, ನಿಮ್ಮಡಿಗಳನ್ನು ನೆನೆವರು ಯಾರಾದರೇನಂತೆ ಅವರೆಲ್ಲ ನನ್ನ ಕುಲಬಾಂಧವರಯ್ಯ! ಸದ್ಭಾವನೆಯಿಂದ ನಿನ್ನನ್ನು ಪೂಜಿಸುವಾತ ನನ್ನ ಸಖನಯ್ಯ! ಶ್ರುತಜ್ಞಾನಿಯಾದವನನ್ನು ಭವರೋಗದ ಸಂಜೀವಕನೆನ್ನುವೆನಯ್ಯ! ಇಷ್ಟೊಂದು ಪಕ್ಷಪಾತವೇಕೆಂದರೆ ನಾನು ಮೆಚ್ಚಿರುವ ಜಿನೇಂದ್ರನನ್ನು ನಚ್ಚಿರುವಾತ ಎಂದಿಗಾದರೂ ನನಗನ್ಯನಾದಾನೆ?"—ಎಂದು ರತ್ನಾಕರ, ಅಪರಾಜಿತನನ್ನೇ ಪ್ರಶ್ನಿಸಿರುವನು. ರತ್ನಾಕರಯೋಗಿ ಉದಾರಿ, ಕ್ರಾಂತಿಕಾರಿ, ಮಿಗಿಲಾಗಿ ಸಮಾಜಸುಧಾರಕ. ಮಾನವ ನಿರ್ಮಿತ ಉಚ್ಚ-ನೀಚ ಭೇದಗಳಿಗೆ ಈ ಮಹರ್ಷಿ ಎಂದೂ ಮನ್ನಣೆಯಿತ್ತವನಲ್ಲ. ಸಮತಾವಾದ ಜೈನಧರ್ಮದ ತಿರುಳು; ಧಾರ್ಮಿಕರಂಗದಲ್ಲಂತೂ ಈ ಮಾತು ಅಕ್ಷರಶಃ ಅನ್ವಯಿಸದಿರದು. 'ಮನುಷ್ಯಜಾತಿ ತಾನೊಂದೆವಲಂ'[೧] ಎಂದು ಕನ್ನಡದ ಆದಿ ಕವಿ ಪಂಪ ನಿರ್ಭಯವಾಗಿ ಸಾರಿರುವನು. ಜೈನತತ್ವದ ಪ್ರಕಾರ ಜೀವಕೋಟಿಯೇ ಒಂದು. ಬದ್ಧಜೀವಿ ಎಂದಿನಿಂದ ತನ್ನ ಮುಕ್ತತೆಗಾಗಿ ಹಾತೊರೆವುದೋ ಅಂದಿನಿಂದ ಅದು 'ಭವ್ಯಜೀವ'[೨]ವಾಗುವುದು. ಯಶೋಧರ, ಕೋಳಿಯಾಗಿದ್ದಾಗ ಜೈನತತ್ವವನ್ನು ಗ್ರಹಿಸಿ 'ಸಮಾಧಿಮರಣ'ವನ್ನು ಪಡೆದನು. ಕೋಳಿಗಿರುವ ಅಧಿಕಾರ ಭಕ್ತನಿಗಿಲ್ಲವೆ? ಮರೀಚಿ, ಪ್ರಥಮತೀರ್ಥೇಶನ ಮೊಮ್ಮಗನಾಗಿದ್ದರೂ ಜೊತೆಗೆ ಪ್ರಥಮ ಚಕ್ರೇಶನ ಪ್ರಿಯ ಪುತ್ರನಾಗಿದ್ದೂ ಇವೆಲ್ಲಕ್ಕಿಂತ ಮಿಗಿಲಾಗಿ ದಿಗಂಬರ ದೀಕ್ಷಾಬದ್ಧನಾಗಿದ್ದೂ ಶ್ರದ್ಧೆಯಿಲ್ಲದೆ ಭಕ್ತಿಯಿಲ್ಲದೆ ಭವರೋಗಿಯಾಗಿ ಬವಣೆಪಡಬೇಕಾಯಿತು. ಕೊನೆಗೆ ಸಿಂಹವಾಗಿ ಜನಿಸಿ ಜಿನಧರ್ಮವನ್ನು ಗ್ರಹಿಸಬೇಕಾಯಿತು. ಮಾನವನಾದಂದು, ಅಚ್ಚ ಹದಿನಾರಾಣೆಯ ಜಿನಮತೀಯನಾದಂದು, ಸಾಧುಪರಮೇಷ್ಠಿಯ ವೇಷವನ್ನು ಧರಿಸಿದಂದು ಮರೀಚಿಗೆ ಲಭಿಸದ ಭಕ್ತಿ, ಅದೇ ಕ್ರೂರ ಮೃಗರಾಜನಾದಂದು ತಾನಾಗೇ ಲಭಿಸಿತು! ಅಷ್ಟೇ ಅಲ್ಲ, ಅಂದಿನಿಂದ ಹಂತಹಂತವಾಗಿ ಮೇಲೇರಿ ಮರೀಚಿಯ ಚೇತನ ದೇವೇಂದ್ರನಾಗಿ ಕೊನೆಗೆ ಅಂತಿಮ ತೀರ್ಥಂಕರಪಟ್ಟವನ್ನೇರಿ ಸಮವಸರಣದಲ್ಲಿ ವಿರಾಜಮಾನನಾಗಿ ಸಂಸಾರದ ಬವಣೆಯನ್ನು ವಿವರಿಸಿ ಮುಕ್ತಿಮಾರ್ಗವನ್ನು ಮೂರು ಲೋಕಕ್ಕೂ ಸಾರಿದನು! ಇದನ್ನೆಲ್ಲ ನೋಡಿದರೆ ಕೃತಕವಾದ ಜಾತಿಮತಕ್ಕಿರುವ ಬೆಲೆ ಅರ್ಥವಾಗದಿರದು. ಧರ್ಮಾನುರಾಗ ಅಂತರಂಗದಿಂದುಕ್ಕಿ ಬರಬೇಕೇ ವಿನಃ ಜಾತಿಮದದಿಂದ ಎಂದಿಗೂ ಬರಲಾರದು.

"ಜಾತಿಭೇದವನ್ನು ಒಂದು ವಿಧದಿಂದ ತೆಗೆದುಹಾಕಿ ಬಿಡಬಹುದು. ಆ ಮಾರ್ಗವೇ ಭಕ್ತಿ. ಭಕ್ತರಿಗೆ ಜಾತಿ ಎಂಬುದೇ ಇಲ್ಲ. ಭಕ್ತಿ ದೊರೆಯಿತು ಎಂದರೆ, ದೇಹ, ಮನಸ್ಸು, ಆತ್ಮ ಎಲ್ಲ ಶುದ್ಧವಾಗಿಬಿಡುತ್ತವೆ. ಗೌರಾಂಗ ಮತ್ತು ನಿತಾಯಿ ಆ ಚಂಡಾಲಾದಿಯಾಗಿ ಎಲ್ಲರಿಗೂ ಭಗವನ್ನಾಮವನ್ನು ಕೊಡಲಾರಂಭಿಸಿದರು. ಹೃದಯದಲ್ಲಿ ಭಕ್ತಿ ಇಲ್ಲದೆ ಇತ್ತು ಎಂದರೆ ಬ್ರಾಹ್ಮಣ ಬ್ರಾಹ್ಮಣನಲ್ಲ. ಹೃದಯದಲ್ಲಿ ಅದಿತ್ತು ಎಂದರೆ ಚಂಡಾಲ ಚಂಡಾಲನಲ್ಲ. ಭಕ್ತಿಯೊಂದಿತ್ತು ಎಂದರೆ ಅಸ್ಪೃಶ್ಯ ಜಾತಿಯೂ ಶುದ್ಧ, ಪವಿತ್ರ ಆಗಿಬಿಡುತ್ತದೆ.[೧]"

ಮಾತಂಗೋ ಧನದೇವಶ್ಚ ವಾರಿಶೇಣಸ್ತತಃ ಪರಃ |
ನೀಲೀ ಜಯಶ್ಚ ಸಂಪ್ರಾಪ್ತಾಃ ಪೂಜಾತಿಶಯಮುತ್ತಮಮ್[೨] ||

ಅಹಿಂಸಾಣುವ್ರತದಲ್ಲಿ ಮಾತಂಗನೆಂಬ ಮಾದಿಗನೂ, ಸತ್ಯಾಣುವ್ರತದಲ್ಲಿ ಧನದೇವನೆಂಬ ವ್ಯಾಪಾರಿಯೂ, ಅಚೌರ್ಯಾಣುವ್ರತದಲ್ಲಿ ವಾರಿಷೇಣನೆಂಬ ರಾಜಕುಮಾರನೂ, ಬ್ರಹ್ಮಚರ್ಯದಲ್ಲಿ ನೀಲೀ ಎಂಬ ಕುಮಾರಿಯೂ, ಪರಿಗ್ರಹ ಪರಿಮಾಣವ್ರತದಲ್ಲಿ ಜಯಕುಮಾರ ಇವರೂ ಹೆಸರಾಗಿದ್ದಾರೆ. ಈ ವ್ರತಗಳ ಆಚರಣೆಯಿಂದ ಇವರು ಜಗತ್ತಿನಲ್ಲಿ ಪೂಜನೀಯರೆನಿಸಿದ್ದಾರೆ.

ಸಮ್ಯಗ್ದರ್ಶನ ಸಂಪನ್ನಮಪಿ ಮಾತಂಗ ದೇಹಜಮ್ |
ದೇವಾದೇವಂ ವಿದುರ್ಭಸ್ಮ ಗೂಢಾಂಗಾರಾಂತ ರೌಜಸಮ್[೩] ||

"ಚಂಡಾಲರ ಹೊಟ್ಟೆಯಲ್ಲಿ ಹುಟ್ಟಿದವನಿದ್ದರೂ ಕೂಡ ಸಮ್ಯಗ್ದರ್ಶನದಿಂದ ಕೂಡಿದವನಿದ್ದರೆ ಅವನು ದೇವನೆನಿಸುತ್ತಾನೆ. ಬೂದಿಯಿಂದ ಮುಚ್ಚಿದ್ದರೂ ಕೆಂಡ ಪ್ರಕಾಶಯುಕ್ತವಾಗಿರುತ್ತದೆ" ಎಂದು ಸಮಂತಭದ್ರಾಚಾರ್ಯರು ಸಹಸ್ರಾರು ವರ್ಷದ ಹಿಂದೆಯೆ ಜಾತಿಮದವನ್ನು ಖಂಡಿಸಿ, ಭಗವದ್ಭಕ್ತರಾದ ಹೀನಜಾತಿಯವರನ್ನೂ ಪುರಸ್ಕರಿಸಿರುವರು.

"ಶ್ವಪಚನಾದರೇನು? ಲಿಂಗಭಕ್ತನೇ ಕುಲಜನು[೪]" ಎಂದು ಬಸವಣ್ಣನವರು ಹೀನಜಾತಿಯ ದೈನ್ಯತೆಯನ್ನು ದೂಳಿಪಟ್ಟು ಮಾಡಿ ಕೈಯೊಡ್ಡಿದವರಿಗೆಲ್ಲ ವಿಭೂತಿಯನ್ನು ಕೊಟ್ಟು ಕಿವಿಯೊಡ್ಡಿದವರಿಗೆಲ್ಲ ಪಂಚಾಕ್ಷರಿಯನ್ನಿತ್ತು ಕನ್ನಡನಾಡನ್ನುದ್ಧರಿಸಿದರು!

ರತ್ನಾಕರ ಭಕ್ತರನ್ನೆಲ್ಲ ಜೈನರೆಂದು ಸನ್ಮಾನಿಸಿ, ಭಕ್ತಿಯಿಲ್ಲದ ಮುನಿಗಳನ್ನು ಜಡಿದು ಜಂಕಿಸಿ ಸಮಾಜ ಸುಧಾರಣೆಯೆಸಗಿದ ಮಹಾಮಹಿಮ.[೫] ಚೈತನ್ಯನಂತೆ, ಬಸವಣ್ಣನವರಂತೆ, ರಾಮಾನುಜಾಚಾರ್ಯರಂತೆ, ರತ್ನಾಕರನೂ ಭಗವದ್ಭಕ್ತಿಯನ್ನು ಹರಡಿ, ಸಮಾಜದಲ್ಲಿದ್ದ ಜಾತಿಮದವನ್ನು ತೊತ್ತಳದುಳಿದನು. ಈ ಮಹರ್ಷಿಗಳ ಮಹತ್ಕಾರ್ಯಕ್ಕೆ ಅನಂತರ ಬಂದ ರಾಮಕೃಷ್ಣ ಪರಮಹಂಸರೂ ಪುರಸ್ಕಾರವಿತ್ತು ಭಕ್ತರದೆಲ್ಲ ಒಂದೇ ಜಾತಿಯೆಂದು ಸಾರಿ ಸಾಮಾಜಿಕ ಸುಧಾರಣೆಗೆ ಅಸ್ತಿವಾರವನ್ನು ಹಾಕಿದರು.

---

೧. ಪಂಪ, ಆ. ಪು. XV-೧೪.

೨. ಸಮ್ಯಕ್ತ್ವವನ್ನು ಅತಿಶೀಘ್ರವಾಗಿ ಪಡೆದು ಉದ್ಧಾರವಾಗುವ ಜೀವಿಗೆ 'ಆಸನ್ನಭವ್ಯ' ಎಂದು, ಅಂತು ಉದ್ಧಾರವಾಗುವ ಜೀವಿಗೆ 'ಭವ್ಯ' ಎಂದು, ಬಹುಕಾಲಕ್ಕೆ ಉದ್ಧಾರವಾಗುವ ಜೀವಿಗೆ 'ದೂರಭವ್ಯ' ಎಂದು, ಬಹುಮಟ್ಟಿಗೆ ಸಂಸಾರದಲ್ಲೇ ತೊಳಲಾಡಿಕೊಂಡಿರುವ ಚೇತನಕ್ಕೆ 'ಅಭವ್ಯ' ಜೀವಿಯೆಂದೂ ಕರೆಯುತ್ತಾರೆ.

---

೧. ಶ್ರೀ ರಾ. ಕೃ. ವ. ವೇ., ಪೂ., ಪು. ೧೫೧.

೨. ಶ್ರೀ ಮಿರ್ಜಿ ಅಣ್ಣಾರಾಯರ ರ. ಕ. ಶ್ರಾ., ಪು. ೧೬೭.

೩. ಶ್ರೀ ಮಿರ್ಜಿ ಅಣ್ಣಾರಾಯರ ರ. ಕ. ಶ್ರಾ. ೨೮, ಪು. ೯೭.

೪. ಬ. ವ. ೭೫೮.

೫. ಹರವರ ನುಡಿಯಿಲ್ಲದಾನಿರುತಿರ್ದೆನುಂ | ಡುರುಳಿ ಭಟ್ಟಾರಕರಂತೆ ||
ನೆರಪಿಹೊತ್ತಗೆಗಳ ಹೊರೆಗಟ್ಟಿ ಭವಸೇನ | ಗುರುಗಳಂತವರಾಡುತಿಹರು ||೧೦೨||
ಮೈಯೊಳಿರ್ದಾತ್ಮನ ಬತ್ತಲೆಮಾಡಿ ನಾ | ನೊಯ್ಯನೀಕ್ಷಿಸಿದರೆ ತಾವು ||
ಮೈಯ ಬತ್ತಲೆಮಾಡಿ ಮನವ ಕತ್ತಲೆಮಾಡಿ | ಹುಯ್ಯಲಿಡುತ ಸುತ್ತುತಿಹರು ||೧೦೩||
—ಭ. ವೈ. ಅಂನೇ ಸಂ.

ಲೋಕಮಿದೆಲ್ಲವುಂ ಸ್ಮರಪಿಶಾಚ ವಿಜೃಂಭಿತಂ!

"ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನಬಂಧು" ಎಂಬ ಘನತತ್ತ್ವವನ್ನು ಘೋಷಿಸಿದ ಮೇಲೆ ರತ್ನಾಕರ ಲೋಕದಲ್ಲಿ ಎಷ್ಟು ಜನ ಸ್ವಬಂಧುಗಳು ದೊರೆತಾರೋ ಎಂದು ಹತ್ತೂ ನಿಟ್ಟಿನಲ್ಲಿ ನಿರೀಕ್ಷಿಸುವನು. ಎತ್ತನೋಡಿದರೂ ಸಂಸಾರದ ಸುಳಿಯಲ್ಲಿ ಮುಳುಗುತ್ತಿರುವ ಜೀವಿಗಳೇ ಈತನಿಗೆ ಗೋಚರಿಸುವರು. ಅಮೃತವನ್ನು ಲೋಕಕ್ಕೆ ಹಂಚಲು ಬಂದವರು ಒಬ್ಬರೇ, ಇಬ್ಬರೇ! ಆದರೆ ಎಷ್ಟು ಜನ ಅಮೃತಕ್ಕಾಗಿ ಕೈಯೊಡ್ಡಿದರು? ಅಮೃತ ತೆಗೆದುಕೊಂಡವರಲ್ಲಿ ಎಷ್ಟು ಜನ ಉಂಡು ಅಮರರಾದರು? ಎಷ್ಟೋ ವೇಳೆ ಅಮೃತವನ್ನು ಕೈಯಲ್ಲಿ ಹಿಡಿದು ಕರುಣೆಯಿಂದ ಮಾನವರನ್ನು ಕರೆದ ಮಹಾತ್ಮರನ್ನು ಮಾನವರೇ ಮುಗಿಸಿಬಿಡಲಿಲ್ಲವೆ?

ಲೋಕಮಿದೆಲ್ಲವುಂ ಸ್ಮರಪಿಶಾಚ ವಿಜೃಂಭಿತಮಿಂದ್ರಜಾಲವಿ |
ದ್ಯಾಕಥನಂ ಯಮಾಸುರನ ದೀಪನದಾಹುತಿಯಲ್ಲಿ ಪಕ್ಷದಿಂ ||
ಶೋಕಮನಾರ್ಗೆ ಮಾಳ್ಪೆನೊಲಿದಿರ್ಪೆನದಾರ್ಗೆ ಕನಲ್ವೆನಾರ್ಗೆನಲ್ |
ಮೂಕತೆಯುಂ ದಯೋಕ್ತಿಯೆರಡೇ ಹಿತಮಿನ್ನಪರಾಜಿತೇಶ್ವರಾ || ೫೫ ||

"ಲೋಕದಲ್ಲಿ ಎತ್ತನೋಡಿದರೂ ಸ್ಮರಪಿಶಾಚ ವಿಜೃಂಭಿಸುತ್ತಿದೆ! ಎಲ್ಲಿ ನೋಡಿದರೂ ಇಂದ್ರಜಾಲವಿದ್ಯಾಕಥನವೆ! ಅಲ್ಲಿ ಇಲ್ಲಿ ಎನ್ನದೆ ಎಲ್ಲ ಸ್ಥಳದಲ್ಲೂ ಜವನೆಂಬ ರಕ್ಕಸನ ಉರಿಗಾಲ ತುಳಿತವೆ! ಹೀಗಿರುವಾಗ ಯಾರಲ್ಲಿ ಪಕ್ಷಪಾತವಿಡಲಿ? ಯಾರನ್ನು ಪ್ರೀತಿಸಲಿ? ಯಾರ ಮೇಲೆ ಮುನಿಯಲಿ? ಈಗ ಮೌನ ಮತ್ತು ದಯೋಕ್ತಿ ಇವೆರಡೇ ಹಿತಕಾರಿಯಾದುವು!" —ಎಂದು ರತ್ನಾಕರ ನಿರಾಶನಾಗಿ ನುಡಿದಿರುವನು. ಧರ್ಮವನ್ನು ಅನುಸರಿಸಲು ಎಲ್ಲರಿಗೂ ಹಕ್ಕಿದೆ. ಆದರೆ ಅಂಥ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವ ಜನರೆಷ್ಟಿರುವರು? ಉಪಯೋಗಿಸಿಕೊಳ್ಳುವೆವೆಂದು ಬಂದವರಲ್ಲಿ ಜಾತಿಮದ ಮೊಳೆತು ಧಾರ್ಮಿಕಲೋಕದ ಸುತ್ತ ಮಡಿವಂತಿಕೆಯ ಕೋಟೆ ಕಟ್ಟಿ ತಾವೂ ಅನುಸರಿಸದೆ ಅನುಸರಿಸುವಂಥವರನ್ನೂ ಬಿಡದೆ ಧಾರ್ಮಿಕ ದಿಗ್ಬಂಧನವೆಸಗುತ್ತಿರುವರು! ಮಹಾತ್ಮರು ಮತ್ತೆ ಮತ್ತೆ ಬಂದು ಲೋಕದ ಈ ಅವಸ್ಥೆಯನ್ನು ಕಂಡು ಮಮ್ಮಲ ಮರುಗಿರುವರು. ತನ್ನನ್ನು ಶಿಲುಬೆಗೇರಿಸಿದಾಗ ಯೇಸುಕ್ರಿಸ್ತ ಮಾಡಿದ್ದೇನು? 'ಅಜ್ಞಾನಿ ಜೀವಿಗಳನ್ನು ಕ್ಷಮಿಸಯ್ಯ ತಂದೆ' ಎನ್ನುತ್ತಾ ಕಣ್ಮುಚ್ಚಿದನು. ತನಗೆ ಗುಂಡಿಕ್ಕಿ ಹೊಡೆದ ಘಾತುಕನ ಕಡೆ ಕರುಣಾರ್ದ್ರದೃಷ್ಟಿಯನ್ನು ಬೀರಿ ರಾಮನಾಮವನ್ನು ಜಪಿಸುತ್ತಾ ಮಹಾತ್ಮಾ ಗಾಂಧೀಜಿಯವರು ಪರಂಧಾಮವನ್ನೈದಿದರು! ಲೋಕವನ್ನು ತಿದ್ದಲು ಹೊರಟು ರತ್ನಾಕರ ಪೂರ್ಣ ಸಫಲನಾಗದೆ ಮೌನವಾಗಿ ಜನತೆಯುದ್ಧಾರಕ್ಕಾಗಿ ಪ್ರಾರ್ಥಿಸಿರುವನು. ಅನುಕಂಪೆಯ ಅಸ್ತ್ರವನ್ನು ತೊಟ್ಟು ಲೋಕೋದ್ಧಾರಕ್ಕಾಗಿ ತಳಮಳಿಸಿರುವನು. ಎಲ್ಲ ಮಹಾತ್ಮರೂ ಈ ಅಸ್ತ್ರವನ್ನು ಕಟ್ಟಕಡೆಗೆ ತೊಡಬೇಕಾಗುವುದೋ ಏನೊ.

ಲೋಕದ ಅನಿತ್ಯತೆಯನ್ನೂ ಅನಿಶ್ಚತೆಯನ್ನೂ ಜೈನಕವಿಗಳು ಮತ್ತು ದಾರ್ಶನಿಕರು ಹೃದಯವಿದ್ರಾವಕವಾಗಿ ವಿವರಿಸಿರುವರು! ಶಿಲಾಶಾಸನವಾಗಿ ಕೊರೆದು ನಾಡಿನ ಮೂಲೆ ಮೂಲೆಯಲ್ಲೂ ಸ್ಥಾಪಿಸಿರುವರು. ರತ್ನಾಕರ ಈ ಭಾಗದಲ್ಲೂ ಹಿಂದೆಬಿದ್ದಿಲ್ಲ. ಭರತೇಶ ವೈಭವದಲ್ಲಿ ಇಂಥ ದಾರುಣಮಯ ಚಿತ್ರಗಳಿಗೆ ಅವಕಾಶ ಕಡಮೆಯೆಂದೇ ಹೇಳಬಹುದು.

ಅಲ್ಲಿ ಬರುವುದೆಲ್ಲ ಭೋಗಭಾಗ್ಯದ ಚಿತ್ರಗಳು; ಆಗಾಗ ವೈರ್ಯಾಗಗೊಂಡ ಚೇತನಗಳು ಸರ್ವಸಂಗಪರಿತ್ಯಾಗಿಯಾಗಿ ಮುಕುತಿವನಿತೆಯೊಡನೆ ಸರಸಸಲ್ಲಾಪವೆಸಗುವ ಭವ್ಯದೃಶ್ಯಗಳು; ಇಲ್ಲವೆ ಕೇವಲಜ್ಞಾನ ಕಲ್ಯಾಣಗಳು ಹಾಗೂ ನಿರ್ವಾಣ ಕಲ್ಯಾಣಗಳು. ಅಷ್ಟೋ ಇಷ್ಟೋ ಅಗಲಿಕೆಯ ಅಳಲಿನ ದೃಶ್ಯಗಳಿದ್ದರೂ ಭರತೇಶ ವೈಭವ ಸಾವಿಲ್ಲದ ಕೃತಿಯಾಗಿದೆ! ಒಟ್ಟಿನಲ್ಲಿ ಹೆಸರಿಗೆ ತಕ್ಕಂತೆ ಈ ಕೃತಿ, ವೈಭವಗಳಿಂದ ತುಂಬಿ ತುಳುಕುವ ಕಲ್ಯಾಣಗಳಿಂದ ಕಿಕ್ಕಿರಿದು ಹೋಗಿದೆ! ಲೋಕದ ನೀರ್ಗುಳ್ಳೆಯಂಥ ಬಾಳ್ವೆಯನ್ನು ಕಂಡು ರತ್ನಾಕರ ತನ್ನ ಶತಕದಲ್ಲಿ ಹೃದಯವಿದ್ರಾವಕವಾದ ಚಿತ್ರಗಳನ್ನು ಮೂಡಿಸಿರುವನು.

ಮೊನ್ನೆ ಬರುತ್ತೆ ಕಂಡೆನವನಂ ಮೃತವಾದನೆ ಯಾದನಕ್ಕಟಾ ! |
ನೆನ್ನೆ ಸುಗೋಷ್ಠಿಗೆಯ್ದಿನಿವನೊಳ್ ಲಯವಾದನೆ ಯಾದನಯ್ಯೊ ಇಂ ||
ದೆನ್ನೊಡವಂದನೀತನಕಟಾ ಕಡೆಗಂಡನೆ ಕಂಡನೆಂಬ ಮಾ |
ತಂ ನೆರೆ ಕೇಳುತೆನ್ನೊಡಲ ನಚ್ಚುವೆನೆಂತಪರಾಜಿತೇಶ್ವರಾ || ೫೬ ||

"'ಛೆ! ಮೊನ್ನೆ ಬರುವಾಗ ಆತನನ್ನು ಕಂಡಿದ್ದೆ! ಅಯ್ಯೊ ಸತ್ತು ಹೋದನಂತಲ್ಲ! ಅಕಟ ಇವನ ಜೊತೆಯಲ್ಲೇ ನೆನ್ನೆ ತಾನೆ ಸಭೆಗೆ ಹೋಗಿದ್ದೇನೆ! ಈಗ ಇವನೂ ಮೃತ್ಯುವನ್ನಪ್ಪಿದನೆ! ಈಗ ತಾನೆ ನನ್ನೊಡನೆ ಬಂದಾತ ಕಡೆಗಂಡನೆ? ಅಯ್ಯೋ ಹೊರಟುಹೋದ!' ಇಂಥ ಮಾತುಗಳನ್ನು ಆಗಾಗ ಕೇಳಿಯೂ ನನ್ನೊಡಲನ್ನು ಹೇಗೆ ನಚ್ಚಲಿ ಅಪರಾಜಿತ?"

ಎಲೆಯೆಲೆ ಇತ್ತಲಿರ್ದ ಮೊಗವತ್ತೊಲೆದೀಕ್ಷೆಸೆ ಮುನ್ನ ಕಂಡರೊಳ್ |
ಕೆಲಬರನಲ್ಲಿ ಕಾಣಲರಿದಿಂತುಟು ತೋರುವ ಮಾಯಮಪ್ಪ ಮೆ |
ಯ್ಬಲೆಯೊಳೆ ಬಾಳ್ವೆನೆಂಬ ಮನವಲ್ಲದೆ ತತ್ತನುವಂ ತಪಂಗಳೊಳ್ |
ಸಲಿಸಿ ನಿಜತ್ವಮಂ ಪಡೆಯಲಂಜುವೆನೇಕಪರಾಜಿತೇಶ್ವರಾ || ೫೭ ||

ಛೆ! ಈ ಕಡೆಯಿಂದ ಆ ಕಡೆಗೆ ತಿರುಗಿ ನೋಡುವಷ್ಟರಲ್ಲೇ ಮೊದಲುಕಂಡಿದ್ದವರಲ್ಲೆಷ್ಟೋ ಜನ ಕಣ್ಮರೆಯಾಗಿರುವರು! ಕಾಣುತ್ತಿದ್ದಂತೆ ಬಟ್ಟಬಯಲಾಗುವ ಈ ಮೈಯ ಬಲೆಯಲ್ಲಿ ಬಾಳುವಾಸೆಯಲ್ಲದೆ ಇಂಥ ದೇಹವನ್ನು ತಪಸ್ಸಿನಲ್ಲಿ ತೇದು 'ಕೈವಲ್ಯ'ವನ್ನು ಪಡೆಯಲು ಅಂಜುತ್ತಿರುವೆನಲ್ಲ! ಏಕಯ್ಯ ಅಪರಾಜಿತ, ಇಂಥ ಮನಸ್ಸು?—ಜೈನ ಪರಿಭಾಷೆಯಲ್ಲಿ ಬರುವ ಅನುಪ್ರೇಕ್ಷೆಗಳನ್ನು ಸಂದರ್ಭೋಚಿತವಾಗಿ ರತ್ನಾಕರ, ಶತಕಗಳಲ್ಲಿ ತಂದಿರುವನು. ಈ 'ಅನುಪ್ರೇಕ್ಷೆಗಳನ್ನು ಭಾವಿಸುವುದರಿಂದ ಸಂಸಾರದಲ್ಲಿ ಜುಗುಪ್ಸೆ ಹುಟ್ಟಿ ಧರ್ಮಾನುರಾಗ ಮೊಳೆತು ಆತ್ಮೋದ್ಧಾರಾಕಾಂಕ್ಷೆ ವೃದ್ಧಿಯಾಗುವುದು.

ಸುರಚಾಪಂಬೋಲೆ ವಿದ್ಯುಲ್ಲತೆಗಳತೆರವೋಲ್ ಮಂಜುವೋಲ್‌ತೋರಿ ಬೇಗಂ |
ಪಿರಿಗುಂ ಶ್ರೀರೂಪಲೀಲಾ ಧನವಿಭವ ಮಹಾರಾಶಿಗಳ್ ನಿಲ್ಲವಾರ್ಗಂ ||
ಪರಮಾರ್ಥಂ ಮೆಚ್ಚಿನಾನೀ ಧರಣಿಯೊಳಿರವಾನೆಂದು ಸನ್ಯಾಸನಂಗೆ |
ಯ್ದುರುಸತ್ವನ್ ನಂದಿಸೇನ ಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್[1] ||

---

೧. ಶಾ. ಮಂ., ಶ್ರ. ಬೆ. ೮೮ (ಸು. ಕ್ರಿ. ಶ. ೭೦೦) ಪು. ೧

ಕ್ರಿ. ಶ. ೭೦೦ರಲ್ಲಿ ನಂದಿಸೇನಮುನಿ ಸಂಪತ್ತಿನ ಸಡಗರಕ್ಕೆ ಮರುಳಾಗದೆ ಸಂಸಾರಕ್ಕೆ ಹೇಸಿ "ಶ್ರೀರೂಪ ಲೀಲಾಧನವಿಭವ ಮಹಾರಾಶಿಗಳು ಕಾಮನಬಿಲ್ಲಿನಂತೆ, ಮಿಂಚಿನಂತೆ ಹಾಗೂ ಮಂಜಿನಂತೆ ಮೋಹಕವಾಗಿ ಕಂಡರೂ ಕ್ಷಣದಲ್ಲಿ ಬಟ್ಟಬಯಲಾಗುವುವು! ಯಾರಿಗೂ ಇವು ಸ್ಥಿರವಲ್ಲ. ಪರಮಾರ್ಥವೊಂದೆ ಮೆಚ್ಚುವಂತಹುದು; ನನಗೆ ಈ ಲೋಕ ಸಾಕಾಗಿದೆ" ಎಂದು ಉದ್ಗಾರವೆತ್ತಿ ಅವರು ಸನ್ಯಾಸಿಯಾಗಿ 'ಸಮಾಧಿಮರಣ'ವನ್ನಪ್ಪಿ ದೇವ ಲೋಕಕ್ಕೆ ಹೋದರು. ಜೈನಾತಿಶಯಕ್ಷೇತ್ರಗಳಲ್ಲಿ, ಜೈನಕಾವ್ಯಗಳಲ್ಲಿ ಇಂಥ ಸುದ್ದಿಯನ್ನು ಸಾರುವ ಫಲಕಗಳಿಗೂ ಪುಟಗಳಿಗೂ ಕೊರತೆಯಿದೆಯೆ?

ಪೇಳವೆ ವೇಳೆವೇಳೆಗಿಳಿವಾಯುವನೀ ಗಳಿಯಾರ ಸನ್ನೆಯುಂ |
ಕೋಳಿಯುಮೋದುತಿರ್ಪ ತಿಥಿಪಾಠಕ ಘೋಷಣೆ ತಳ್ತು ಪೇಳೆಯುಂ ||
ಕೇಳುತಮಂತವಕ್ಕಗಿಯದಂಗವಿದಂ ಸ್ಥಿರಮೆಂದೆ ನಚ್ಚಿ ನಿ |
ನ್ನೋಳಿಗದಿಚ್ಚೆಯಂ ಮರೆದು ಕೆಟ್ಟೆನಲಾ ಅಪರಾಜಿತೇಶ್ವರಾ || ೫೮ ||

"ನನ್ನ ಆಯುಸ್ಸು ಸವೆಯುತ್ತಿರುವುದನ್ನು ಗಡಿಯಾರ ಸೂಚಿಸಿತು; ಕೋಳಿ ಕೂಗಿ ನನ್ನನ್ನು ಎಚ್ಚರಿಸಿತು; ತಿಥಿಪಾಠಕರು ಸಾವು ಸನ್ನಿಹಿತವಾಗುತ್ತಿರುವುದನ್ನು ಘೋಷಿಸಿದರು! ಇದನ್ನೆಲ್ಲ ನಾನು ಕಿವಿಯಾರೆ ಕೇಳಿಯೂ ಕಡೆಗಣಿಸಿರುವೆನಲ್ಲ! ಬಿದ್ದುಹೋಗುವ ಈ ದೇಹವನ್ನೇ ನಚ್ಚಿ ನಿನ್ನ ಸೇವೆಯನ್ನು ಮರೆತು ಕುಳಿತು ಕೆಟ್ಟೆನಯ್ಯ ಅಪರಾಜಿತ!"—ರತ್ನಾಕರ ಕಳೆದುಹೋದ ಕಾಲಕ್ಕಾಗಿ ಮಮ್ಮಲ ಮರುಗುತ್ತಿರುವನು. ವ್ಯಾಕುಲನಾಗಿ ಜಿನೇಂದ್ರನಲ್ಲಿ ಕ್ಷಮೆ ಬೇಡುತ್ತಿರುವನು. ಆತ್ಮಪರಿಶೋಧನೆಯೆಂದರೆ ಇದೇ ತಾನೆ? ಲೋಕವನ್ನು ತಿದ್ದಲು ಹೊರಟಂಥವರು ನಡುನಡುವೇ ತಮ್ಮತ್ತ ತಿರುಗಿನೋಡಿಕೊಳ್ಳಬೇಕು. ತನ್ನನ್ನು ತಾನು ಸರಿಪಡಿಸಿಕೊಳ್ಳದವನು ಅನ್ಯರನ್ನು ಹೇಗೆ ತಿದ್ದಿಯಾನು? ಲೋಕದ ಪ್ರತಿಕೂಲ ಪರಿಸ್ಥಿತಿಯನ್ನೇ ರತ್ನಾಕರ ತನ್ನ ವೈರಾಗ್ಯ ವೃಕ್ಷವನ್ನು ಬೆಳಸಲು ನೀರು ಗೊಬ್ಬರವಾಗಿ ಬಳಸಿಕೊಳ್ಳುತ್ತಿರುವನು; ಅನ್ಯರ ಮರಣವನ್ನು ಕಂಡು ತಾನು ಅಮರನಾಗಲು ಪಣತೊಡುತ್ತಿರುವನು!

ಪರನಿಂದೆ ಕೂಡದು

ತಪಸ್ವಿಯಾಗುವುದೆಂದರೆ ವೇಷವನ್ನು ಮಾರ್ಪಡಿಸಿಕೊಂಡರೆ ಸಾಲದು; ವೇಷದ ಜೊತೆಯಾಗಿ ಹೃದಯವೂ ಮಾರ್ಪಡಬೇಕು. ಸನ್ಯಾಸಕ್ಕೆ ಎರಡು ಮುಖವಿದೆ; ಒಂದು ಭಾವಲಿಂಗಿ, ಇನ್ನೊಂದು ದ್ರವ್ಯಲಿಂಗಿ. ಅಂತರಂಗದ ಕಷಾಯ ಕೋಟಲೆಗಳಿಂದ ಪಾರಾದರೆ 'ಅಂತರಂಗ ಸನ್ಯಾಸ' ಲಭಿಸುವುದು. ಆಗ 'ಭಾವಲಿಂಗಿ'ಯಾಗುವನು. ಇದಕ್ಕೆ ಪೂರಕವಾಗುವಂತೆ ಬಹಿರಂಗದ ಪರಿಗ್ರಹಗಳನ್ನೆಲ್ಲ ತೊರೆದಾಗ 'ಬಹಿರಂಗ ಸನ್ಯಾಸ'ವೂ ಲಭಿಸಿದಂತಾಗಿ 'ದ್ರವ್ಯ ಲಿಂಗಿ'ಯೂ ಆಗುವನು. ಇಲ್ಲಿಗೆ ಪರಿಪೂರ್ಣವಾದ ಸನ್ಯಾಸ ಲಭಿಸಿದಂತಾಗುವುದು. ರತ್ನಾಕರ ಅನ್ಯರ ದೋಷಗಳನ್ನು ಟೀಕಿಸುವಂತೆ ತನ್ನ ದೋಷಗಳನ್ನೂ ಟೀಕಿಸಿಕೊಂಡಿರುವನು. ಆಗಾಗ ತನ್ನನ್ನು ತಾನೆ ವಿಡಂಬನೆ ಮಾಡಿಕೊಂಡಿರುವನು.

ಪೊಕ್ಕು ಸಮಾನ ಚಿತ್ತವನೆ ಸಾಧಿಸಿ ಕರ್ಮನಿಬಂಧಮಂ ಲಯ |
ಕಿಕ್ಕುವೆನೆಂದು ತಾಳ್ದು ತಪಮಂ ನಡೆಯುತ್ತೆಡೆಯೊಳ್ಕೆಲಂಬರೊಳ್ ||
ನಕ್ಕು ಕೆಲಂಬರೊಳ್ಮುನಿದು ಬಾಳ್ವುದಿದೇಂ ಬಿಡಪೋಗಿ ಮೂರುಗಂ |
ಟಿಕ್ಕಿದ ಗಾದೆಯಾದೆನುಪಶಾಂತಿಯನೀಯಪರಾಜಿತೇಶ್ವರಾ || ೫೯ ||

"ಅಪರಾಜಿತೇಶ್ವರ, ಸಮಚಿತ್ತದಿಂದ ಬಾಳಿ ಕರ್ಮದ ಕಗ್ಗಂಟನ್ನು ಬಿಡಿಸಿಕೊಳ್ಳಬೇಕೆಂದು ನಾನು ತಪಸ್ವಿಯಾದೆ! ಆದರೆ ಲೋಕದಲ್ಲಿ ಕೆಲವರನ್ನು ಪ್ರೀತಿಯಿಂದ ಕಂಡು ಮತ್ತೆ ಕೆಲವರನ್ನು ದ್ವೇಷಿಸುತ್ತಿರುವೆನಲ್ಲ! ಸಿಕ್ಕನ್ನು ಬಿಡಿಸಲು ಹೋಗಿ ಇನ್ನೂ ಸಿಕ್ಕು ಮಾಡಿದಂತಾಯಿತೆ! ದೇವ, ಉಪಶಾಂತಿಯನ್ನು ನೀಡಯ್ಯ!—ಸಮಾಜ ಸುಧಾರಣೆಯ ಅವಾಂತರದಲ್ಲಿ ಎಷ್ಟೇ ಎಚ್ಚರವಾಗಿದ್ದರೂ ರಾಗದ್ವೇಷ ಮೊಳೆಯದಿರುತ್ತದೆಯೆ? ಅದರಿಂದ ಸುಧಾರಕ ಆಗಾಗ ತನ್ನಂತರಂಗವನ್ನು ತೊಳೆದುಕೊಳ್ಳಬೇಕಾಗುವುದು.

ತುಟ್ಟಿದ ಪಟ್ಟಣಕ್ಕೆ ಪಯಣಂ ಬರುತಿರ್ದವನಲ್ಲಿಗಲ್ಲಿ ತಾಂ |
ಬಿಟ್ಟೆಡೆಯೊಳ್ಪಲಂಬರೊಳಗೆಂತು ಸಮಂಬಡೆದಿರ್ಪನಂತೆ ಕ ||
ಣ್ಣಿಟ್ಟು ನಿಜಾತ್ಮಸಿದ್ಧಿಗೆ ತಪಂಬಡೆವಂ ಪಲರಲ್ಲಿ ಮುಟ್ಟಿಯುಂ |
ಮುಟ್ಟದ ಭಾವದಿಂ ನಡೆಯವೇಳ್ಕುಮಲಾ ಅಪರಾಜಿತೇಶ್ವರಾ || ೬೦ ||

"ವ್ಯಾಪಾರಿ ತನ್ನ ವ್ಯಾಪಾರಕ್ಕಾಗಿ ನಾನಾ ಊರುಗಳನ್ನು ಸುತ್ತುವಾಗ ಎಷ್ಟೋ ಕಡೆ ತಂಗುವನು. ಅವನ ಗುರಿಯೆಲ್ಲ ತನ್ನ ವ್ಯಾಪಾರದ ಕಡೆಗಿರುವುದೇ ವಿನಹ ಅಲ್ಲಲ್ಲಿಯ ಜನರ ನಡೆನುಡಿಗಳನ್ನು ಕಟ್ಟಿಕೊಂಡು ಅವನಿಗೇನಾಗಬೇಕಾಗಿದೆ? ಎಲ್ಲರಿಗೂ ಒಳ್ಳೆಯವನಂತಿದ್ದು ಹಿಂದಿರುಗುವನು. ಅಂತೆ ಸಪಸ್ವಿಯಾದವನು ಆತ್ಮಸಿದ್ಧಿಯತ್ತ ಮಾತ್ರ ಗಮನವಿಟ್ಟಿರಬೇಕು; ನಡುನಡುವೆ ಸಂಧಿಸಿದವರೊಡನೆ ಅಂಟಿಯೂ ಅಂಟದಂತೆ ವ್ಯವಹರಿಸಬೇಕು"—ಯೋಗಿಯಾದವನು ಲೋಕವನ್ನು ಬಿಟ್ಟಿರಲಾಗದಿದ್ದರೂ ಲೋಕದೊಡನೆ ಎಂದೂ ಅಂಟಿಕೊಳ್ಳಬಾರದು; ಊರಿನ ವ್ಯವಹಾರದಲ್ಲಿ ತಲೆಹಾಕದೆ ತನ್ನ ಪಾಡಿಗೆ ತಾನಿದ್ದು ಗುರಿಯನ್ನು ಸಾಧಿಸಿಕೊಳ್ಳಬೇಕು. ಇದಕ್ಕಾಗೆ ಜೈನಯತಿಗಳು ಎಲ್ಲೂ ಬಹುಕಾಲ ನಿಲ್ಲದೆ ಸುತ್ತುತ್ತಿರುವರು.[೧] ಜನದೊಡನೆ, ಊರಿನೊಡನೆ ರಾಗದ್ವೇಷ ಬರದಿರಲೆಂದು ಈ ಕಟ್ಟಳೆಯನ್ನು ಪಾಲಿಸುವರು.

ಆವನೊಳಾದೊಡಂ ಕುಮತಿ ಕಾಳ್ನುಡಿ ಕೀಳ್ನಡೆ ತೋರುತಿರ್ದೊಡಾ |
ಜೀವನೆ ನೈಜವೆನ್ನದೆ ತದೀಯ ಕಷಾಯಗುಣಂಗಳೆಂದವಂ ||
ಭಾವಿಸಿಯಾ ಕಷಾಯತತಿ ತನ್ನೊಳಗಾಗದವೊಲ್ ನಿಜಾತ್ಮನಂ |
ಕಾವುತಮಿರ್ಪವಂ ಸ್ವಪರವೇದಿಯಲಾ ಅಪರಾಜಿತೇಶ್ವರಾ || ೬೧ ||

"ಯಾರಲ್ಲಾದರೂ ದುರ್ಬುದ್ಧಿ, ದುರ್ವಚನ, ದುರಾಚಾರವನ್ನು ಕಂಡಾಗ ಅವನ ಸ್ವಭಾವವೇ ಅಂಥದೆಂದುಕೊಂಡು ಬೇಸರಪಡದೆ ಆ ಗುಣಗಳೆಲ್ಲ ಪುದ್ಗಲಮಯವಾದ **'ಕಷಾಯಕರ್ಮ'**ಗಳೆಂದು ಕರುಣೆ ತೋರಬೇಕು. ಆದರೆ ಅಂಥ **'ಕಷಾಯ'**ಗಳು ತನ್ನಲ್ಲಿ

೧. ಚಾತುರ್ಮಾಸ(ಮಳೆಗಾಲ)ದಲ್ಲಿ ಮಾತ್ರ ಅಹಿಂಸಾ ಪರಿಪಾಲನೆಯ ದೃಷ್ಟಿಯಿಂದ ಸಂಚಾರವನ್ನು ನಿಲ್ಲಿಸುವರು.

ಮೊಳೆಯದಂತೆ ಎಚ್ಚರ ವಹಿಸಿ ತನ್ನಾತ್ಮನನ್ನು ಕಾಪಾಡಿಕೊಳ್ಳಬೇಕು. ಇಂಥ ಭವ್ಯಾತ್ಮನನ್ನು **'ಸ್ವಪರವೇದಿ'** (ತನ್ನ ಹಾಗೂ ಪರವಸ್ತುವಿನ ಜ್ಞಾನವುಳ್ಳವನು) ಎಂದು ಕರೆಯಬಹುದು."— ಆತ್ಮದೊಡನೆ **'ಕರ್ಮಪುದ್ಗಲ'** ಬಂದು ಸೇರಿಕೊಂಡ ನಂತರ ಪ್ರಾರಂಭವಾಗುವುದು ಸೃಷ್ಟಿಯ ಏರುಪೇರುಗಳೆಲ್ಲ! ಭರತೇಶವೈಭವದಲ್ಲಿ ಮೇಲಿನ ಅಭಿಪ್ರಾಯವನ್ನು ರತ್ನಾಕರ ಹೃದಯಂಗಮವಾಗಿ ಬಣ್ಣಿಸಿರುವನು.

ನುಡಿವುದು ಪುದ್ಗಲ ಕೇಳ್ವುದು ಪುದ್ಗಲ ಕ | ಡೆಗೆ ಪುದ್ಗಲ ಸ್ನೇಹಕೋಪಾ ||
ಜಡಿದಿವ ನೂಂಕಿ ನನ್ನೆದೆಯೊಳಿರಯ್ಯ ಬಾ | ನೊಡಲ ಚಿದಂಬರಪುರುಷಾ[1] ||

ಈ ಸಿದ್ಧಾಂತ ಜಿನೇಂದ್ರ ವಚನಾಮೃತ ನವನೀತವಾಗಿದೆ. ನೀಚರ ಮೇಲೆ ಅತಿಯಾಗಿ ಕೋಪಗೊಳ್ಳುವುದರಿಂದ ಯತಿಯ ಆತ್ಮವೂ ಸ್ಪಂದನಗೊಂಡು **'ಕರ್ಮಾಸ್ರವ'**ಕ್ಕೆ ಕಾರಣವಾಗದಿರದು; ದಾರಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆದು ಹಸೆಮಣೆಯನ್ನು ಹಾಕಿದಂತಾಗುವುದು. ಕೋಪತಾಪಗಳನ್ನು ಕುರಿತು ಭಗವಾನ್ ಕುಂದಕುಂದಾಚಾರ್ಯರೂ ಇದೇ ಅಭಿಪ್ರಾಯಪಡುವರು. "ಸ್ತುತಿ ಹಾಗೂ ನಿಂದೆಯ ಮಾತುಗಳೆಲ್ಲ ಪುದ್ಗಲದ ಪರಿಣಾಮಗಳು. ಇದನ್ನು ತಿಳಿಯದೆ ಅಜ್ಞಾನಿ, ಸ್ತುತಿಗೆ ಹಿಗ್ಗಿ ನಿಂದೆಗೆ ಕುಗ್ಗುವನು. ಇವೆಲ್ಲ ತನಗೆ ಎಂದು ತಿಳಿಯುವುದೇ ಭ್ರಾಂತಿಯಾಗಿದೆ. ಇವೆಲ್ಲ ಪುದ್ಗಲದ ಶಬ್ದರೂಪ ಪರಿಣಾಮಗಳಾಗಿವೆ. ಇವು ಆತ್ಮಕ್ಕೆ ಸಂಬಂಧಿಸಿದವುಗಳಲ್ಲ. ಅನ್ಯವಾಗಿವೆ, ಅದಕ್ಕಾಗಿ ಅಜ್ಞಾನಿ ಜೀವವು ನಿನಗೆ ಏನೂ ಅಂದಿಲ್ಲ. ಅಜ್ಞಾನಿಯಂತೆ ಸುಮ್ಮನೆ ಏಕೆ ಸಿಟ್ಟಿಗೆ ಬರುವೆ.[2]"

ಗುಣಿಯೆನಿಸುತ್ತೆ ತಾಂ ನಡೆಯುತಿರ್ದೊಡಮನ್ಯರ ದುರ್ಗುಣಂಗಳಂ |
ಗಣಿಯಿಸಿದಂದು ತಾಂ ಗುಣ ವಿಹೀನನೆಯಂತದರಿಂದೆ ಸರ್ವರೊಳ್ ||
ಗುಣವನೆ ಕಾಣ್ಬೊಡುತ್ತಮಗುಣಕ್ಕವರಂ ತರಲಾರ್ಪೊಡೆಲ್ಲರಂ |
ಗಣಿಯಿಪುದಲ್ಲದಂದವರ ಚಿಂತೆಯದೇಕಪರಾಜಿತೇಶ್ವರಾ || ೬೨ ||

'ತಾನೇನೋ ಸದ್ಗುಣಿಯಾಗಿರಬಹುದು; ಆದರೆ ಅನ್ಯರ ದುರ್ಗುಣಗಳನ್ನು ಎಣಿಸುತ್ತಾ ಹೋದಾಗ ತಾನೂ ಗುಣವಿಹೀನನಾಗದಿರನು. ಅದರಿಂದ ಸರ್ವರಲ್ಲೂ ಸದ್ಗುಣಗಳನ್ನೇ ಕಾಣುತ್ತ ಎಲ್ಲರನ್ನೂ ಸದ್ಗುಣಿಗಳನ್ನಾಗಿ ಮಾಡಲು ಪ್ರಯತ್ನಿಸುತ್ತಿರಬೇಕು. ಅಲ್ಲದಂದು ಅಂಥವರ ಗೊಡವೆಗೇಕೆ ಹೋಗಬೇಕು?"—ಸಾಧಕನ ಮನಸ್ಸು ಸಂಶಯರಹಿತವಾಗಿರಬೇಕು, ನಿರ್ಭಯವಾಗಿರಬೇಕು. ಈ ದೃಢ ನಿರ್ಧಾರ ಲೋಕದಲ್ಲೆಲ್ಲ ಶುಭವನ್ನೇ ಕಂಡಾಗ ಮಾತ್ರ ಬಂದೀತು! ಜೈನಧರ್ಮದಲ್ಲಿ ತತ್ವವನ್ನು ಎರಡು ದೃಷ್ಟಿಯಿಂದ ಅವಲೋಕಿಸುವರು. ಒಂದು ವ್ಯಾವಹಾರಿಕದೃಷ್ಟಿ, ಇನ್ನೊಂದು ನಿಶ್ಚಯ ದೃಷ್ಟಿ. ಯತಿ, ನಿಶ್ಚಯದೃಷ್ಟಿಯತ್ತ ಹೆಚ್ಚು ಗಮನ

೧. ಭ. ವೈ. ೪೮ನೇ ಸಂ. ೧೨೩.
೨. ಣಿಂದಿಯ ಸಂಥು ಯವಯಣಾಣಿ ಪೊಗ್ಗಲಾ ಪರಿಣಮಂತಿ ವಹುಯಾಣಿ |
ತಾಣಿ ಸುಣಿಊಣ ರೂಸದಿ ತೂಸದಿ ಯ ಅಹಂ ಪುಣೋ ಭಣಿದೋ || ೩೭೩ ||
ಪೊಗ್ಗಲದವ್ವಂ ಸದ್ದತ್ತ ಪರಿಣಯಂ ತಸ್ಸ ಜ ಇ ಗುಣೋ ಅಣ್ಣೋ |
ತಹ್ಮಾಣ ತುಮಂ ಭಣಿ ಓ ಕಿಂಚಿವಿ ಕಿಂ ರೂಸಸಿ ಅವುದ್ಧೋ || ೩೭೪ || —ಸ. ಸಾ.

ವಿಡಬೇಕು. ನಿಶ್ಚಯದೃಷ್ಟಿಯಿಂದ ನೋಡಿದಾಗ ಜಗತ್ತಿನ ಜೀವಕೋಟಿಯಲ್ಲಿ ಒಂದೊಂದೂ ಅವ್ಯಕ್ತ ಪರಮಾತ್ಮನ ಸ್ವರೂಪವೇ ಆಗಿದೆ!

ಭವಮಾಲೆಯ ಗುಟ್ಟರಿತವರಾರೂ ಜೀವಿಯ ಗುಣಾವಗುಣಗಳನ್ನು ಅತಿಯಾಗಿ ಮನಸ್ಸಿಗೆ ಹಾಕಿಕೊಳ್ಳುವುದಿಲ್ಲ. ಭವಾವಳಿಯ ನಕ್ಷೆಯನ್ನು ಆದಿಪುರಾಣದಲ್ಲಿ ಸೊಗಸಾಗಿ ಕೊಟ್ಟಿರುವರು.[1]—ಭೋಗಾಕಾಂಕ್ಷೆಯಲ್ಲಿ ಜಯವರ್ಮನಾಗಿದ್ದು ಅನಂತರ ಮಹಾಬಲನಾಗಿ, ಮರಳಿ ಲಲಿತಾಂಗನೆನಿಸಿ, ಮತ್ತೆ ವಜ್ರಜಂಘನಾಗಿ, ಆ ಮೇಲೆ ಭೋಗಭೂಮಿಜನೆನಿಸಿ, ಅನಂತರ ಶ್ರೀಧರದೇವನಾಗಿ, ಮರಳಿ ಸುವಿಧಿನರಾಧಿಪನೆನಿಸಿ, ಅಚ್ಯುತೇಂದ್ರನಾಗಿ, ಸಾಗರದ ತನಕ ರಾಜ್ಯವನ್ನು ಚಕ್ರದಿಂದ ಗೆದ್ದು ವಜ್ರನಾಭಿಯಾಗಿ, 'ಸರ್ವಾರ್ಥಸಿದ್ಧಿ'ಯಲ್ಲಿ ಜನಿಸಿ ಅಹಮಿಂದ್ರನಾಗಿ, ಕೊನೆಗೆ ಭೂಮಿಗವತರಿಸಿ ಆದಿ ತೀರ್ಥೇಶನಾದನು.

ಧನಶ್ರೀಯಾಗಿ, ನಿರ್ನಾಮಿಕೆಯಾಗಿ, ಸ್ವಯಂಪ್ರಭಾದೇವಿಯಾಗಿ, ಶ್ರೀಮತಿಯಾಗಿ, ಭೋಗಭೂಮಿಜೆಯಾಗಿ, ಅನಂತರ ಸ್ವಯಂಪ್ರಭದೇವನಾಗಿ, ಕೇಶವಮಹೀಶನಾಗಿ, ಅಚ್ಯುತ ಪ್ರತೀಂದ್ರನೆನಿಸಿ, ಧನದತ್ತನಾಗಿ, ಅಹಮಿಂದ್ರನಾಗಿ, ಅನಂತರ ದಾನ ತೀರ್ಥ ಪ್ರವರ್ತಕನಾದ ಶ್ರೇಯಾಂಶನಾದನು.

ಅತಿಗೃದ್ಧಮಹೀಶನಾಗಿ, ನಾರಕನಾಗಿ, ವ್ಯಾಘ್ರನಾಗಿ, ಈಶಾನಕಲ್ಪಜನಾಗಿ, ಮತಿವರ ಮಂತ್ರಿಯಾಗಿ, ಅಧೋಗ್ರೈವೇಯಕದಿವಿಜನಾಗಿ, ಸುಬಾಹುಮಹೀಪತಿಯಾಗಿ, ಸರ್ವಾರ್ಥಸಿದ್ಧೀಶ್ವರನೂ ಅಹಮಿಂದ್ರನೂ ಆಗಿ ಕೊನೆಯಲ್ಲಿ ಪ್ರಥಮ ಚಕ್ರೇಶನಾದ ಭರತೇಶನಾದನು." —ಒಂದೊಂದು ಜೀವಿಯ ಓಡಾಟಕ್ಕೂ ತ್ರಿಲೋಕ ಸಾಲದಾಗುವುದು. ಅದು ಎಲ್ಲೇ ಇರಲಿ, ಯಾವ ಅವಸ್ಥೆಯಲ್ಲೇ ಇರಲಿ ಜೈನಧರ್ಮ ಪ್ರತಿಯೊಂದು ಜೀವವನ್ನೂ ಗೌರವವಾಗೇ ಕಾಣುವುದು. ಗುಣಾವಗುಣಗಳು ಜೀವಿಯಲ್ಲಿ ತತ್ಕಾಲಿಕವಾಗಿ ಗೋಚರಿಸುವ ಕರ್ಮಪುದ್ಗಲದ ಏರಿಳಿತವಾಗಿವೆ!

ಸರ್ವಗುಣಂಗಳೊಳ್ ಸುಲಭರಾರ್ಜಿನ ನೀಂ ಪೊರಗಾಗಿ ಲೋಕದೊಳ್ |
ಪರ್ವಿದ ಮಿಥ್ಯೆಯೊಳ್ವಿಷಮಕಾಲದೊಳೀ ನರಕೀಟಕಂಗಳೊಳ್ ||
ಒರ್ವರೊಳಿರ್ದುದೊಂದು ಗುಣಮಂ ಗುಣಕೋಟಿಯೆನುತ್ತೆ ಕಂಡು ತಾ |
ನುರ್ವುವವಂಗೆ ನಿನ್ನ ಗುಣವೊಲ್ದಿರವೇ ಅಪರಾಜಿತೇಶ್ವರಾ || ೬೩ ||

"ದೇವ, ಎಲ್ಲಿ ನೋಡಿದರೂ ಮಿಥ್ಯೆ ಹಬ್ಬಿರುವಾಗ ಈ ಕಲಿಕಾಲದಲ್ಲಿ ಸರ್ವಗುಣಗಳನ್ನೂ ಕಾಣಬೇಕಾದರೆ ನಿನ್ನಲ್ಲಿ ಕಾಣಬಹುದೇ ವಿನ ನರಹುಳಗಳಲ್ಲಿ ಕಂಡೇವೆ? ಮಾನವನಲ್ಲಿರುವ ಒಂದೊಂದು ಗುಣವನ್ನೇ ಗುಣಕೋಟಿಯೆಂದುಕೊಂಡು ನಲಿವಂಥವನಿಗೆ ನಿನ್ನ ಗುಣಗಳಲ್ಲಿ ಇನ್ನೆಷ್ಟು ಪ್ರೀತಿಯಾಗಬೇಡ!" ಮಾನವನ ಇತಿಮಿತಿಯನ್ನು ರತ್ನಾಕರ ಚೆನ್ನಾಗಿ ಚಿತ್ರಿಸಿರುವನು. ನೋಡುವ ದೃಷ್ಟಿಯಲ್ಲಿ ವಾತ್ಸಲ್ಯವಿದ್ದರೆ ಎಂಥವರಲ್ಲಾದರೂ ಸದ್ಗುಣಗಳನ್ನು ಕಾಣಬಹುದು. ಬಾಯಿ ಒಳ್ಳೆಯದಾದರೆ ಊರೂ ಒಳ್ಳೆಯದಾಗುವುದು. ಸಾಧಕನಿಗೆ ತಾಯ್ಗರುಳಿರಬೇಕು.

೧. ಈ ವಿಷಯವನ್ನು ಪಂಪನ ಆ. ಪು. XVI-೫೮ ಶ್ಲೋಕ ಮತ್ತು ವಚನದಿಂದ ಸಂಗ್ರಹಿಸಿರುವೆನು.

ಮಾನವರಲ್ಲಿ ದೋಷಗಳನ್ನು ಹುಡುಕುವುದೇ ಆತನ ಗುರಿಯಾಗಬಾರದು. ಸಕಲ ಜೀವಕೋಟಿಯಲ್ಲೂ ದಯೆಯನ್ನು ಬೀರಿ ಸಾಧಕ ತಾನೂ ಕರುಣಾಲಹರಿಯಾದಾಗ, ಆತ್ಮೋದ್ಧಾರವೂ ಜೊತೆಗೆ ಲೋಕೋದ್ಧಾರವೂ ಆಗದಿರದು. ರತ್ನಾಕರ ಕರುಣಾಲಹರಿಯಾಗಲು ಯತ್ನಿಸಿರುವನು.

ನಿನ್ನನೆ ನಂಬು ನಂಬಿದೊಡೆ ನನ್ನನೆ ನಂಬಿದೆ!

ಮಾನವಲೋಕದ ಅವಾಂತರಕ್ಕೆಲ್ಲ ವಿಷಯಲಂಪಟತನವೇ ಮೂಲ; ಉಳಿದ ದುರ್ಗುಣಗಳೆಲ್ಲ ಒಂದೊಂದಾಗಿ ಅನಂತರ ಕಾಣಿಸಿಕೊಂಡು ಬಾಳ್ವೆಯೆಲ್ಲ ಬಿಡಿಸಲಾರದ ಸಿಕ್ಕಾಗಿ ಲೋಕಕ್ಕೆ ಲೋಕವೇ ಬವಣೆಗೊಳಗಾಗುವುದು. ಒಬ್ಬೊಬ್ಬನ ಬಾಳ್ವೆಯಲ್ಲೂ ಎಂತೆಂಥ ಜಟಿಲ ಸಮಸ್ಯೆಗಳಿದ್ದರೂ ಅವನ್ನು ಬಿಡಿಸಲು ಸರಳವಾದ ಮಾರ್ಗವೊಂದನ್ನು ರತ್ನಾಕರ ಸೂಚಿಸುವನು. ಆಧ್ಯಾತ್ಮಿಕ ಸಂಜೀವಿನಿಯೇ ಸಕಲ ರೋಗಗಳಿಗೂ ಮದ್ದೆಂದು ಈ ಮಹರ್ಷಿ ಭರವಸೆಯಿತ್ತಿರುವನು.

ದುರ್ವಿಷಯಂಗಳೆಂಬ ವಿಷಮಂ ಕುಡಿದಾರ್ತ ವಿರೋಧಮೋಹಮೆಂ |
ಬುರ್ವಿನ ವತ್ಸನಾಭಿಯನೆ ಮೆಚ್ಚಿ ಕಿಡುತ್ತಿದೆ ಲೋಕವಕ್ಕಟಾ ||
ಸರ್ವರ ಮೈಯ್ಯೊಳಾ ವಿಷನಿವಾರಣೆಗಾತ್ಮನಿಜಸ್ವರೂಪದಾ |
ನಿರ್ವಿಷಮುಂಟದಂ ಮರೆದು ನೋವರದೇಕಪರಾಜಿತೇಶ್ವರಾ || ೬೪ ||

"ಲೋಕವೆಲ್ಲ ಹಾಳಾದ ವಿಷಯಲಂಪಟತನವೆಂಬ ವಿಷವನ್ನೀಂಟಿ ಇದರ ಜೊತೆಗೆ ಆರ್ತಧ್ಯಾನದಲ್ಲಿ ಮುಳುಗಿ, ಹಲವರೊಡನೆ ವಿರೋಧ ಬೆಳೆಸಿ, ಕೆಲವರೊಡನೆ ಮೋಹಗೊಂಡು ಅಂತು ಆರ್ತದ್ವೇಷ ಮೋಹವೆಂಬ ಕಾರ್ಕೋಟಕ ವಿಷವನ್ನೇ ನಚ್ಚಿ ನರಳುತ್ತಿದೆಯಲ್ಲ! ಒಬ್ಬೊಬ್ಬರ ಮೈಯಲ್ಲೂ ವಿಷಪರಿಹಾರಕ್ಕೆ ಬೇಕಾದ ಸಂಜೀವಿನಿಯೂ ಉಂಟು; ಅದೇ ಆತ್ಮಸ್ವರೂಪ ಚಿಂತನೆ! ತಮ್ಮಲ್ಲಿರುವ ಅವುಷಧಿಯನ್ನೂ ಮರೆತು ಜನ ಏಕೆ ಕಂಗಾಲಾಗುವರೋ?"

ಅರಿಯಲೆ ಚಿತ್ತಮೀಯದಘಸಂತತಿಯಾತ್ಮನನೆತ್ತಲಾನುಮೊ |
ಲ್ದರಿದೊಡೆಯಸ್ತಬೆಸ್ತವನೆ ಮಾಡುವುದೊರ್ಮೆ ಯಥಾರ್ಥಮಾಗಿ ತಾ ||
ನರಿದೊಡಮೇನೊ ತನ್ನೊಳಗೆ ತನ್ನನೆ ಭೇದಿಸಿ ಶುದ್ಧ ಸಿದ್ಧನೆಂ |
ದರಿವಿನೊಳೀಕ್ಷಿಸಲ್ಕೆ ಬಿಡದಚ್ಚರಿ ನೋಡಪರಾಜಿತೇಶ್ವರಾ || ೬೫ ||

"ಮನಸ್ಸು ಆತ್ಮವನ್ನರಿಯದಂತೆ ಪಾಪಸಮೂಹ, ಸರ್ಪಕಾವಲಾಗಿದೆಯಲ್ಲ! ಅಪ್ಪಿತಪ್ಪಿ ಆತ್ಮನನ್ನರಿಯಲು ಪ್ರಯತ್ನಿಸಿದಾಗ ಆ ಪಾಪರಾಶಿ ಮೇಲೆರಗಿ ಮನಸ್ಸನ್ನು ಚದರಿಸದಿರದು! ಒಂದು ವೇಳೆ ಆತ್ಮಸ್ವರೂಪವನ್ನು ಖಚಿತವಾಗಿ ಕಂಡುಕೊಂಡರೂ ಆಗುವುದಷ್ಟರಲ್ಲೇ ಇದೆ. ಏಕೆಂದರೆ 'ಭೇದವಿಜ್ಞಾನ'ದಿಂದ ತನ್ನಲ್ಲಿ ತನ್ನನ್ನು ಬೇರ್ಪಡಿಸಿಕೊಂಡು ತಾನು ಪರಿಶುದ್ಧನಾಗಿರುವೆನು, ಸಿದ್ಧನಾಗಿರುವೆನು ಎಂದು ಜ್ಞಾನನೇತ್ರದಿಂದೀಕ್ಷಲು ಈ ಪಾಪಸಮೂಹ ಬಿಡಬೇಕಲ್ಲ?"

ಗಳಿಸುವನೆಯ್ದೆ ಪಾಪಸುಕೃತಂಗಳ ನುಣ್ಬನೆರಳ್ಫಲಂಗಳಂ |
ಮಳವಶನಾಗಿ ದೇಹಿ ಸುಖಿ ದುಃಖಿ ಕಷಾಯಿ ವಿನಾಶಿ ಕಾಮಿ ಪು ||
ಲ್ಲುಳು ಸತಿ ಗಂಡು ಷಂಡನೆನಲಿಂತು ಬಹುಸ್ಥಿತಿಯಪ್ಪನಾತ್ಮನಾ |
ಮಳಕುಳಮಂ ಕಳಲ್ಚೆಸುಖಿಯಪ್ಪನಲಾ ಅಪರಾಜಿತೇಶ್ವರಾ || ೬೬ ||

"ಪಾಪ ಪುಣ್ಯಗಳನ್ನು ಜೀವ ಗಳಿಸುವನು, ಎರಡರ ಫಲವನ್ನೂ ತಾನೇ ಅನುಭವಿಸುವನು; ಆತ್ಮ ಕರ್ಮಸಂಚಯದಿಂದ ಶರೀರಧಾರಿಯಾಗಿ ಸುಖಿ ದುಃಖಿ ಎನಿಸಿ, ಕ್ರೋಧಾದಿ ಕಷಾಯಧಾರಿಯಾಗಿ ನಾಶವಾಗುವನು, ಕಾಮುಕನೆನಿಸುವನು, ಹುಲ್ಲಾಗುವನು, ಹುಳವಾಗುವನು, ಸ್ತ್ರೀಯೆನಿಸುವನು, ಪುರುಷನಾಗುವನು, ನಪುಂಸಕನೆನಿಸುವನು! ಈ ರೀತಿ ನಾನಾ ಅವಸ್ಥೆಗಳನ್ನು ಪಡೆಯುತ್ತಾನೆ! ಆತ್ಮ ತನ್ನನ್ನು ಬಂಧಿಸಿರುವ ಕರ್ಮಮಲವನ್ನು ಕಳೆದಾಗ ನಿತ್ಯಸುಖಿಯಾಗುವನಲ್ಲ!"—ಇಲ್ಲಿ ರತ್ನಾಕರ ಸೃಷ್ಟಿಯ ಮೂಲವನ್ನು ಬೆದಕಿರುವನು. ಆತ್ಮನೊಡನೆ ಎಂದು ಕರ್ಮಪುದ್ಗಲ ಸಖ್ಯವನ್ನು ಬೆಳೆಸುವುದೋ ಅಂದಿನಿಂದ ಸೃಷ್ಟಿಕಾರ್ಯ ಪ್ರಾರಂಭವಾಗುವುದು. ಸಖ್ಯವನ್ನು ಬೆಳೆಸುವುದೋ ಅಂದಿನಿಂದ ಸೃಷ್ಟಿಕಾರ್ಯ ಪ್ರಾರಂಭವಾಗುವುದು. ಸಖ್ಯವಿರುವತನಕ ಸೃಷ್ಟಿವ್ಯಾಪಾರ ಸಾಗುವುದು. ಜೀವ ಮತ್ತು ಕರ್ಮ ಒಬ್ಬರಿಗೊಬ್ಬರು ಜೊತೆ ಬಿಟ್ಟು ಅಗಲಿದಾಗ ಆ ಜೀವನ ಮಟ್ಟಿಗೆ ಸೃಷ್ಟಿವ್ಯಾಪಾರ ನಿಂತುಹೋಗುವುದು. ಜೈನ ಪರಿಭಾಷೆಯಲ್ಲಿ ಇದಕ್ಕೆ **'ಸಂಸಾರನುಪ್ರೇಕ್ಷೆ'**ಯೆನ್ನುವರು.

ಕರ್ಮನಿಬಂಧನಾಗಿಯುಮಬಂಧನಮೂರ್ತನೆ ಮೂರ್ತನಾಗಿಯುಂ |
ಕೂರ್ಮೆ ವಿಷಾದಮಿರ್ದುಮಮಲಂ ನಭದಂತಿರೆ ಶೂನ್ಯನಾಗಿಯುಂ ||
ಧರ್ಮಗುಣಾತಿಶಾಯಿಕ ನಿದಾತ್ಮನ ವರ್ತನೆಯದ್ಭುತಕೆ ಸಾ |
ಸಿರ್ಮಡಿಯದ್ಭುತಂ ತಿಳಿಯಬಲ್ಲಿದನಾರಪರಾಜಿತೇಶ್ವರಾ || ೬೭ ||

"ವ್ಯವಹಾರದೃಷ್ಟಿಯಿಂದ ನೋಡಿದಾಗ ಆತ್ಮ ಕರ್ಮಬದ್ಧನಾಗಿ, ಮೂರ್ತನಾಗಿ, ಸುಖಿಯಾಗಿ, ದುಃಖಿಯಾಗಿ, ಕಾಣುವನು. ಆದರೆ ನಿಶ್ಚಯದೃಷ್ಟಿಯಿಂದ ನೋಡಿದರೆ ಒಂದೊಂದಾತ್ಮವೂ 'ಅಬದ್ಧ'ವಾಗಿ, 'ಅಮೂರ್ತ'ನಾಗಿ ನಿರ್ಮಲನಾಗಿ, ಆಕಾಶದಂತೆ ಶೂನ್ಯವಾಗಿದ್ದರೂ ಮಹತ್ತರವಾದ ಆತ್ಮಧರ್ಮ ಹಾಗೂ ಗುಣಗಳುಳ್ಳವನೂ ಆಗಿರುವನಲ್ಲ! ಇಂಥ ಆಶ್ಚರ್ಯ ಮತ್ತಾವುದಿದೆ? ಇಂಥದನ್ನು ಯಾರು ತಾನೆ ತಿಳಿಯಬಲ್ಲರು?"—ಕರ್ಮಪುದ್ಗಲಗಳೊಡಗೂಡಿದ ಜೀವದ ಸ್ವರೂಪ ಒಂದು ತೆರನಾದರೆ, ಅನ್ಯ ಪುದ್ಗಲಗಳಿಂದ ಪಾರಾದ ಆತ್ಮದ ಸ್ವರೂಪ ತದ್ವಿರುದ್ಧವಾಗಿದೆ. ಈ ರೀತಿ ಜೀವವನ್ನು ಕರ್ಮದಿಂದ ಬೇರ್ಪಡಿಸಿ ನೋಡುವುದಕ್ಕೆ 'ಅನ್ಯತ್ವಾನುಪ್ರೇಕ್ಷೆ'ಯೆನ್ನುವರು.

ಏಕನನೇಕನಲ್ಪನಧಿಕಂ ಕ್ಷಯನಕ್ಷಯನಸ್ತಿನಾಸ್ತಿ ಮೂ |
ಲೋಕಮಿತಂ ಸ್ವದೇಹಮಿತನುತ್ತಮ ಬೋಧಸುದರ್ಶನಂಗಳಿಂ ||
ಲೋಕಕಲೋಕಕಂ ನೆರೆವನಂಗದ ನೋಟದೆ ಬದ್ಧನಾತ್ಮನಾ |
ಲೋಕನದಿಂದೆ ಮುಕ್ತನಿದು ಶಕ್ಯಮದಾರ್ಗಪರಾಜಿತೇಶ್ವರಾ || ೬೮ ||

"ಆತ್ಮನ ವ್ಯವಹಾರ ವಿಚಿತ್ರವಾದುದು; ಇವನು ಒಬ್ಬನೂ ಅಹುದು ಅನೇಕನೂ ಅಹುದು,

ಅಲ್ಪನೂ ನಿಜ, ಅಧಿಕನೂ ನಿಜ, ನಾಶವಾಗುವನು ಎಂಬುದೂ ದಿಟ, ಅವಿನಾಶಿ ಎಂಬುದೂ ದಿಟ, ಇವನನ್ನು ಅಸ್ತಿಯೆನ್ನಬಹುದು ಹಾಗೂ ನಾಸ್ತಿಯೆನ್ನಬಹುದು, ಮೂರುಲೋಕದಷ್ಟು ಬೃಹತ್‌ಸ್ವರೂಪಿ ಎಂದರೂ ಒಪ್ಪುವುದು, ಜೊತೆಗೆ ತತ್ಕಾಲದ ಕಾಯಪರಿಮಿತನೆಂದರೂ ಒಪ್ಪುವುದು, ಜ್ಞಾನದರ್ಶನರೂಪಿಯಾಗಿ ಲೋಕಾಲೋಕವನ್ನು ಆವರಿಸಿ ಸರ್ವವ್ಯಾಪಿಯಾಗುವನು, ಕರ್ಮಬದ್ಧನೂ ಅಹುದು ಮುಕ್ತನೂ ಅಹುದು!"—ರತ್ನಾಕರ ಎರಡೂ ದೃಷ್ಟಿಯಿಂದ (ವ್ಯವಹಾರ ಮತ್ತು ನಿಶ್ಚಯ) ಜೀವವನ್ನು ಪೃಥಕ್ಕರಿಸಿ ವಿವರಿಸಿರುವನು.

ಮಾನವರಾತ್ಮತತ್ತ್ವಮರಿಯಲ್ಕೆ ಕುವಾದಿವಿವರ್ಜನಕ್ಕೆ ನಾ |
ನಾನಯಮುಂ ಪ್ರಮಾಣನಿಧಿ ಸಂಗ್ರಹಮುಂ ನೆರೆದಿರ್ದುವಲ್ಲದೇ ||
ಧ್ಯಾನಿಸುವಾಗಳೀ ಬಹುವಿಕಲ್ಪತೆಯಿಲ್ಲ ಮಣಿತ್ರಯಾತ್ಮನೆಂ |
ಬೀ ನುತಭಾವಮೊಂದೆ ಬೆಳಗಿರ್ಪುದಲಾ ಅಪರಾಜಿತೇಶ್ವರಾ || ೬೯ ||

"ವಿತಂಡವಾದಿಗಳನ್ನು ಬಾಯಿ ಮುಚ್ಚಿಸಲು, ಸಾಧಕರು ಆತ್ಮಸ್ವರೂಪವನ್ನರಿಯಲು, ನಾನಾ ನಯಗಳನ್ನೂ ಪ್ರಮಾಣಗಳನ್ನೂ ತಿಳಿದುಕೊಳ್ಳಬೇಕಲ್ಲದೆ 'ಸಮಾಧಿ'ಯಲ್ಲಿ ಈ ಯಾವ ವಿಕಲ್ಪವೂ ಇಲ್ಲ; ಆ ಅವಸ್ಥೆಯಲ್ಲಿ ಆತ್ಮ ಕೇವಲ 'ರತ್ನತ್ರಯ'ವಾಗಿ ರಾರಾಜಿಸುವನು!"—ಸರಳವಾದ ಧರ್ಮ ಆಚಾರ್ಯರ ಕೈಯಲ್ಲಿ, ಪಂಡಿತರ ಕೈಯಲ್ಲಿ ಶಾಸ್ತ್ರೀಯವಾದ ಚೌಕಟ್ಟನ್ನು ಪಡೆದು ಜಟಿಲವಾಗಿ ಬೃಹದಾಕಾರವನ್ನು ತಾಳಿತು. ಭಗವದ್ಭಕ್ತ ಇದನ್ನೆಲ್ಲ ಕಂಠಪಾಠ ಮಾಡುವ ಆವಶ್ಯಕತೆಯಿಲ್ಲ. ಕಂಠಪಾಠ ಮಾಡಿದರೂ ಭಕ್ತಿಯಿಲ್ಲದೆ ಹೋದಾಗ ಪ್ರಯೋಜನವೂ ಆಗದು.

"ಜೀವದಲ್ಲಿ ಕರ್ಮಕಟ್ಟಿದೆ ಅಥವಾ ಇಲ್ಲವೆಂದು ಹೇಳುವುದು ನಯದ ಪಕ್ಷವಾಗಿದೆ. ಪಕ್ಷಾತೀತವಾದ ಹೇಳಿಕೆಯೆ ಸಮಯಸಾರವು. ಅಂದರೆ ನಿರ್ವಿಕಲ್ಪ ಶುದ್ಧ ಆತ್ಮತತ್ತ್ವವಾಗಿದೆ. ತನ್ನ ಶುದ್ಧಾತ್ಮನನ್ನೇ ತಿಳಿಯುವಂಥವರು ಎರಡೂ ನಯಗಳನ್ನು ಕೇವಲ ತಿಳಿದುಕೊಂಡಿರುತ್ತಾರೆ. ಅವರು ಯಾವ ನಯದ ಪಕ್ಷವನ್ನೂ ಸ್ವೀಕರಿಸುವುದಿಲ್ಲ. ಏಕೆಂದರೆ ಅವರು ಪಕ್ಷಾತೀತರು, ನಯರಹಿತರು. ಯಾವುದು ಸರ್ವನಯ ಪಕ್ಷಗಳಿಂದ ರಹಿತವಾಗಿಯೋ ಅದೇ ಸಮಯಸಾರವು. ಇಂಥ ಸಮಯಸಾರವೇ ಸಮ್ಯಕ್‌ದರ್ಶನಜ್ಞಾನಚಾರಿತ್ರವಾಗಿರುವುದು"[1] ಎಂದು ಭಗವಾನ್ ಕುಂದಕುಂದಾಚಾರ್ಯರು ಹೇಳಿರುವರು.

ವ್ಯವಹೃತಿಯೆಂದು ನಿಶ್ಚಯತೆಯೆಂದು ಮಣಿತ್ರಯಮಕ್ಕುಮಲ್ಲಿ ದೇ |
ವ ವಚನ ತಾಪಸರ್ಕಳವಧಾರಣೆ ತಾಂ ವ್ಯವಹಾರಮಲ್ಲಿ ದೋ ||

೧. ಕಮ್ಮಂ ಬದ್ಧಮ ಬದ್ಧಂ ಜೀವೆ ಏವಂತು ಜಾಣ ಣಯಪಕ್ಖಂ |
ಪಕ್ಖಾತಿಕ್ಕಂತೊ ಪುಣ ಭಣ್ಣದಿ ಜೋಸೋ ಸಮಯಸಾರೋ || ೧೪೨ ||
ದೊಹ್ಣವಿ ಣಯಾಣ ಭಣಿಯಂ ಜಾಣ ಇ ಣವರಂ ತಾ ಸಮಯ ಪಡಿವದ್ಧೋ |
ಣದು ಣ ಯ ಪಕ್ಖಂ ಗಿಹ್ಣದಿ ಕಿಂಚವಿ ಣಯ ಪಕ್ಖಪರಿಹೀಣೋ || ೧೪೩ ||
ಸಮ್ಮದ್ದಂಸಣಣಾಣಂ ಏದಂ ಲಹದಿತ್ತಿ ಣವರಿ ವವದೇಸಂ |
ಸವ್ವಣಯಪಕ್ಖರಹಿದೋ ಭಣಿದೋ ಜೋಸೋ ಸಮಯಸಾರೋ || ೧೪೪ ||—ಸ. ಸಾ.

ಷಮನುಳಿವಿಲ್ಲದೇ ಗೆಲಿದೆ ನೀನೆ ಮಮಪ್ರಭು ನಿನ್ನವಾಣಿಯೇ |
ಶಿವಮತವಸ್ತಸಂಗನೆ ತಪಸ್ವಿಯಲಾ ಅಪರಾಜಿತೇಶ್ವರಾ || ೭೦ ||

"ರತ್ನತ್ರಯಕ್ಕೆ ವ್ಯವಹಾರ ಮತ್ತು ನಿಶ್ಚಯವೆಂದು ಎರಡು ಮುಖಗಳು. ಜಿನೇಂದ್ರ, ಜಿನವಾಣಿ, ಜಿನಮುನಿ ಇವರಲ್ಲಿ ಭಕ್ತಿಯಿಡುವುದು ವ್ಯವಹಾರವಾಗಿದೆ. 'ಹದಿನೆಂಟು ದೋಷ'ಗಳನ್ನು ಗೆದ್ದಂಥ ಜಿನೇಂದ್ರ, ನೀನೆ ನನ್ನ ಪ್ರಭುವಯ್ಯ! ನಿನ್ನ ವಾಣಿಯೇ ಮೋಕ್ಷದಾಯಕವಾದುದು! ಸರ್ವಸಂಗ ಪರಿತ್ಯಾಗಿಯೇ ತಪಸ್ವಿ"—ಇಲ್ಲಿ ರತ್ನಾಕರ ಸಮ್ಯಗ್ದರ್ಶನವನ್ನು ಸ್ಪಷ್ಟಪಡಿಸಿರುವನು. ಈ ರೀತಿಯಾದ ದೃಢ ನಿರ್ಧಾರಕ್ಕೇನೆ ಸಮ್ಯಗ್ದರ್ಶನವೆನ್ನುವರು.[1]

ಮೊದಲೊಳೆ ತತ್ತ್ವಸಪ್ತಕದಿ ಪೇಳ್ದು ಮಣಿತ್ರಯಮಂ ಬಳಿಕ್ಕಿದೇ |
ನಿದನುಸಿರ್ದಂದಮೆನ್ನದಿರಿಮಾಪ್ತನೊಳಾಗಮದೊಳ್ತತಪಸ್ವಿಯೊಳ್ ||
ಪುದಿದುದುತತ್ತ್ವವರ್ಗಮದರಿಂದೆರವಿಲ್ಲಮದುಂ ನಿಜಾತ್ಮಸಾ |
ಧ್ಯದ ಸಹಕಾರಿಯೆಂಬುದು ತವಾಜ್ಞೆಯಲಾ ಅಪರಾಜಿತೇಶ್ವರಾ || ೭೧ ||

"ಹಿಂದೆಲ್ಲ ಸಪ್ತತತ್ತ್ವದಲ್ಲಿ ರತ್ನತ್ರಯವನ್ನು ಹೇಳಿ, ಈಗ ಇನ್ನೊಂದು ರೀತಿ ಹೇಳುತ್ತಿರುವನಲ್ಲ ಎಂದುಕೊಳ್ಳಬೇಡಿ. ಆಪ್ತ ಆಗಮ ತಪಸ್ವಿ ಇವರಿಲ್ಲದೆ ಎಲ್ಲಿಯ ತತ್ತ್ವ? ಆತ್ಮವನ್ನರಿಯಲು ನೆರವಾಗುವುದನ್ನೆಲ್ಲ ಬಳಸಿಕೊಳ್ಳುವುದೇ ಬುದ್ಧಿವಂತಿಕೆಯಲ್ಲವೆ?"—ಗುರಿಮುಟ್ಟಲು ಈ ಮೂರರ ನೆರವೂ ಅತ್ಯಾವಶ್ಯಕ. ಅದರಿಂದ ದೇವ, ಆಗಮ, ತಪಸ್ವಿ ಇವರ ಪೂಜೆ 'ವ್ಯವಹಾರ ರತ್ನತ್ರಯ'ವಾಗಿದೆ.

೧. ಶ್ರದ್ಧಾನಂ ಪರಮಾರ್ಥನಾ ಮಾಪ್ತಗಮ ತಪೋ ಭೃತಾಂ ||
ತ್ರಿಮೂಢಾ ಪೋಢಮಷ್ಟಾಂಗಂ ಸಮ್ಯಗ್ದರ್ಶನಮಸ್ಮಯಂ || ೪ ||

[ನಿರ್ದೋಷವಾದ ದೇವ ಶಾಸ್ತ್ರ ಗುರುಗಳನ್ನು ನಂಬುವಿಕೆಗೆ ಸಮ್ಯಗ್ದರ್ಶನವೆನ್ನುವರು—ಇದು ಮೂರು ಮೂಢರಹಿತವಾಗಿದ್ದು ಅಷ್ಟಾಂಗಯುಕ್ತವಾಗಿರುವುದು.]

ಆಪ್ತೇನೋಚ್ಛಿನ್ನ ದೋಷೇಣ | ಸರ್ವಜ್ಞೇನಾಗಮೇಶಿನಾ ||
ಭವಿತವ್ಯಂ ನಿಯೋಗೇನ ನಾನ್ಯಥಾ ಹ್ಯಾಪ್ತತಾ ಭವೇತ್ || ೫ ||

[ನಿರ್ದೋಷತ್ವ-ಸರ್ವಜ್ಞತ್ವ-ಆಗಮೇಶಿತ್ವ (ಪರಮ ಹಿತೋಪದೇಶಿ) ಈ ಮೂರು ಗುಣಗಳೂ ದೇವರಲ್ಲಿರಬೇಕು. ಇಂಥವನಿಗೆ ದೇವ, ಆಪ್ತ, ಯಾ ಭಗವಂತ ಎಂದು ಹೆಸರು. ಈ ಗುಣಗಳಿಲ್ಲದವನು ದೇವನಲ್ಲ.]

ಆಪ್ತೋಪಜ್ಞಮನುಲ್ಲಂಘ್ಯ | ಮದೃಷ್ಟೇಷ್ಟ ವಿರೋಧಕಂ ||
ತತ್ತ್ವೋಪದೇಶ ಕೃತ್ಸಾರ್ವಂ | ಶಾಸ್ತ್ರಂ ಕಾಪಥಘಟ್ಟನಂ || ೯ ||

[ಜಿನವಾಣಿಯೇ ಆಗಮ; ವಾದಿ ಪ್ರತಿವಾದಿಗಳ ಖಂಡನೆಗೆ ಜಗ್ಗದುದು, ಪ್ರತ್ಯಕ್ಷ ಪರೋಕ್ಷ ಪ್ರಮಾಣಗಳಿಗೆ ವಿರೋಧಿಯಲ್ಲದ್ದೂ, ವಸ್ತುಸ್ವರೂಪವನ್ನು ಪ್ರತಿಪಾದಿಸುವುದೂ, ಸರ್ವರಿಗೂ ಹಿತಕಾರಿಯಾದುದು, ಮಿಥ್ಯಾಮಾರ್ಗವನ್ನು ಧ್ವಂಸ ಮಾಡುವುದು—ಈ ಗುಣಗಳುಳ್ಳದೇ ಶಾಸ್ತ್ರ.]

ವಿಷಯಾಶಾವಶಾತೀತೋ | ನಿರಾರಂಭೋಽಪರಿಗ್ರಹಃ ||
ಜ್ಞಾನಧ್ಯಾನ ತಪೋರಕ್ತ ಸ್ತಪಸ್ವೀ ಸಪ್ರಶಸ್ಯತೇ || ೧೦ ||

[ವಿಷಯ ಸುಖದ ಇಚ್ಛೆಗೆ ಬೀಳದೆ ಇಂದ್ರಿಯ ನಿಗ್ರಹ ಮಾಡಿದವನೂ, ಕೃಷಿ ಮುಂತಾದ ಆರಂಭಗಳಿಲ್ಲದವನೂ, ಪರಿಗ್ರಹರಹಿತನೂ, ಜ್ಞಾನಿಯೂ, ಧ್ಯಾನಿಯೂ ಮತ್ತು ತಪಸ್ವಿಯೂ ಆದಂಥವನೇ ನಿಜವಾದ ಗುರು.]
—ರ. ಕ. ಶ್ರಾ. (ಸಂ. ಶ್ರೀ ವಿ. ಪಿ. ಶಾಸ್ತ್ರಿಗಳು.)

[1]ಮರ್ಮವರಿದು ಬೆಸೆಗೊಂಡೆಯಾ ಲೇಸು ಜ್ಯೋ | ತಿರ್ಮಾಲೆ ನಿನ್ನ ವಿವೇಕಾ ||
ಬೇರ್ಮಾಡದಿರು ರತ್ನಮೂರೆಂದರಾತ್ಮನ | ಧರ್ಮ ಕಾಣಗೆ ಲಾಲಿಸೆಂದಾ ||೯೭||
ದರುಶನ ಬೋಧವಾತ್ಮನ ರೂಪು ಮನದಲ್ಲಿ | ಚರಿಸಲಂತದೆ ಸುಚರಿತ್ರಾ ||
ಎರವಲ್ಲ ರತ್ನಮೂರಾತ್ಮನೊಳಡಕವೀ | ಪರಿಯ ನೀನರಿ ಮತಿವಂತೆ ||೯೮||
ಆಪ್ತ ತಾಪಸ ಶಾಸ್ತ್ರಗಳ ನಂಬಿ ತಿಳಿದು ವ್ರ | ತಾಪ್ತಿಯೊಳಿರೆ ವ್ಯವಹಾರಾ ||
ಗುಪ್ತದೊಳಾತ್ಮನ ನಂಬಿ ತಿಳಿದು ಚಿತ್ತ | ಗುಪ್ತಿಯೊಳಿರೆ ನಿಶ್ಚಯಾರ್ಥಾ[1] ||೯೯||

ಶುದ್ಧ ನಿಶ್ಚಯದೃಷ್ಟಿಯನ್ನು ರತ್ನಾಕರ ಮನಮುಟ್ಟುವಂತೆ ನಿರೂಪಿಸಿರುವನು. ಸ್ವಭಾವತಃ ಈತ ಭಕ್ತಿಪಂಥದವನಾದರೂ ಜ್ಞಾನಮಾರ್ಗವನ್ನೂ ಎಂದೂ ನಿರಾಕರಿಸಿದವನಲ್ಲ. ಜೈನ ದರ್ಶನದಲ್ಲಿ ವ್ಯವಹಾರ ಮತ್ತು ನಿಶ್ಚಯವೆಂದು ಎರಡು ದೃಷ್ಟಿಯಿರುವಂತೆ ಭಕ್ತಿ ಹಾಗೂ ಜ್ಞಾನಮಾರ್ಗಗಳೆರಡೂ ಸಮನ್ವಯಗೊಂಡಿವೆ. ಪ್ರವೃತ್ತಿ ಹಾಗೂ ನಿವೃತ್ತಿಗಳ ಸಾಮರಸ್ಯವನ್ನು ಜೈನಧರ್ಮದಲ್ಲಿ ಸಮವಸರಣದಿಂದ ಸಂಸಾರದ ತನಕ ಕಾಣಬಹುದು. 'ಅಕ್ಷುಣ್ಣ ವ್ಯವಹಾರ ನಿಶ್ಚಯದೊಳಗತಿ ದಕ್ಷರತ್ನಾಕರಸಿದ್ಧ[2]' ಎಂದು ಮಹಾಕವಿ ತನ್ನ ದಕ್ಷತೆಯನ್ನು ತಾನೇ ಹೇಳಿ ಕೊಂಡಿರುವನು. ರತ್ನಾಕರ ಸಂದರ್ಭೋಚಿತವಾಗಿ ವ್ಯವಹಾರವನ್ನೂ ಪ್ರತಿಪಾದಿಸಿರುವನು, ನಿಶ್ಚಯವನ್ನೂ ನಿರ್ದೇಶಿಸಿರುವನು.

ನಿಶ್ಚಯದಿಂದಮಾತ್ಮನೆ ಸುದರ್ಶನಮಾತ್ಮನೆ ಶುದ್ಧಬೋಧಮಂ |
ತಶ್ಚರಿತಂ ನಿಜಾತ್ಮನೆ ಮಣಿತ್ರಯ ರೂಪನುಮಾತ್ಮನೆಂಬುದಂ ||
ನಿಶ್ಚಲಮಾಗಿ ನಂಬಿ ನಿಜಮಂ ತಿಳಿದಲ್ಲಿಯೆ ಲೀನಮಾಗಿ ಚೇ |
ತಶ್ಚಿರಮಂ ನೆಗಳ್ಚೆ ಶಿವಮೆಂದೆಯಲಾ ಅಪರಾಜಿತೇಶ್ವರಾ || ೭೨ ||

"ನಿಶ್ಚಯವಾಗಿ ಆತ್ಮನೇ ಸಮ್ಯಗ್‌ದರ್ಶನಜ್ಞಾನಚಾರಿತ್ರ ರೂಪಿಯಾಗಿರುವನು. ರತ್ನತ್ರಯ ವೆಂದರೆ ಆತ್ಮನೇ ಆಗಿರುವನು, ಎಂದು ನಿಶ್ಚಲವಾಗಿ ನಂಬಿ ಅದರಲ್ಲೇ ತನ್ಮಯನಾಗಿ ಹೋದರೆ ಕೈವಲ್ಯ ಲಭಿಸದಿರದು!"

ನಿನ್ನನೆ ನಂಬು ನಂಬಿದೊಡೆ ನನ್ನನೆ ನಂಬಿದೆ ಶುದ್ಧದೃಷ್ಟಿಯಿಂ |
ನಿನ್ನನೆ ನೋಡು ನೋಡಿದೊಡೆ ನನ್ನನೆ ನೋಡಿದವಂ ಸುಚಿತ್ತದಿಂ ||
ನಿನ್ನೊಳಗೈಕ್ಯವಾಗದುವೆ ನನ್ನೊಳಗೇಕತೆಯಾದುದೆಂದು ರ |
ತ್ನೋನ್ನತಿಯಿಂತುಟೆಂದೊರೆದೆ ನೀನೆ ಬುಧಂಗಪರಾಜಿತೇಶ್ವರಾ || ೭೩ ||

"ನಿನ್ನಲ್ಲಿ ನೀನು ನಂಬಿಕೆಯಿಟ್ಟಾಗ ನನ್ನಲ್ಲೇ ಇಟ್ಟಂತಾಯಿತು! ಶುದ್ಧದೃಷ್ಟಿಯಿಂದ ನಿನ್ನನ್ನೇ ಅವಲೋಕಿಸು, ಆಗ ನನ್ನನ್ನೇ ನೋಡಿದಂತಾಗುವುದು! ಸುಚಿತ್ತದಿಂದ ನಿನ್ನಲ್ಲಿ ಐಕ್ಯವಾಗು, ಆಗ ನನ್ನಲ್ಲೇ ಐಕ್ಯವಾದಂತಾಗುವುದು! ರತ್ನತ್ರಯದ ಮಹಿಮೆಯೇ ಇಂಥದೆಂದು ಅಪರಾಜಿತ, ನೀನೆ ವಿದ್ವಾಂಸರಿಗೆ ಹೇಳಿದೆಯಲ್ಲವೆ?"—ಸರ್ವೋತ್ಕೃಷ್ಟವಾದ ಆಧ್ಯಾತ್ಮಿಕಾ ವಸ್ಥೆಯನ್ನು ರತ್ನಾಕರ ಇಲ್ಲಿ ಚಿತ್ರಿಸಿರುವನು. ಇದರ ಸಾರ ಹಿಂದಿನಿಂದ ಬಂದುದೇ ಆದರೂ

೧. ಭ. ವೈ. ೧೭ನೇ ಸಂ ;

೨. ಭ. ವೈ. ೮೦ನೇ ಸಂ, ೧೧೩.

ಹೇಳುವ ರೀತಿಯಲ್ಲಿರುವ ಸೊಗಸು ರತ್ನಾಕರನ ಸೊಗಸೇ! ಅಗ್ರಗಣ್ಯ! ಭರತೇಶವೈಭವವೆಂಬ ಅಪೂರ್ವ ಕಾವ್ಯಾಂಬರದಲ್ಲಿ ತಾರಾಗಣದಂತೆ ರಾರಾಜಿಸುವ ಹಂಸಕಲೆಯ ಸೊಬಗೇ ಸೊಬಗು! ಸಾಧಕ ಪ್ರಬುದ್ಧಾವಸ್ಥೆಗೆ ಬಂದಾಗ ಭೇದಭಕ್ತಿಯಿಂದ ನಿರ್ಭೇದಭಕ್ತಿಗೆ ತನ್ನ ಧ್ಯಾನವನ್ನು ಮಾರ್ಪಡಿಸಿಕೊಳ್ಳಬೇಕಾಗುವುದು. ಆಗ ತನ್ನ ಅಂತರಾತ್ಮವನ್ನೇ ಪರಮಾತ್ಮನೆಂಬ ಭಾವದಿಂದ ಈಕ್ಷಿಸುವನು. ಕೀಟಭ್ರಮರ ನ್ಯಾಯದಂತೆ ಅಂತರಾತ್ಮ, ಸಾಧನೆಯ ಬಲದಿಂದ ಪರಮಾತ್ಮನಾಗಿ ಹೋಗುವನು! ಅದ್ವೈತಿಯಾಗಿ ರಾರಾಜಿಸುವನು! 'ಸವಿಕಲ್ಪಸಮಾಧಿ'ಯಿಂದ 'ನಿರ್ವಿಕಲ್ಪಸಮಾಧಿ'ಗೇರಿ ನಿಶ್ಚಲನಾಗುವನು! 'ಧರ್ಮಧ್ಯಾನ'ವನ್ನು ತ್ಯಜಿಸಿ 'ಶುಕ್ಲಧ್ಯಾನ' ದಲ್ಲಿ ಮುಳುಗಿ ಕೊನೆಗೆ ಪರಮಶುಕ್ಲಧ್ಯಾನಕ್ಕಧಿಕಾರಿಯಾಗಿ ಅರಹಂತನಾಗಿ ವಿರಾಜಿಸುವನು!

ತನ್ನ ತಾನರಿದವನೆಲ್ಲ ತಾನರಿವನು | ತನ್ನನರಿವನೆ ತಾಪಸನು ||
ತನ್ನ ಕಂಡೆಲ್ಲರು ನಂಬುವದೆಂದದ | ಕನ್ನಡಿಪಂತೆ ಸಾಗಿದನು[1] || ೭೪ ||

ತನ್ನನ್ನು ತಾನರಿಯುವುದೇ ಆತ್ಮವಿಕಾಸದ ಕೊನೆಯಘಟ್ಟ! "ಲಿಂಗಸೋಂಕಿನ ಸುಖ ದೊಳಗೆ, ಕೂಡಲಸಂಗಮದೇವಯ್ಯ, ಅಂಬುಧಿಯೊಳಗೆ ಬಿದ್ದ ಆಲಿಕಲ್ಲಂತೆ ಭಿನ್ನಭಾವವರಿ ಯದೆ ಶಿವ ಶಿವ ಎನುತಿರ್ದೆನು ನಾನು.[2]" 'ಐಕ್ಯಾವಸ್ಥೆ'ಯನ್ನು ಬಸವಣ್ಣನವರು ಸುಲಭಗ್ರಾಹ್ಯ ವಾಗುವಂತೆ ವಿವರಿಸಿರುವರು. ಅಂಬುಧಿಯೊಳಗೆ ಬಿದ್ದು ಆಲಿಕಲ್ಲು ತನ್ನತನ ನೀಗಿಕೊಳ್ಳು ವಂತೆ ಶಿವೈಕ್ಯನಾದ ಸಾಧಕನೂ ಹಾಗೆ ಶಿವನಾಗಿ ಹೋಗುವನು!

ವರಗುರುಪಂಚಕಂ ವರತಪಶ್ಚರಣಂಗಳಿರ್ಪುವಲ್ಲಿ ಸ |
ದ್ಗುರು ಗುಣಶೀಲ ಸಂಯಮ ಸುತೀರ್ಥ ಪವಿತ್ರತೆಯಲ್ಲಿ ತೋರ್ಕುಮು ||
ತ್ತರಗುಣರಾಶಿ ಮೂಲಗುಣವೃಂದಮಿರ್ದಪುದಲ್ಲಿ ನಿನ್ನ ಚಿ |
ತ್ಪರಿಣತೆಯಲ್ಲಿ ನಿಟ್ಟಿಸೊಳಗೆಂದೆಯಲಾ ಅಪರಾಜಿತೇಶ್ವರಾ || ೭೫ ||

"ನಿನ್ನ ಆತ್ಮಸ್ವರೂಪದಲ್ಲೇ 'ಪಂಚಪರಮೇಷ್ಠಿ'ಗಳು ಅಂತರ್ಗತವಾಗಿರುವರು! ನಿನ್ನಾತ್ಮ ನಲ್ಲೇ 'ತಪಶ್ಚರಣ' ಹುದುಗಿದೆ! ನಿನ್ನಾತ್ಮನಲ್ಲೇ ಸದ್ಗುರು ನೆಲೆಸಿರುವನು ! ನಿನ್ನಲ್ಲೇ ಗುಣ, ಶೀಲ, ಸಂಯಮ ಸ್ಥಿರಗೊಂಡಿವೆ! ನಿನ್ನಾತ್ಮನಲ್ಲೇ ಉತ್ತಮ ತೀರ್ಥಗಳೂ ಅಲ್ಲಿಯ ಪಾವ ನತೆಯೂ ಹಬ್ಬಿದೆ! ಉತ್ತರ ಗುಣರಾಶಿಯೂ ಮೂಲಗುಣ ಸಮೂಹವೂ[3] ನಿನ್ನ ಪರಿಣಾಮ ದಲ್ಲೇ ನೆಲೆಸಿವೆ! ಏನು ಬೇಕಾದರೂ ನಿನ್ನಲ್ಲೇ ಹುಡುಕಿಕೋ ಎಂದಿರುವೆಯಲ್ಲ ಅಪರಾಜಿ ತೇಶ್ವರಾ!"—ಪ್ರಾಥಮಿಕಾವಸ್ಥೆಯ ಸಾಧಕ ಕೆಲಕಾಲ ಭೇದಭಕ್ತಿಯನ್ನಾಚರಿಸುತ್ತ ಹೊರಗೆ ಸುತ್ತಾಡಿ ಕೊನೆಗೆ ಎಲ್ಲವೂ ನಾನೇ ಆಗಿರುವೆನು, ಇದುವರೆಗೆ ಹುಡುಕಿದುದೆಲ್ಲ ನನ್ನಲ್ಲೇ ಇತ್ತಲ್ಲ ಎಂಬ ತಿಳಿವಳಿಕೆಯನ್ನು ಪಡೆಯುವನು. ಸಾಧಕನ ನಾನಾ ಅವಸ್ಥೆಗಳನ್ನೇ ಪಂಚಪರ ಮೇಷ್ಠಿಗಳ ರೂಪದಲ್ಲಿ ನಿರೂಪಿಸಿರುವರು. ಅಂತರಾತ್ಮನ ಅವಸ್ಥೆ ಸಾಧುವಾಗಿ, ಉಪಾಧ್ಯಾಯ

೧. ಭ. ವೈ. ೭೨ನೇ ಸಂ.

೨. ಬ. ವ. ೯೪೧.

೩. ೧೨ ಉತ್ತರಗುಣಗಳು, ೨೮ ಮೂಲಗುಣಗಳು, ೭ ಶೀಲಗಳು—ಜೈ. ಆ. ಸಂ. ಪು. ೧೨, ೧೭. ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತ ಇವಕ್ಕೆ ಉತ್ತರಗುಣವೆನ್ನುವರು.

ನಾಗಿ, ಅಥವಾ ಆಚಾರ್ಯನಾಗಿ ಕಂಗೊಳಿಸುವುದು. ಅಂತರಾತ್ಮಾವಸ್ಥೆಯನ್ನು ಸಾಧಕ ಮೀರಿದಾಗ ಪರಮಾತ್ಮನಾಗುವನು. ಅರಹಂತ ಮತ್ತು ಸಿದ್ಧರಿಬ್ಬರೂ ಪರಮಾತ್ಮಾವಸ್ಥೆಯಲ್ಲಿ ಅಂತರ್ಗತವಾಗಿರುವರು. ಸಾಧಕನ ಅಂತರಂಗ ವಿಷಯಸುಖವನ್ನು ಮೆಟ್ಟಿ ರಸಸುಖವನ್ನು ದಾಟಿ ಬ್ರಹ್ಮಾನಂದದಾಗರವಾಗಬೇಕು. ಅಂಥವನ ಮನೋಮಂದಿರವೇ ಸಮವಸರಣವಾಗಿ ಹಂಸಕಲೆಯ ಆಗರವಾಗಿ ರಾರಾಜಿಸುವುದನ್ನು ಜೈನಾಚಾರ್ಯರು ಪ್ರತಿಮಾವಿಧಾನದಲ್ಲಿ ಕಡೆವಾಗ ದೇವನಿರ್ಮಿತ ಸಮವಸರಣವಾಗಿ ರೂಪಗೊಂಡಿತು; ಪಂಚಪರಮೇಷ್ಠಿಗಳಾಗಿ ಮಿಂಚಿತು; ದಿವ್ಯಧ್ವನಿಯಾಗಿ ಛಂದೋಬದ್ಧವಾಗಿ ಜಿನವಾಣಿಯಾಗಿ ಹರಿಯಿತು!

ಅರಿವರಿವಿಂಗಡರ್ಪು ಮರಿವಾತನುಮಂತದೆ ಕಾಣ್ಕೆ ಕಾಣ್ಕೆಗಂ |
ಗುರಿಯುಮಡಂಗಿ ಕಾಣ್ಬನುಮದೇ ಶರಣಂ ಶರಣಾರ್ಥಿ ಸಾರ್ವುದುಂ ||
ಎರಕವೆರಂಗುವಾತನೆರಕಕ್ಕಧಿದೈವಮುಮಾತ್ಮತತ್ತ್ವವೇ |
ಪೊರಗರಸಲ್ಕೆವೇಡ ನಿಜವೆಂದೆಯಲಾ ಅಪರಾಜಿತೇಶ್ವರಾ || ೭೫ ||

"ಹುಡುಕುವ ವಸ್ತು ಬೇರೆಯಲ್ಲ, ಹುಡುಕುವಾತ ಬೇರೆ ಅಲ್ಲ! ದರ್ಶಿಸುವಾತ ಹಾಗೂ ದರ್ಶಿಸಬೇಕಾದ ವಸ್ತು ಭಿನ್ನಭಿನ್ನವಲ್ಲ! ರಕ್ಷಣೆಗಾಗಿ ಹಾತೊರೆವವನೇ ರಕ್ಷಕನೂ ಆಗಿರುವನು. ಪಡೆಯಬೇಕಾದುದು ಹಾಗೂ ಪಡೆಯುವಾತ ಒಂದೇ ಆಗಿರುವರು. ಐಕ್ಯವಾಗುವುದು, ಐಕ್ಯವಾಗುವಾತನೂ ಐಕ್ಯಕ್ಕೆ ಅಧಿದೇವತೆಯೂ ಒಂದೇ ಆಗಿದೆ. ಈ ನಾನಾ ಭಂಗಿಗಳೆಲ್ಲ ಆತ್ಮತತ್ತ್ವದ ನಾನಾ ಮುಖಗಳಾಗಿವೆ! ಅದರಿಂದ ನಿಜವನ್ನು ಹೊರಗೆಲ್ಲೂ ಹುಡುಕಬಾರದು; ಹುಡುಕುವುದಾದರೆ ನಿನ್ನಲ್ಲೇ ಹುಡುಕು"—ಸಾಮಾನ್ಯ ಚೇತನಕ್ಕೆ ಈ ಮಾತು ಒಗಟಿದ್ದಂತಿದೆ. ಇಲ್ಲಿಯ ಭಾವ, ಅನುಭಾವಿಗಳಿಗೇ ಮೀಸಲಾದುದು. ಲೇಖಕನೂ ಲೇಖನವೂ ಅಂತೆ ವಾಚಕನೂ ಒಂದೇ ಎಂದಾಗ ನಮ್ಮ ಪರಿಸ್ಥಿತಿ ಏನಾಗಬೇಡ? ಸಿದ್ಧಾಂತದ ಅಂತಿಮಾವಸ್ಥೆಯನ್ನೂ ಜೊತೆಗೆ ಆತ್ಮವಿಕಾಸದ ಕೊನೆಯ ಘಟ್ಟವನ್ನೂ ಒಣಮಾತಿನಲ್ಲಿ ಚಿತ್ರಿಸಲು ಹೋದಾಗ ಈ ಪರಿಸ್ಥಿತಿ ಉದ್ಭವಿಸದಿರದು.

[1]ವಿವಿಧಶಬ್ದಬ್ರಹ್ಮವಾ ಪರಬ್ರಹ್ಮದೊ | ಳವಗತವಾಯ್ತೊಯೆಂಬಂತೆ ||
ವ್ಯವಹಾರಜಾರಿ ನಿಶ್ಚಯವೇರಿ ಹಂಸಾನು | ಭವದೊಳಿರ್ದನು ಹಂಸಯೋಗಿ || ೨೮ ||
ಧ್ಯಾನವೆಂಬುರೆ ಧ್ಯೇಯವೆಂಬ ಧ್ಯಾನಿಪನೆಂಬ | ಧ್ಯಾನದ ಫಲವೆಂಬ ನಾಲ್ಕು ||
ತಾನೊಬ್ಬನಾಗಿ ತನ್ನೊಳಗೆ ತಾನಿರ್ದನಾ | ತ್ಮಾನಂದನಾ ದಿವ್ಯಯೋಗಿ || ೨೯ ||
ನುಡಿಗಳೊಳ್ತೋರ್ಪುದೆಂತುಟು ನುಡಿಪುದ್ಗಲ | ಜಡವದು ಹಂಸನೆ ಜ್ಞಾನಿ ||
ಕಡೆಗೆ ಹಂಸವ ಹಂಸನಿಂದರಿದನುಭವ | ವಿಡಿದಾತ್ಮಗಿಹುದಾತ್ಮ ಸಿದ್ಧಿ[1] || ೩೦ ||

ಭರತೇಶವೈಭವದಲ್ಲೂ 'ಪೊರಗರಸಲ್ಕೆವೇಡ ನಿಜವ' ಎಂಬುದನ್ನು ಶಾಸ್ತ್ರೋಕ್ತವಾಗಿ ವಿವರಿಸಿ ಕೊನೆಗೆ ಪುದ್ಗಲರೂಪಿಯಾದ ಭಾಷೆಯಿಂದ ಆತ್ಮತತ್ತ್ವವನ್ನು ವಿವರಿಸಲಾರೆನೆಂದು ರತ್ನಾಕರ ಕೈಕೈ ಹಿಸುಕಿಕೊಂಡಿರುವನು!

---

೧. ಭ. ವೈ. ೭೭ನೇ ಸಂ.

ಅದನರಿದಾತನೆಲ್ಲಮರಿದಾತನದೊಂದನೆ ಕಂಡನೆಲ್ಲಮಂ |
ಸದರದೆ ಕಂಡನಲ್ಲಿಗೆ ಮನಂ ವಶಮಾದೊಡೆ ಮುಕ್ತಿಸಾಧ್ಯಮಾ ||
ದುದು ಹಲವೇಕದೊಂದು ಪೊರಗಾದೊಡೆ ಕಲ್ತ ಸಮಸ್ತ ಶಾಸ್ತ್ರದಿಂ |
ಚದುರರೆನಿಕ್ಕುಮಾತ್ಮ ಪದಸಾಧಕರೇ ಅಪರಾಜಿತೇಶ್ವರಾ || ೭೬ ||

"ಆತ್ಮತತ್ತ್ವವನ್ನು ತಿಳಿದಂಥವನು ಎಲ್ಲವನ್ನೂ ತಿಳಿದಂತೆ! ಆತ್ಮತತ್ತ್ವವೊಂದನ್ನು ಕಂಡನಂತರ ಉಳಿದುದನ್ನು ಕಟ್ಟಿಕೊಂಡೇನು? ಮನವು ಆತ್ಮನಲ್ಲಿ ಲೀನವಾಯಿತೆಂದರೆ ಮುಕುತಿ ವನಿತೆಯ ಕೃಪಾಕಟಾಕ್ಷ ಬಿದ್ದಂತೆಯೆ! ನಾನಾ ಶಾಸ್ತ್ರಗಳಲ್ಲಿ ಪಾರಂಗತನಾಗಿ ಸಿದ್ಧಾಂತ ಚಕ್ರವರ್ತಿಯಾದರೂ ಆತ್ಮತತ್ತ್ವವೊಂದನ್ನರಿಯದಿದ್ದರೆ ಎಲ್ಲವೂ ವ್ಯರ್ಥ!"

"ಏನೇನೋ ಶಾಸ್ತ್ರಗಳನ್ನು ಕಲಿಯಲು ಕಾಲವನ್ನು ವ್ಯಯಮಾಡಿ ದೇವರನ್ನರಿಯಲು ವೇಳೆ ದೊರೆಯದೇ ಹೋದೀತು. ಎಲ್ಲ ಶಾಸ್ತ್ರಗಳನ್ನೂ ಕಲಿತು ದೇವರನ್ನರಿಯದೆಹೋದರೆ ನೀನು ಕಲಿತುದೆಲ್ಲ ವ್ಯರ್ಥವಾಗುವುದು. ಮೊದಲು ದೇವರನ್ನರಿತುಕೋ. ಅನಂತರ ನೀನು ಏನು ಕಲಿಯದಿದ್ದರೂ ನಷ್ಟವೇನಿಲ್ಲ. ಏಕೆಂದರೆ ಮಾನವನ ಪರಮೋದ್ದೇಶವಾದ ಆತ್ಮಸಾಕ್ಷಾತ್ಕಾರ ದೊರೆತ ನಂತರ ಉಳಿದುದರಿಂದೇನಾಗಬೇಕು.[1]"

ಉದ್ಗತದೃಷ್ಟಿಯಿಂ ಸಕಲಮಂ ಪೊರಗೀಕ್ಷಿಸವರ್ಪುದಾತ್ಮನಂ |
ಹೃದ್ಗತದೃಷ್ಟಿಯಿಂದೊಳಗೆ ನಿಟ್ಟಿಸಬಾರದು ಜನ್ಮಜನ್ಮದೊಳ್ ||
ಪುದ್ಗಲರೂಪದಾರು ರಸಮಂ ಸುಖಿಸಲ್ಬಹುದಾತ್ಮರೂಪ ಸಂ |
ವಿದ್ಗುಣದಾ ರಸಾನ್ನಮನುಣಲ್ಕರಿದಂತಪರಾಜಿತೇಶ್ವರಾ || ೭೭ ||

"ಹೊರಗಣ್ಣಿಂದ ಬಾಹ್ಯಪ್ರಪಂಚವನ್ನೆಲ್ಲಾ ನೋಡಬಹುದು. ಆದರೆ ಆತ್ಮವನ್ನೀಕ್ಷಿಸಲು ಮನೋನೇತ್ರಕ್ಕೆ ಜನ್ಮಜನ್ಮಗಳಾದರೂ ಸಾಲದು! ಪುದ್ಗಲರೂಪಿಯಾದ ಆರು ರಸಗಳ ರುಚಿಯನ್ನು ಯಾರುಬೇಕಾದರೂ ಸವಿಯಬಹುದು. ಆದರೆ ಆತ್ಮಸ್ವರೂಪದ ಜ್ಞಾನ ರಸಾಯನವನ್ನು ಅಷ್ಟೊಂದು ಸುಲಭವಾಗಿ ಅನುಭವಿಸಲಾದೀತೆ?"

ತಡೆತಡೆದೋಡುತಿರ್ಪ ಮನಮಂ ಪಿಡಿದಾತ್ಮನೊಳಿಟ್ಟು ತನ್ನ ತಾಂ |
ನುಡಿನುಡಿದಾತ್ಮನೊಳ್ ಸ್ವಪರತತ್ತ್ವ ರಹಸ್ಯಮನಾತ್ಮ ರೂಪಮಂ ||
ಅಡಿಗಡಿಗೊಲ್ದು ನೋಡುತ ಶಮಾಮೃತಮಂ ಸಲೆ ಪೀರ್ದು ಪೀರ್ದು ತಂ |
ಪಡರ್ದ ತಪಸ್ವಿಯೇ ಸುಖಿ ! ಪೆರಂಸುಖಿಯೇ ಅಪರಾಜಿತೇಶ್ವರಾ ? || ೭೮ ||

"ಮತ್ತೆ ಮತ್ತೆ ಚಂಚಲವಾಗುವ ಮನಸ್ಸನ್ನು ಹಿಡಿದು ಆತ್ಮನಲ್ಲಿ ಲೀನಗೊಳಿಸಬೇಕು. ಆತ್ಮಸ್ವರೂಪದ ರಹಸ್ಯವನ್ನೂ ಅನ್ಯಪುದ್ಗಲದ ಸ್ವಭಾವವನ್ನೂ ಮರಳಿ ಮರಳಿ ತನಗೆ ತಾನೇ ಹೇಳಿಕೊಳ್ಳುತ್ತಿರಬೇಕು. ತಿರುಗಿ ತಿರುಗಿ ಆತ್ಮಸ್ವರೂಪವನ್ನು ನಿಟ್ಟಿಸುತ್ತಿರಬೇಕು. ಈ ರೀತಿ ಆಚರಿಸುತ್ತ ಪ್ರಶಾಂತತೆಯ ಆನಂದಾಮೃತವನ್ನು ಕುಡಿದು ಕುಡಿದು ತಣಿವ ಮಹರ್ಷಿಯೆ ನಿಜವಾದ ಸುಖಿ! ಅಂತಲ್ಲದೆ ಅನ್ಯರು ಸುಖಿಯಾದಾರೆ?"

---

೧. ಶ್ರೀ ರಾಮಕೃಷ್ಣ ಪರಮಹಂಸರ ಅಭಿಪ್ರಾಯವನ್ನು ಸಂಗ್ರಹಿಸಿರುವೆನು—ಶ್ರೀ ರಾ. ಕೃ. ವ. ವೇ. ಉತ್ತರಾರ್ಧ.

ಬೊಗ್ಗನೊಂದೇ ದಿನದೊಳು ತೋರನಾತ್ಮನು | ಬಗ್ಗಿದಾಗಳೆ ಬಾಗಿಲಹುದೇ ||
ನುಗ್ಗೆಯ ಮರನಲ್ಲ ಕರ್ಮವೆಂಬುದು ಕರ್ಮ | ಜಗ್ಗಲೊಯ್ಯನೆ ತೋರುತಿಹನು[1] || ೭೬ ||

ಆತ್ಮಾನುಸಂಧಾನದಲ್ಲಿ ಮತ್ತೆ ಮತ್ತೆ ತೊಡಗಿ ಪ್ರಯತ್ನಶೀಲನಾಗಬೇಕೆಂದು ರತ್ನಾಕರ ಭರತೇಶವೈಭವದಲ್ಲಿ ಮಾರ್ಮಿಕವಾಗಿ ನುಡಿದಿರುವನು.

ಉಟ್ಟುಕೊಂಡಂತೆ ಬೆಳದಿಂಗಳ ಮೈತುಂಬ | ಲಿಟ್ಟುಕೊಂಡಂತೆಳೆಮಿಂಚಾ ||
ಕಟ್ಟಾಣಿ ಮುಕ್ತಿಕಾಂತೆಯನಾಗತೋಳ್ತುಂಬ | ತೊಟ್ಟುಕೊಂಡಂತಿರ್ದುದವಗೆ[2] || ೪೨ |

ಹಂಸಕಲೋಪಾಸನೆಯಲ್ಲಿ ಲಭಿಸುವ ಅಲೌಕಿಕಾನಂದವನ್ನು ಕವಿರತ್ನಾಕರ ಕಲಾಮಯವಾಗಿ ಕಡೆದಿರುವುದನ್ನು ಕಂಡಾಗ ನವಿರೇಳದವರುಂಟೆ?

ಮನಮನಿದೊಂದನೇ ತನುವಿನೊಳ್ನೆಲಸಿರ್ದ ನಿಜಾತ್ಮನಲ್ಲಿ ನೆ |
ಟ್ಟನೆ ನಿಲಿಸಲ್ಕೆ ಸಾಕು ಭಯವೆತ್ತಣದೆತ್ತಣದಾರ್ತ ರೌದ್ರಮೀ ||
ತನುಸುಖದಾಶೆಯೆತ್ತಣದು ತೀವ್ರಪರೀಷಹವೆತ್ತ ಮೋಹ ಮ |
ಲ್ಲನ ಕುರುಪಾಟವೆತ್ತ ಪಲವುಂ ಕೊಸರೇಕಪರಾಜಿತೇಶ್ವರಾ || ೭೯ ||

"ಮನಸ್ಸನ್ನು ದೇಹದಲ್ಲಡಗಿರುವ ನಿಜಾತ್ಮನಲ್ಲಿ ತನ್ಮಯವಾಗುವಂತೆ ಮಾಡಿದರೆ ಸಾಕು ಅಂಥವನಿಗೆ ಎತ್ತಣ ಭಯ? ಅವನ ಬಳಿ ಆರ್ತರೌದ್ರಧ್ಯಾನಗಳು ಸುಳಿದಾವೆ? ಶಾರೀರಕ ಲೋಲುಪತೆಗೆ ಅಂಥವನಲ್ಲೆಡೆಯಿದೆಯೆ? ಎಂಥ ಪರೀಷಹ ತಾನೆ ಆತ್ಮಜ್ಞಾನಿಯನ್ನು ಕೆಣಕಬಲ್ಲುದು? ಮೋಹಮಲ್ಲನ ಬೇಳೆ ಅಲ್ಲಿ ಬೆಂದೀತೆ?"--ಭರತೇಶ ವೈಭವದ ರಚನಾ ಕಾಲದಲ್ಲಿ ರತ್ನಾಕರನ ಮನೋಭಾವ ಸುಕೋಮಲವಾಗಿ, ಸರಸವಾಗಿ, ಕನ್ನೆಯರ ಚಕ್ಕಂದಕ್ಕನುಗುಣವಾಗಿತ್ತು; ಆ ವೇಳೆಯಲ್ಲಿ ವೀರ ರೌದ್ರರಸಗಳು ಇಣಿಕಿ ನೋಡಲೂ ಅಲ್ಲಿ ಅವಕಾಶವಿರಲಿಲ್ಲ. ಆದರೆ ಆ ಕೊರತೆಯನ್ನು ರತ್ನಾಕರ ತನ್ನ ಶತಕಗಳಲ್ಲಿ [ರತ್ನಾಕರಶತಕ ಹಾಗೂ ಅಪರಾಜಿತಶತಕದಲ್ಲಿ ಮಾತ್ರ] ಪರಿಹರಿಸಿರುವನು. ಇಲ್ಲಿಯ ಶೈಲಿ ಕಾಮನಬಿಲ್ಲಿನಂತೆ ಮನಮೋಹಕವಲ್ಲದಿದ್ದರೂ ಸಿಡಿಲಿನಂತೆ ಮೊನಚಾದುದು. ಒನಪು ಒಯ್ಯಾರ ಇಲ್ಲಿಲ್ಲದಿದ್ದರೂ ಭರತೇಶವೈಭವದಲ್ಲಿಲ್ಲದ ಹರಿತವನ್ನೂ ಕೊರೆತವನ್ನೂ ಹೆಜ್ಜೆ ಹೆಜ್ಜೆಗೂ ಕಾಣಬಹುದು!

ಜ್ಞಾನಿಯ ಮುಟ್ಟಲಮ್ಮದು ಕರ್ಮವೆನ್ನಲಾ | ಜ್ಞಾನ ತಾನಾವುದೆನಲು ||
ಜ್ಞಾನವೆ ನಾನು ಶರೀರ ನಾನಲ್ಲೆಂಬ | ಮಾನಸದನುಭವವಲ್ತೆ[3] || ೧೭ ||
ನೀರು ಬೆಟ್ಟವ ಕೊರೆವಂತೆ ರಾಯನಧ್ಯಾನ | ವಾರಿ ಭೇದಿಸಿಕರ್ಮಗಿರಿಯಾ ||
ಸೋರಿಸುತಿರ್ದುದು ಜಿನಜಿನ ಹಂಸತ | ತ್ವಾರಾಧನೆಗೆಣೆಯುಂಟೆ?[4] || ೪೧ ||
ಸೂಜಿಯಂದದಿ ಮಳೆಸುರಿಯೆ ಹಸಿಯಮಣ್ಣಾ | ಭಾಜನ ಕರಗಿಹೋದಂತೆ ||
ತೈಜಸಕಾರ್ಮಣತನು ಸೋರುತಿದ್ದುದಾ | ರಾಜನ ಧ್ಯಾನಧಾರೆಯೊಳು[4] || ೪೨ ||
ಬಿಗಿದ ಮೂಡೆಯ ಕಟ್ಟು ಸಡಿಲವಾದರೆ ಧ್ಯಾನ | ವೊಗುವಂತೆ ಬಂಧದೊಡ್ಡಳಿದು |
ಮಿಗೆ ಕರ್ಮಧೂಳಿ ಸೋರುವುದದು ಧ್ಯಾನಿಗೊ | ಬ್ಬನಿಗೆ ಗಮ್ಯ ಪರರ್ಗೆ ಕಾಣಿಸದು[4] || ೪೪ ||

೧. ಭ. ವೈ. ೨ನೇ ಸಂ. ೨. ಭ. ವೈ. ೭೨ನೇ ಸಂ. ೩. ಭ. ವೈ. ೨ನೇ ಸಂ.
೪. ಭ. ವೈ. ೧೮ನೇ ಸಂ.

ಆತ್ಮಜ್ಞಾನಿ ಅಜೇಯನಾಗುವನೆಂಬುದನ್ನು ಭರತೇಶವೈಭವದಲ್ಲಿ ರತ್ನಾಕರ ಹೃದಯಂಗಮವಾಗಿ ಬಣ್ಣಿಸಿರುವನು.

ಮನದವಿಕಲ್ಪಮಿಂದ್ರಿಯ ಕಷಾಯಮನಾಗಿಪುದಂತವಾದೊಡಾ |
ತನುವಚನಂಗಳಾಡುವುವು ತಾನದರಿಂದವೆ ಕರ್ಮಲಬ್ಧಿಯಾ ||
ಮನವೆ ನಿಜಾತ್ಮ ರೂಪದೊಳೆ ಮಗ್ನವನೆಯ್ದಿದಮೇಲೆ ಕರ್ಮಬಂ |
ಧನದೆಡೆಯೆತ್ತ ನಿರ್ಜರೆಗಿದೊಂದೆಯಲಾ ಅಪರಾಜಿತೇಶ್ವರಾ || ೮೦ ||

ಮನಸ್ಸಿನಂತೆ ಮಹಾದೇವ ಎಂಬ ಮಾತನ್ನು ರತ್ನಾಕರ ಮನಮುಟ್ಟುವಂತೆ ವಿವರಿಸಿರುವನು. ಮೊಟ್ಟಮೊದಲು ಚಿತ್ತ ಶುದ್ಧಿಯಾಗಬೇಕು; ಅನಂತರ ಆಧ್ಯಾತ್ಮಿಕ ಏಳಿಗೆ. ಮನಸ್ಸಿನ ಮೇಲೆ ಲಗಾಮು ಹಾಕದೆ ಮಾಡುವ ಜಪ ತಪಗಳೆಲ್ಲ ನೀರಿನಲ್ಲಿ ಹೋಮವೆಸಗಿದಂತೆ. ಒಳಗೇ ಹೆಗ್ಗಣವನ್ನು ಬಿಟ್ಟು ಬಿಲದ ಬಾಯನ್ನು ಎಷ್ಟು ಮುಚ್ಚಿದರೇನು ಪ್ರಯೋಜನ? "ಮನದ ವಿಕಲ್ಪವೇ ಇಂದ್ರಿಯಕಷಾಯಗಳ ತೌರೂರು! ಮನದ ವಿಕಲ್ಪ ಮೈಯಲ್ಲೂ ಮಾತಿನಲ್ಲೂ ವ್ಯಕ್ತವಾಗುವುದು. ಅಂದರೆ ತನುವಚನಗಳ ಹುಚ್ಚು ಕುಣಿತಕ್ಕೆ ಮನದ ವಿಕಲ್ಪವೇ ಪ್ರೇರಕ ಹಾಗೂ ಚಾಲಕ! ತನುಮನ ವಚನಗಳೇ ಕರ್ಮವನ್ನಾಹ್ವಾನಿಸಿ ಹಸೆಮಣೆಯನ್ನು ಹಾಕುವ ಆಶ್ರಯದಾತರು! ಆದರೆ ಮನಸ್ಸೇ ಆತ್ಮರೂಪದಲ್ಲಿ ಲೀನಗೊಂಡಾಗ ಕರ್ಮವನ್ನಾಹ್ವಾನಿಸಿ ಅತಿಥಿ ಸತ್ಕಾರವೆಸಗುವ ದಾತರೇ ಇಲ್ಲದಂತಾಗುವುದು. ಹೊಕ್ಕವರನ್ನು ವಿಚಾರಿಸುವವರಿದ್ದರೆ ತಾನೆ ಬಂದವರು ತಂಗುವುದು? ಮೊದಲೇ ತಂಗಿದ್ದ ಕರ್ಮವೂ ಹೇಳದೆ ಕೇಳದೆ ಆಗ ಜಾಗ ಬಿಡದಿರದು! ಕರ್ಮನಿರ್ಜರೆಗೆ ಇದೊಂದೇ ಸೂಕ್ತವಾದ ಉಪಾಯ."

ಮನದ ಕುಭಾವಮೇ ದುರಿತಮಲ್ಲಿ ಸುಭಾವಮೆ ಪುಣ್ಯಮೀಯೆರ |
ಳ್ಮನದೊಳಗಿಲ್ಲದಾ ಮನವೆ ತನ್ನ ನಿಜಾತ್ಮನೊಳ್ಳೆಕ್ಯಮಾಗಿ ಸು ||
ಮ್ಮನೆ ನಿಲೆ ಮೋಕ್ಷಮಂತದರಿನಾತ್ಮನೆ ತಾಂ ಪಗೆ ತಾನೆ ಬಂಧುವುಂ |
ತನಗೆ ವಿನಿಶ್ಚಯಕ್ಕೆ ಗುರುತಾನೆಯಲಾ ಅಪರಾಜಿತೇಶ್ವರಾ || ೮೧ ||

"ಮನದ ನೀಚ ಪರಿಣಾಮಕ್ಕೆ ಪಾಪವೆನ್ನುವರು; ಅದೇ ಮನಸ್ಸಿನ ಶುಭ ಪರಿಣಾಮಕ್ಕೆ ಪುಣ್ಯವೆನ್ನುವರು. ಈ ಪಾಪಪುಣ್ಯಗಳಿಂದ ಬಿಡುಗಡೆಪಡೆದ ಶುದ್ಧಮನಸ್ಸು ತನ್ನಾತ್ಮನಲ್ಲಿ ಒಂದಾಗಿಹೋದಾಗ ಮೋಕ್ಷವೆನ್ನುವರು! ಅದರಿಂದ ಆತ್ಮ, ಕೆಲವೊಮ್ಮೆ ತನಗೆ ತಾನೆ ಪಗೆಯಾಗಿ, ಕೆಲವೊಮ್ಮೆ ಬಂಧುವಾಗಿ ವರ್ತಿಸುವನು. ಕೊನೆಗೆ ನೈಜ ಸ್ವರೂಪವನ್ನು ಪಡೆಯುವುದಕ್ಕೂ ಆತ್ಮ ತನಗೆ ತಾನೇ ಸದ್ಗುರುವಾಗಿ ಮಾರ್ಗದರ್ಶಿಯಾಗಿ ನಿಲ್ಲುವನು"—ಒಳಗಿನ ಶತ್ರುವನ್ನು ಸೆದೆಬಡಿದಾತ ಹೊರಗಿನ ಶತ್ರುಗಳಿಗೆ ಹೆದರಬೇಕಾಗಿಲ್ಲ. ಏಕೆಂದರೆ ನಮ್ಮ ಹಿತಶತ್ರುಗಳೆಲ್ಲ ನಮ್ಮೊಳಗೇ ಜನ್ಮಜನ್ಮಾಂತರದಿಂದ ತಂಗಿರುವರಲ್ಲ! ಲೋಕದಲ್ಲಿ ಸನ್ಮಿತ್ರರಿಗಾಗಿ ಯಾರೂ ಪರದಾಡಬೇಕಾಗಿಲ್ಲ. ನಮ್ಮ ಸನ್ಮಿತ್ರನೆಂದರೆ ಸತ್ಪರಿಣಾಮದ ನಮ್ಮಾತ್ಮವೇ ಆಗಿದೆ. ಕೊನೆಗೆ ಸದ್ಗುರುವಿಗಾಗಿ ಯಾರೂ ಅಲೆಯಬೇಕಾಗಿಲ್ಲ. ಆತ್ಮೋದ್ಧಾರದ ಹಂಬಲ ನಮ್ಮಲ್ಲಿ ಮೊಳೆಯುತ್ತಿದ್ದಂತೆ ನಮ್ಮೊಳಗಿಂದಲೇ ಸದ್ಗುರು ಕೈದೀಪವನ್ನು ಹಿಡಿದು ಕೈವಲ್ಯ ಪದಕ್ಕೆ ದಾರಿ ತೋರುವನು. ಹೊರಗೆ ನಮಗೆ ದೊರೆವ ಸಾಧುಸಂತರು ನಮ್ಮೊಳಗಿನ ಗುರು

ನಮಗೆ ಪರಿಚಯವಾಗುವ ತನಕವಿದ್ದು ಅನಂತರ ಹೊರಟು ಹೋಗುವರು.

"ಈ ಸಂಸಾರವೇ ಒಂದು ಅರಣ್ಯ. ಈ ಅರಣ್ಯದಲ್ಲಿ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಜನ ಢಕಾಯಿತರು ಹೊಂಚುಹಾಕುತ್ತಿದ್ದಾರೆ. ಜೀವನ ತತ್ತ್ವಜ್ಞಾನವನ್ನು ಕಸಿದು ಕೊಂಡು ಬಿಡುವವರು ಇವರೇ. ತಮೋಗುಣ ಜೀವವನ್ನು ನಾಶಗೊಳಿಸಲು ಪ್ರಯತ್ನಿಸುತ್ತದೆ. ರಜೋಗುಣ ಆತನನ್ನು ಈ ಜಗತ್ತಿಗೆ ಕಟ್ಟಿಹಾಕುತ್ತದೆ. ಆದರೆ ಸತ್ತ್ವಗುಣ ಆತನನ್ನು ರಜಸ್ತಮೋ ಗುಣಗಳ ಹಿಡಿತದಿಂದ ಬಿಡಿಸುತ್ತದೆ. ಜೀವ, ಸತ್ತ್ವಗುಣವನ್ನಾಶ್ರಯಿಸಿದರೆ ಆ ತಮೋಗುಣ ದಿಂದ ಉದ್ಭವವಾದ ಕಾಮಕ್ರೋಧಾದಿಗಳಿಂದ ಪಾರಾಗಬಲ್ಲ. ಇದೂ ಅಲ್ಲದೆ ಸತ್ತ್ವಗುಣ, ಜೀವನನ್ನು ಈ ಜಗದ್ಬಂಧನದಿಂದ ವಿಮೋಚನೆ ಮಾಡುತ್ತದೆ. ಆದರೂ ಸತ್ತ್ವಗುಣವೂ ಒಬ್ಬ ಢಕಾಯಿತನೆ. ಅದು ಪರಂಧಾಮಕ್ಕೆ ಮಾರ್ಗ ತೋರಿಸಿಕೊಡಬಲ್ಲದಾದರೂ ತತ್ತ್ವಜ್ಞಾನ ವನ್ನು ಕೊಡಲಾರದು. ರಾಜಮಾರ್ಗಕ್ಕೆ ತಂದುಬಿಟ್ಟು ಅದು ಹೇಳುತ್ತದೆ 'ಆ ಕಡೆ ನೋಡು ಅಗೋ ಅಲ್ಲಿದೆ ನಿನ್ನ ನಿವಾಸ.' ಯಾವ ಅವಸ್ಥೆಯಲ್ಲಿ ಬ್ರಹ್ಮಜ್ಞಾನ ದೊರೆಯಬೇಕೊ ಅದು ಅಲ್ಲಿಂದ ಬಹಳ ದೂರದಲ್ಲೇ ನಿಲ್ಲುತ್ತದೆ.[೧]" "ಆದರೆ ಬ್ರಹ್ಮ ಈ ಮೂರು ಗುಣ ಗಳಿಗೂ ಅತೀತ; ಪ್ರಕೃತಿಗತೀತ. ಈ ಮೂರು ಗುಣಗಳೂ ಸತ್ಯದ ಹೊಸಲನ್ನು ಮುಟ್ಟಲಾ ರವು[೨]" ಶ್ರೀ ರಾಮಕೃಷ್ಣ ಪರಮಹಂಸರು ಸಾಧಕ ತ್ರಿಗುಣಾತೀತನಾದಾಗಲೇ ಮುಕ್ತನಾಗುವ ನೆಂದು ವಿವರಿಸಿರುವರು. ಇತ್ತ ಜೈನಸಿದ್ಧಾಂತ ಪಾಪಪುಣ್ಯಗಳಿಂದ ಬಿಡುಗಡೆ ಪಡೆದಾಗಲೇ ಮುಕ್ತಿಲಾಭವೆಂದು ಸ್ಪಷ್ಟಪಡಿಸಿರುವುದು.

ಇಷ್ಟರುಮೆನ್ನೊಳಿರ್ದಪರನಿಷ್ಟರುಮೆನ್ನೊಳೆ ಇರ್ದಪರ್ ಜಿನೋ |
ದ್ದಿಷ್ಟಮಿದಿರ್ದ ಮೇಲೆ ಪೊರಗೇನನಭೀಕ್ಷಿಪೆನೇನ ಮಾಡುವೆಂ ||
ಅಷ್ಟಗುಣಂಗಳೊಳ್ನಲಿವುತ್ತೊತ್ತರಿಸುತ್ತೊಡನಷ್ಟಕರ್ಮಮಂ |
ದೃಷ್ಟಿಯನೆನ್ನೊಳಾಂ ನಿರಿಸಿ ನಿಂದಪೆನಿನ್ನಪರಾಜಿತೇಶ್ವರಾ || ೮೨ ||

"ಬೇಕಾದವರೂ ನನ್ನಲ್ಲೇ ಇದ್ದಾರೆ, ಅಂತೆ ಬೇಡದವರೂ ನನ್ನೊಳಗೇ ನೆಲಸಿರುವರು! ಜಿನವಾಣಿ ಈ ರೀತಿ ಅಪ್ಪಣೆ ಕೊಡಿಸಿರುವಾಗ ಹೊರಗೆ ನಾನು ಏನು ತಾನೇ ನೋಡಲಿ? ಏನು ತಾನೆ ಮಾಡಲಿ? 'ಅಷ್ಟಗುಣ'ಗಳಲ್ಲಿ ನಲಿಯುತ್ತ, 'ಅಷ್ಟಕರ್ಮ'ಗಳನ್ನು ಧ್ವಂಸಮಾಡಿ ಕೊಂಡು ನನ್ನ ದೃಷ್ಟಿಯನ್ನೆಲ್ಲ ನನ್ನಲ್ಲೇ ಕೇಂದ್ರೀಕರಿಸಿಕೊಳ್ಳುತ್ತೇನಪ್ಪ ಅಪರಾಜಿತ!"

ಅರಸುವೆನೆನ್ನ ದೇಹದೊಳಗೆನ್ನನೆ ಕಾಣ್ಬೆನುಮೂರ್ತಸಿದ್ಧನಂ |
ಪೊರಗೊಳಗೆಲ್ಲಮಂ ತೊಳೆದು ತಿಂಗಳ ಪುತ್ತಳಿಮಾಡಿ ನೋಡುವೆಂ ||
ತರುಬೆವೆನಲ್ಲಿಯೇ ಮನಮನಾಗಳೆ ಬಾಹ್ಯಸಮಸ್ತಚಿಂತೆಯಂ |
ಮರೆವೆನನನಂತಸೌಖ್ಯದೊಳಗಾಳ್ದಪೆನಾನಪರಾಜಿತೇಶ್ವರಾ || ೮೩ ||

"ನನ್ನ ದೇಹದಲ್ಲಿ ನನ್ನನ್ನೇ ಹುಡುಕಾಡುವೆನು; ನನ್ನನ್ನೇ ನೋಡುವೆನು! ಅಮೂರ್ತನಾದ ಸಿದ್ಧನನ್ನು ಒಳಗೂ ಹೊರಗೂ ತೊಳೆದು ಚಂದ್ರಬಿಂಬದ ಬೊಂಬೆಯಾಗಿಸಿ ಕಣ್ತುಂಬ

೧. ಶ್ರೀ ರಾ. ಕೃ. ವ. ವೇ., ಪೂ., ಪು. ೩೬೫.
೨. ಅದೇ ಗ್ರಂಥ ಪು. ೩೬೪.

ಈಕ್ಷಿಸುವೆನು! ನನ್ನ ಮನವನ್ನು ಮತ್ತೆ ಮತ್ತೆ ಅಲ್ಲಿಗೇ ತರುಬುವೆನು. ಬಾಹ್ಯವಾದ ಸಮಸ್ತ ಚಿಂತೆಗಳನ್ನೂ ಮರೆತುಬಿಡುತ್ತೇನೆ. ಅಪರಾಜಿತ, ಇನ್ನು ಅನಂತಸೌಖ್ಯದಲ್ಲಿ ನಾನು ಓಲಾಡು ವೆನಯ್ಯ!"

ತನು ಜಿನಗೃಹವೆಂದು ಮನ ಸಿಂಹಪೀಠ | ವೆಂದನುಪಮಾತ್ಮನೆ ಜಿನನೆಂದು ||
ನೆನಹನೆಲ್ಲವ ಬಿಟ್ಟು ಕಣ್ಮುಚ್ಚಿನೋಳ್ಪಾಗ | ಜಿನನಾಥ ತೋರವನೊಳಗೆ[೧] || ೬೯ ||
ಎಳೆಮಿಂಚಿನಂದದ ಬೊಂಬೆಯೊ ತಿಂಗಳ | ತಿಳಿವೆಳಗಿನೊಳಾದ ರೂಪೋ ||
ಪಳಕಿನ ಪುತ್ತಳಿಯೋಯೆನೆ ಕ್ರಮದಿಂದ | ಹೊಳೆವುದೊಳಗೆ ತನ್ನರೂಪು[೧] || ೭೭ ||
ಬುದ್ಧಿಯೊಳಾ ರಾಯ ಬೆಳುದಿಂಗಳೊಳಗೊಂದು | ಸಿದ್ಧಬಿಂಬವ ರಚಿಸಿದನು ||
ಸಿದ್ಧೋಹಮೆಂದಲ್ಲಿ ಸುಖದೊಳಿದ್ದನು ಜಿನ | ಸಿದ್ಧರಿಹಂತೆ ಮುಕ್ತಿಯೊಳು[೨] || ೧೩೫ ||
ಕಂಡು ಕೇಳ್ದರಿಯದೊಂದಚ್ಚ ಬೆಳ್ದಿಂಗಳ | ಪಿಂಡದೊಳಗೆ ಚಲುವಾಗಿ ||
ಕಂಡರಿಸಿದುದೊಂದು ಪುತ್ತಳಿಯೆನೆ ರಾಯ | ಕಂಡನು ತನ್ನೊಳುತನ್ನಾ[೩] || ೫೬ ||
ಚಂದ್ರಸೂರ್ಯರ ಗೋಷ್ಠಿಯೊಳು ಕುಳಿತಂತೆ ಜಿ | ನೇಂದ್ರ ಸಂಪದ ಸಾರಿದಂತೆ ||
ರುಂದ್ರ ಸಿದ್ಧರೊಳ್ಯೆಕ್ಯವಾದಂತೆ ರಾಜಯೋ | ಗೀಂದ್ರನಿದ್ದನು ಧ್ಯಾನದಲ್ಲಿ[೩] || ೫೭ ||

ಶತಕದ ವಿವರಣೆಗೂ ಭರತೇಶವೈಭವದ ಬಣ್ಣನೆಗೂ ಇರುವ ಹೋಲಿಕೆಯನ್ನು ಗಮನಿಸ ಬೇಕು.

ಬಾಗದೆ ತೂಗದೋರೆ ಪುಗದೊಯ್ಯನೆ ಸೈಕನೆ ಕುಳಿತಕ್ಕೆ ನಿಂ |
ದಾಗಲಿ ದೇಹಮೂಷೆಯನುಪಾಯದೊಳಾಂತು ತಪೋಗ್ನಿಗೊಡ್ಡಿ ಬೇ ||
ರಾಗಿರೆ ಸೋರ್ಚಿ ಕರ್ಮಮಯಣಾಕೃತಿಯಂ ಬಳಿಕಲ್ಲಿ ತೋರುತಿ |
ರ್ಪಾಗಸಮೆಂದು ಕಾಣ್ಬೆನೊಳಗೆನ್ನನೆ ನಾನಪರಾಜಿತೇಶ್ವರಾ || ೮೪ ||

"ಶರೀರವನ್ನು ಬಗ್ಗಿಸದೆ ತೂಗಾಡಿಸಿದೆ, ಓರೆಮಾಡದೆ ನಿಧಾನವಾಗಿ ಕುಳಿತೋ ನಿಂತೋ ಬೈಯೆಂಬ ಮೂಸೆಯನ್ನು ಯುಕ್ತಿಯಿಂದ ಹಿಡಿದುಕೊಂಡು ತಪೋಜ್ವಾಲೆಗೊಡ್ಡುವೆನು. ಆಮೇಲೆ ಕರ್ಮವೆಂಬ ಮೇಣಾಕೃತಿಯನ್ನು ಸೋರಿಸಿಬಿಡುವೆನು. ಅನಂತರ ಅಲ್ಲಿ ಗೋಚರಿ ಸುವ ಆಕಾಶವೇ ನಾನು ಎಂದು ಒಳಗೆ ನನ್ನನ್ನೇ ನೋಡಿಕೊಳ್ಳುವೆನು."

ಚೇತನನಾತ್ಮನಾಗಸಮಚೇತನಮೆಂಬಿನಿತಲ್ಲದೇ ಸ್ವರೂ |
ಪಾತಿಶಯಕ್ಕೆ ಭೇದವಿಡಲಿಲ್ಲ ನಭಕ್ಕೆಯುಮಾತ್ಮತತ್ತ್ವಕಂ ||
ಓತರಿಂದಮಾಗಸವೆ ತಾಂ ಪುರುಷಾಕೃತಿಯಾಯ್ತೊ ಎಂಬುಪಾ |
ಯಾತುರವಿಟ್ಟು ನೋಳ್ಪೆನೊಳಗೆನ್ನನೇ ನಾನಪರಾಜಿತೇಶ್ವರಾ || ೮೫ ||

"ಆತ್ಮವಾದರೊ ಚೈತನ್ಯಪೂರ್ಣನು, ಆಗಸವಾದರೋ ಜಡಮಯವಾದುದು ಎಂಬ ಭೇದವೊಂದನ್ನುಳಿದರೆ ಆತ್ಮ ಮತ್ತು ಆಗಸದ ಸ್ವರೂಪ ಒಂದೇ ಆಗುವುದು. ಆಕಾಶವೇ ಪುರುಷರೂಪವನ್ನು ತಳೆದಿದೆಯೊ ಎಂದುಕೊಂಡು ಯುಕ್ತಿಯಿಂದ ಅಂತರಂಗದಲ್ಲಿ ನಾನು

೧. ಭ. ವೈ. ೭ನೇ ಸಂ ;
೨. ಭ. ವೈ. ೧೧ನೇ ಸಂ ;
೩. ಭ. ವೈ. ೧೮ನೇ ಸಂ.

ನನ್ನನ್ನೇ ಕಾತರಗೊಂಡು ನೋಡುವೆನು."

"ಕೊಡದೊಳಗಾಕಾಶವಿಪ್ಪಂತೆ ಮೈಯೊಳ | ಗಡಗಿರ್ದ ಬಯಲರೂಪನನು |
ನಡುನೆತ್ತಿಯಿಂದಡಿಮುಟ್ಟ ಕಂಡನು ಕಟ್ಟಿ | ಕಡೆಯಕಾಂಬಂತೆ ತತ್ವಗಳಾ || ೨೮ ||
ಹೊಗೆಯಂತೆ ಮಸಿಯ ಕದಡಿ ಮೀಯಲೆರೆವಂತೆ | ಜಗುಳುತಿಹುದು ಪಾಪರಜಸು |
ಮೊಗೆದು ರಕ್ತವನೆರೆದಂತರಸಿನದಂತೆ | ದಿಗಿಲನಿಳಿವುದಾಗ ಪುಣ್ಯಾ || ೪೦ ||
ಒಮ್ಮೊಮ್ಮೆ ಚಿದ್ರೂಪಕಾಂತಿವೆರಸಿ ಕಣ್ಣು | ನೊಮ್ಮೊಮ್ಮೆ ಮಾಸಿಕಾಣುವನು |
ಗುಮ್ಮುತಿಹವು ಕಂಡ ಕಡೆಗೆ ಕರ್ಮಗಳೊಳ | ಗುಮ್ಮುತಿಹವು ಸುಗುಣಗಳು[೧] || ೪೮ ||

"ಅಧ್ಯಾತ್ಮ ಅನಿರ್ವಚನೀಯವಾದುದು ನಿಜವಾದರೂ ರತ್ನಾಕರ ಅದರ ಸೊಗಸನ್ನು ಅನುಭವಿಸಿರುವನು. ಯೋಗಿಯಾದ ಈತ ಮಹಾಕವಿಯೂ ಆಗಿರುವುದರಿಂದ ಅಲೌಕಿಕವಾದ ಅನುಭವಕ್ಕೆ ವಿಮಲಕಲೆಯ ಬಣ್ಣ ಕಟ್ಟಿರುವನು. ಸಾಧಕ ಪ್ರಾರಂಭದಲ್ಲಿ ಈ ಕಲ್ಪನಾವಿಲಾಸದಿಂದಲೇ ಸಾಗಬೇಕಾಗುವುದು. ಕಲ್ಪನೆ ಸ್ಫುಟಗೊಂಡು ರಸವಾಗುವುದು....ರತ್ನಾಕರ ಅಧ್ಯಾತ್ಮ ರಸಿಕನಾದ ಯೋಗಿಯೇ ಹೊರತು ಬೇಗುದಿಗೊಳ್ಳುವ ಸಿದ್ಧಾಂತ ಭಾಸ್ಕರನಲ್ಲ.[೨]" ಈತ ತನ್ನ ಶತಕಗಳಲ್ಲೂ (ರತ್ನಾಕರ ಶತಕ ಮತ್ತು ಅಪರಾಜಿತಶತಕಗಳಲ್ಲಿ ಮಾತ್ರ) ಅಪೂರ್ವವಾದ ಕಲ್ಪನೆಗಳನ್ನು ತರದೇ ಇಲ್ಲ. ಹುಟ್ಟುಕವಿಯಾದ ರತ್ನಾಕರ ನುಡಿದುದೇ ಕಾವ್ಯ, ನಡೆದುದೇ ನರ್ತನವೆಂಬುದನ್ನು ಈತನ ಕೃತಿಗಳಲ್ಲೆಲ್ಲ (ತ್ರಿಲೋಕಶತಕ ಒಂದು ಬಿಟ್ಟು) ನಾವು ಕಾಣಬಹುದು!

ರತ್ನಾಕರ ಕಲ್ಪನಾವಿಲಾಸಿ; ಬ್ರಹ್ಮರ್ಷಿಯಾಗಲು ಪಣತೊಟ್ಟ ರಸ ಋಷಿ! ಯಾವ ಸಾಧಕನೇ ಆಗಲಿ ಪ್ರಾರಂಭದಲ್ಲಿ ನಿರಾಕಾರನಾದ ಆತ್ಮವನ್ನು ಸಾಕಾರವಾಗಿ ಕಲ್ಪಿಸಿಕೊಂಡು ಪ್ರತಿಭಾನೇತ್ರದಿಂದವಲೋಕಿಸಬೇಕಾಗುವುದು. ಪ್ರತಿಭಾನೇತ್ರವಿಲ್ಲದ ಅಂತೆ ಕಲ್ಪನಾಪಕ್ಷಗಳಿಲ್ಲದ ಶುಷ್ಕ ವೇದಾಂತಿಗೆ ಕೈವಲ್ಯಲಕ್ಷ್ಮಿ ಎಂದಿಗೂ ಒಲಿಯಲಾರಳು. ರಾಗರಸಿಕನಾಗಿ, ವೀತರಾಗರಸಿಕನಾಗಿ ನಿಂತ ಸಾಧಕನಿಗೇನೆ ಮುಕ್ತ್ಯಂಗನೆಯ ಪ್ರೇಮ ಮೀಸಲು.

ಸಿದ್ಧರರೂಪಿನೊಳ್ಮೊದಲೆ ನೋಟದ ಸಾಧನೆಮಾಡಿ ಸಂ |
ಶುದ್ಧದೊಳಾನುಮಿಂತೆಯೆನುತಾಗಳೆ ತನ್ನನೆ ನೋಡಿ ನೋಡಿಯಾ ||
ಸಿದ್ಧರುಮಾನುಮೆಂಬೆರಡು ಭೇದವಡಂಗಿ ನಿಜಾತ್ಮನಲ್ಲಿ ಸ ||
ನ್ನದ್ಧದೊಳೈಕ್ಯವಾಗುವನೆ ಸಿದ್ಧನಲಾ ಅಪರಾಜಿತೇಶ್ವರಾ || ೮೬ ||

"ಸಿದ್ಧರ ರೂಪವನ್ನು ಕಲ್ಪಿಸಿಕೊಂಡು ಆ ಕಲ್ಪನಾಚಿತ್ರವನ್ನು ಅವಲೋಕಿಸುತ್ತಾ ತನ್ನ ಸ್ವರೂಪವೂ ಇಂಥದೇ ಎಂದುಕೊಂಡೀಕ್ಷಿಸುತ್ತ ಕೊನೆಗೆ ನಾನು ಬೇರೆಯಲ್ಲ, ಸಿದ್ಧಸ್ವರೂಪ ಬೇರೆಯಲ್ಲ ಎಂದು ಅದ್ವೈತನಾಗುವಾತನೆ ನಿಜವಾದ ಸಿದ್ಧನಲ್ಲವೆ?"

ಇದಿರಿಟ್ಟು ಜಿನಸಿದ್ಧರುಗಳ ಪೂಜಿಪುದು ನೋ | ಳ್ಪುದು ಪೊಗಳ್ವುದು ಭೇದಭಕ್ತಿ ||
ಪದೆದು ತನ್ನಾತ್ಮರೂಪಿನೊಳಿಟ್ಟು ನೋಡಿದ | ರದು ಭೇದವಿಲ್ಲದ ಭಕ್ತಿ[೩] || ೪೩ ||

---

೧. ಭ. ವೈ. ೧೪ನೇ ಸಂ.

೨. ಜಿ. ಬ್ರಹ್ಮಪ್ಪ, 'ರತ್ನಾಕರಸಿದ್ಧನ ಹಂಸಕಲೆ' ಪ್ರ. ಕ. ೪೧-೪, ಪು. ೧೬೩-೧೭೩.

೩. ಭ. ವೈ. ೧೭ನೇ ಸಂ.

ಧೂಳರಾಸಿಯೊಳೊಂದು ಸ್ಫಟಿಕದ ಪ್ರತಿಮೆಯ | ಹೂಳಿದಂತೀ ದೇಹದೊಳಗೆ ||
ಹೂಳಿರ್ದನೆನ್ನಾತ್ಮನೆಂದು ನೋಡಿದರಲ್ಲಿ | ಥಾಳಿಸುತಾತ್ಮ ತೋರುವನು[೧] || ೪೮ ||
ಇಂದ್ರಿಯವೈದರ ಸೋಂಕಿಲ್ಲವಾಗ ಸು | ರೇಂದ್ರಸುಖಿನ ಸೊಪ್ಪುಗಂಡು ||
ತಂದ್ರವಳಿದು ಝುಮ್ಮಝುಮ್ಮನೆ ರಾಯಗ | ತೀಂದ್ರಿಯ ಸುಖದೋರುತಿಹುದು[೨] || ೫೮ ||
ತಂಪುದೋರಿಹುದಾಗ ಸರ್ವಾಂಗದೊಳು ಸುಖ | ಪೊಂಪುಳಿಯಾಗಿರುತಿಹುದು ||
ಅಂ ಪೆರನೆಂಬ ವಿಕಲ್ಪವಿಲ್ಲ ಧ್ಯಾನ | ದಿಂಪನದೇನ ಬಣ್ಣಿಪೆನು[೩] || ೫೯ ||

ಸಾಧಕ ಮೊದಲು **'ಭೇದಭಕ್ತಿ'**ಯಲ್ಲಿ ಪರಿಣತನಾಗಬೇಕು. ಭೇದಭಕ್ತಿ ಸ್ಫುಟಗೊಂಡನಂತರ **'ನಿರ್ಭೇದಭಕ್ತಿ'**ಯನ್ನು ಪ್ರಾರಂಭಿಸಬೇಕು. 'ಸವಿಕಲ್ಪಸಮಾಧಿ'ಯ ರಸಗಡಲಲ್ಲಿ ಮುಳುಗೆದ್ದ ಮೇಲೆ 'ನಿರ್ವಿಕಲ್ಪಸಮಾಧಿ'ಯ ಬ್ರಹ್ಮಾನಂದಾರ್ಣವದ ದರ್ಶನವಾಗಬಹುದು. ಸಾಧಕನ ಬಾಳ್ವೆ ಹರಿವ ನದಿಯಿದ್ದಂತೆ; ಸಾಗರ ಸಿಗುವ ತನಕ ಬೇಸರವಿಲ್ಲದೆ ಸಾಗಿ ಕೊನೆಗೆ ಸಾಗರದಲ್ಲಿ ತಾನೂ ಲಯವಾಗಿ ಸಾಗರವಾಗಿ ಹೋಗಬೇಕು.

"ವಿಷಯಬುದ್ಧಿ ಲೇಶ ಮಾತ್ರವಿದ್ದರೂ ಬ್ರಹ್ಮಜ್ಞಾನ ದೊರಕೋದಿಲ್ಲ. ಋಷಿಗಳು ಎಷ್ಟು ಕಷ್ಟ ತೆಗೆದುಕೊಳ್ಳುತ್ತಿದ್ದರು....ಏನು ಕತೆ....ಇಡೀ ದಿನವನ್ನೆಲ್ಲ ಏಕಾಂಗಿಯಾಗಿ ಭಗವಂತನ ಧ್ಯಾನ ಚಿಂತನೆಯಲ್ಲೇ ಕಳೆಯುತ್ತಿದ್ದರು....ರೂಪ, ರಸ, ಸ್ಪರ್ಶ ಇವೇ ಮೊದಲಾದ ವಿಷಯ ವಸ್ತುಗಳ ಕಡೆ ಮನಸ್ಸು ಹೋಗದ ಹಾಗೆ ನೋಡಿಕೊಳ್ಳುತ್ತಿದ್ದರು. ಅಷ್ಟು ಕಷ್ಟ ತೆಗೆದುಕೊಳ್ಳುತ್ತಿದ್ದರಿಂದಲೇ ಅವರು ಬ್ರಹ್ಮ ತಮ್ಮ ಅಂತರ್ಯಾಮಿ ಎಂಬ ಅನುಭವ ಪಡೆಯುತ್ತಿದ್ದರು. ಕಲಿಯುಗದಲ್ಲಿ ಅನ್ನಗತ ಪ್ರಾಣ, ದೇಹಬುದ್ಧಿ ಸುಲಭವಾಗಿ ಹೋಗದು. ಮನುಷ್ಯ ಈ ಅವಸ್ಥೆಯಲ್ಲಿ 'ಸೋಽಹಮ್' ಎಂಬುದಾಗಿ ಹೇಳುವುದು ಒಳ್ಳೆಯದಲ್ಲ. ಪ್ರಾಪಂಚಿಕ ಎಲ್ಲಾ ಕಾರ್ಯಗಳಲ್ಲೂ ತೊಡಗುತ್ತಾ 'ನಾನೆ ಬ್ರಹ್ಮ' ಅಂತ ಹೇಳಿಕೊಳ್ಳುವುದು ಸರಿಯಲ್ಲ. ಯಾರ ಕೈಯಲ್ಲಿ ವಿಷಯವಸ್ತುಗಳನ್ನು ತ್ಯಾಗ ಮಾಡಲು ಸಾಧ್ಯವಿಲ್ಲವೋ ಯಾರ ಅಹಂ ಬಡಪೆಟ್ಟಿಗೆ ಜಗ್ಗಲೊಲ್ಲದೋ ಅವರು 'ನಾನು ದಾಸ' 'ನಾನು ಭಕ್ತ' ಎಂಬ ಭಾವನೆಯನ್ನು ಇಟ್ಟುಕೊಂಡಿರುವುದು ಒಳ್ಳೆಯದು. ಭಕ್ತಿಮಾರ್ಗದಲ್ಲಿ ಹೋದರೂ ಆತನ ಸಾಕ್ಷಾತ್ಕಾರವನ್ನು ಪಡೆಯಬಹುದು[೪]" ಎಂದು ಶ್ರೀ ರಾಮಕೃಷ್ಣ ಪರಮಹಂಸರು ನಿರ್ಭೇದೋಪಾಸಕರಿಗೆ ಒಂದೆಚ್ಚರಿಕೆಯನ್ನಿತ್ತಿರುವರು. ಸಾಧನೆ ಕ್ರಮಬದ್ಧವಾಗಿ ರೂಪಗೊಳ್ಳಬೇಕು; ಹಂತಹಂತವಾಗಿ ಮುಂದುವರಿಯಬೇಕು. ಪಾಕಕ್ಕೆ ಬರದ ಮುನ್ನ ಬಲವಂತಕ್ಕೆ ಹಣ್ಣುಮಾಡಲು ಹೋಗಬಾರದಲ್ಲವೆ?

ಯೋಗವಿಜ್ಞಾನ

ಪರಮಾತ್ಮನ ದರ್ಶನವಾಗಬೇಕಾದರೆ ಮೊಟ್ಟಮೊದಲು ತೀವ್ರಾಸಕ್ತಿ ಉಕ್ಕಿಬರಬೇಕು. ಅನಂತರ ಸಂದರ್ಭೋಚಿತವಾಗಿ ಸಾಧನೆಯೆಸಗಬೇಕು. ಇಂಥ ಸಾಧನೆಗಳಲ್ಲಿ ಯೋಗಮಾರ್ಗವೂ ಒಂದು. ಈಗ ರತ್ನಾಕರ ಯೋಗರಹಸ್ಯವನ್ನು ವಿವರಿಸುವನು.

---

೧. ಭ. ವೈ. ೧೭ನೇ ಸಂ.

೨. ಭ. ವೈ. ೧೪ನೇ ಸಂ.

೩. ಶ್ರೀ ರಾ. ಕೃ. ವ. ವೇ., ಪೂ., ಪು. ೫೩.

ನಾಸಿಕಾಗ್ರದೊಳ್ನೆಲಸಿ ದೃಷ್ಟಿಗಳೊಪ್ಪೆ ಮನಂ ಲಲಾಟದೊಳ್ |
ಸೂಸದೆ ಕೂರ್ಮನಂತೊಳಗಡಂಗಿಸಿ ಮತ್ತುಳಿದಿಂದ್ರಿಯಂಗಳಂ |
ಶ್ವಾಸಮದೊಯ್ಯನಾಗಲೊಳಗೆನ್ನನೆ ನಾಂ ಪರಿಯಂಕ, ಚಂದ್ರ, ಭ |
ದ್ರಾಸನಮಾದಿಯಾದವರೊಳೀಕ್ಷಿಪೆನಿನ್ನಪರಾಜಿತೇಶ್ವರಾ ‖ ೮೭ ‖

"ದಿಟ್ಟಿ ಮೂಗಿನ ತುದಿಯಲ್ಲಿದ್ದು, ಹಣೆಯಲ್ಲಿ ಅಚಲವಾದ ಮನವಿದ್ದು, ಉಳಿದ ಇಂದ್ರಿಯಗಳನ್ನು ಆಮೆಯಂತೆ ಒಳಗಡಗಿಸಿಕೊಂಡು ಉಸಿರಾಟ ನಿಧಾನವಾಗಿರಲು ಪರಿಯಂಕಾಸನ, ಚಂದ್ರಾಸನ, ಭದ್ರಾಸನ ಮೊದಲಾದ ಆಸನಗಳಲ್ಲಿದ್ದುಕೊಂಡು ಅಂತರಾತ್ಮನನ್ನೀಕ್ಷಿಸುವೆನು."

ಕಲಿಗೆ ಮಹಾಬಲಂಗೆ ಮುಖಕುಕ್ಕುಟ ಕೂರ್ಮಸರೋಜ ವಜ್ರ ಕುಂ |
ಡಲಿಕ ಮಯೂರವೀರಮಕರೋತ್ಕುಟಿಕಾಸನಮಾದಿಯಾದಿವುಂ ‖
ಫಲಿಸುಗುಮಲ್ಪಶಕ್ತಿಗೆಸೆಗುಂ ಪರಿಯಂಕಮದೊಂದು ಮಗ್ಗಲೊಳ್ |
ಮಲಗಿಯುಮಾತ್ಮದೃಷ್ಟಿಯಹುದಾರದವಂಗಪರಾಜಿತೇಶ್ವರಾ ‖ ೮೮ ‖

"ಕೆಲವು ಆಸನಗಳು ಕಷ್ಟಸಾಧ್ಯ. ಮುಖ, ಕುಕ್ಕುಟ, ಕೂರ್ಮ, ಸರೋಜ, ವಜ್ರ, ಕುಂಡಲಿಕ, ಮಯೂರ, ವೀರ, ಮಕರ, ಉತ್ಕುಟಿಕ ಮೊದಲಾದ ಆಸನಗಳು ಎಲ್ಲರಿಗೂ ಸಿದ್ಧಿಸುವಂಥದಲ್ಲ; ಕೇವಲ ಮಹಾಬಲಶಾಲಿಯಾದ ಸಾಹಸಿಗೆ ಮಾತ್ರ ಇವು ಸಿದ್ಧಿಸುತ್ತವೆ. ಅಲ್ಪಶಕ್ತಿಯುಳ್ಳವನಿಗೆ ಪರಿಯಂಕಾಸನ ಅನುಕೂಲವಾದುದು. ಇದಕ್ಕೂ ಶಕ್ತಿಯಿಲ್ಲದವನು ಒಂದು ಮಗ್ಗಲಾಗಿ ಮಲಗೇ ಆತ್ಮದರ್ಶನ ಪಡೆಯಬಹುದು.[೧]"

ಸಾಧಕ ಪ್ರಾರಂಭಾವಸ್ಥೆಯಲ್ಲಿ ಕ್ರಮವಿಡಿದು ಸಾಗಬೇಕಾಗುವುದು; ನಿಯಮಬದ್ಧವಾಗಿ ಆಚರಿಸಬೇಕಾಗುವುದು. ಈಜು ಕಲಿಯುವ ತನಕ ಸೋರೆಬುರುಡೆಯ ನೆರವು ಬೇಕು; ನೀರಿನ ಆಳ ಅಗಲ ಗಮನಿಸಬೇಕು. ಈಜುವುದು ಬಂದ ನಂತರ ಯಾವುದರ ನೆರವೂ ಬೇಕಿಲ್ಲ. ನೀರೆಷ್ಟಿದ್ದರೇನು?

ಆಸನಸಂಕುಲಂಗಳನುಬಂಧದಿ ಜಾಡ್ಯಹರಂ ಪಟುತ್ವವೆ |
ಲ್ಲೋಸರಿಕುಂ ಪುರಾಣರುಜೆ ಪೂರಕಕುಂಭಕ ರೇಚಕಂಗಳ ‖
ಭ್ಯಾಸಮೆ ಚಿತ್ತಮಂ ಸ್ಥಿರತೆಮಾಡಿ ವಿಕಲ್ಪಮನೊತ್ತುಗುಂ ಸಮಂ |
ತೀ ಸಮಕಟ್ಟು ಬೇಕು ನಿಜಮಂ ಬಗೆವಂಗಪರಾಜಿತೇಶ್ವರಾ ‖ ೮೯ ‖

ನಾನಾ ಆಸನಗಳನ್ನು ಅಭ್ಯಾಸ ಮಾಡುವುದರಿಂದ ಜಡತ್ವ ಹೋಗಿ ಲವಲವಿಕೆಯುಂಟಾಗುವುದು. ಹಳೆಯ ರೋಗವೆಲ್ಲ ವಾಸಿಯಾಗುವುದು. **'ಪೂರಕ'**, **'ಕುಂಭಕ'**, **'ರೇಚಕ'**ಗಳ ಅಭ್ಯಾಸದಿಂದ ಮನಸ್ಸು ಸ್ಥಿರಗೊಂಡು ಚಂಚಲತೆ ತೊಲಗುವುದು. ಆತ್ಮಾನುಸಂಧಾನವೆಸಗುವಾಗ ಈ ಸಲಕರಣೆಗಳು ಬೇಕಾಗುವುವು."

೧. ಸ್ವಸ್ತಿಕ, ಪದ್ಮ ಮುಂತಾದುವು ನಿಜವಾದ ಆಸನಗಳಲ್ಲ. ಇವು ಶರೀರಕ್ಕೆ ಮಾತ್ರವೇ ಸಂಬಂಧಿಸಿಕೊಂಡು ಅಷ್ಟೇನೂ ಹೆಚ್ಚಿನ ಫಲವನ್ನು ಕೊಡತಕ್ಕವುಗಳಾಗಿಲ್ಲ. ಇವು ಸುಖವನ್ನು ಹಾಳುಮಾಡತಕ್ಕವು. ಇವನ್ನು ಆಸನವೆಂದು ಗ್ರಹಿಸಬಾರದು. ಬ್ರಹ್ಮಚಿಂತನೆಗೆ ಅನುಕೂಲವಾದ ಮನಸ್ಸಿನ ಸ್ಥಿತಿಯೇ 'ಆಸನ'ವೆನಿಸುವುದು—ಶ್ರೀ ಶಂಕರಾಚಾರ್ಯರು, ಅ. ಅ, ಪ. ೧೧೨.

ಪೊಳೆ ಕೆರೆಯೊತ್ತು ವಾರ್ದಿತಟಮರ್ಹದಗಾರಮರಣ್ಯಮುಂ ವನಂ |
ಪುಳಿಲಚಳಂ ಬಿಲಂ ಗುಹೆ ನಿಷೀದಿಕೆ ಪಾಳ್ಮನೆ ರುದ್ರಭೂಮಿಯಿ ‖
ನ್ನುಳಿದ ವಿವಕ್ತಮಕ್ಕೆ ಪಶು ಷಂಡ ವಧೂ ಖಳಜಂತು ದಾರಿಗರ್ |
ಸುಳಿಯದ ತಾಣಮಾದೊಡಿವು ಜಾನಕೆ ಲೇಸಪರಾಜಿತೇಶ್ವರಾ ‖ ೯೦ ‖

ನದಿಯ ತೀರ, ಕೆರೆಯ ದಂಡೆ, ಸಮುದ್ರದ ಕರೆ, ಜಿನಾಲಯ, ಅರಣ್ಯ, ವನ, ಮರಳರಾಶಿ, ಬಿಲ, ಗುಹೆ, ಹಾಳುಮನೆ, ಸುಡುಗಾಡು ಇಲ್ಲವೆ ನಿರ್ಜನಸ್ಥಾನ ಇವು ಧ್ಯಾನಕ್ಕೆ ಯೋಗ್ಯವಾದೆಡೆಗಳು. ಅಲ್ಲದೆ ಹಸು, ನಪುಂಸಕ, ಹೆಣ್ಣು, ಕ್ರೂರಜಂತು, ದಾರಿ ಹೋಕರು ಸುಳಿಯದ ತಾಣವೂ ಧ್ಯಾನಕ್ಕೆ ಪ್ರಶಸ್ತವಾದುದು.

ಬಾರದಜಾನಮಂ ಬರಿಸಿಕೊಂಬ ಸುಸಾಧುಜನಕ್ಕಿವಲ್ಲದೇ |
ಘೋರತಪೋದನಂ ಬಗೆವನೇ ಮಳೆ ಗಾಳಿ ಸಿಡಿಲ್ಬಿಸಿಲ್ಗಳಂ ‖
ಸೀರುಡು ಪಾವು ಪೆರ್ಬುಲಿಗಳಂ ಪೆರರಿಟ್ಟುಪಸರ್ಗಮಂ ಮನೋ |
ಧೀರದೆಗೆಲ್ದು ನಿತ್ಯಪದನಪ್ಪನಲಾ ಅಪರಾಜಿತೇಶ್ವರಾ ‖ ೯೧ ‖

ಪ್ರಾರಂಭಾವಸ್ಥೆಯಲ್ಲಿ ಉಪಾಯವಾಗಿ ಧ್ಯಾನವನ್ನು ಕೈಗೂಡಿಸಿಕೊಳ್ಳುವ ಸಾಧಕರು ಮೇಲೆ ಹೇಳಿರುವ ಕ್ರಮವಿಡಿದು ಸಾಗಬೇಕು ಹೊರತು ನುರಿತ ಮಹಾಪಸ್ವಿ ಮಳೆ, ಗಾಳಿ, ಬಿಸಿಲು, ಸಿಡಿಲು, ಈಚಲುಹುಳು, ಹಾವು, ಹೆಬ್ಬುಲಿ ಇವಕ್ಕಾಗಲಿ ಇಲ್ಲವೆ ಅನ್ಯರೆಸಗುವ ಉಪಸರ್ಗಕ್ಕಾಗಲಿ ಹೆದರುವನೆ? ಆ ಮಹಾಸಾಹಸಿ ಮನೋದಾರ್ಢ್ಯದಿಂದ ಎಲ್ಲ ಎಡರುಗಳನ್ನೂ ನಿವಾರಿಸಿಕೊಂಡು ಮುಕುತಿಯನ್ನು ಪಡೆಯದಿರನು"—ಇಲ್ಲೆಲ್ಲ ರತ್ನಾಕರ ಶಾಸ್ತ್ರೋಕ್ತವಾದ ವಿವರಣೆಯನ್ನು ಅಚ್ಚುಕಟ್ಟಾಗಿ ಕೊಟ್ಟಿರುವನು. ಯೋಗವಿಜ್ಞಾನವನ್ನು ಕರಾರುವಾಕಾಗಿ ವಿವರಿಸಿರುವನು.

ರಂಭೆಯೆ ಬಂದು ತಾಂ ಕೊರಲನಪ್ಪಿದೊಡಂ ಪುಳಕಂಗಳಾಗದೇ |
ಕುಂಭಿ ಚಮೂರು ಬೃಂಹಿಸುತೆ ಗರ್ಜಿಸುತಂ ಬರೆ ಬಲ್ಪುಗುಂದದೇ ‖
ಜೃಂಭಿಸಿ ಕಾಳ್ಗಿಚ್ಚು ಕವಿಯುತ್ತಿರೆ ಬುದ್ಧಿಕಲಂಕದೇ ಶಿಲಾ |
ಸ್ತಂಭವೆನಲ್ಕೆಯೆನ್ನೊಳಗೆ ನಿಲ್ವೆನದೆಂದಪರಾಜಿತೇಶ್ವರಾ ‖ ೯೨ ‖

"ಸಮಾಧಿಸ್ಥನಾದ ಮಹಾಮುನಿಯನ್ನು ರಂಭೆಯೇ ಬಂದು ಅಪ್ಪಿಕೊಂಡಾಗ್ಯೂ ಕಾಮೋದ್ರೇಕವಾಗಲಾರದು. ಆನೆ ಅಬ್ಬರಿಸಿಕೊಂಡು ಬರಲಿ, ಹುಲಿ ಆರ್ಭಟಿಸಿಕೊಂಡು ಬರಲಿ ಆ ಮಹರ್ಷಿ ಎದೆಗುಂದುವುದಿಲ್ಲ. ಕಾಳ್ಗಿಚ್ಚು ದಗದಗಿಸಿ ಆವರಿಸಿಕೊಂಡರೂ ಆತನ ಮನ ಕಲಕದು. ಈ ರೀತಿ ಶಿಲಾಸ್ತಂಭದಂತೆ ನಾನು ಕೂಡ ಎಂದಿಗೆ ಸಮಾಧಿಸ್ಥನಾಗುವೆನೋ?"

ಭರತೇಶನ ಹಂಸಕಲೋಪಾಸನೆಯ ವೈಭವವನ್ನೂ ವೈಖರಿಯನ್ನೂ ರತ್ನಾಕರ ಹೃದಯಂಗಮವಾಗಿ ಭರತೇಶವೈಭವದ ಉದ್ದಗಲದಲ್ಲೂ ವಿವರಿಸಿರುವನು. ಭರತೇಶ ಸಮಾಧಿಸ್ಥನಾದಾಗ ಆತನ ಪ್ರಾಣಕಾಂತೆ ಪದ್ಮಿನಿ ಬೆದೆಯೆದ್ದು ಕಾಮಲತೆಯಂತಾಡಿದುದನ್ನು ನೋಡಿದರೆ ಆತ್ಮವಿಜ್ಞಾನದ ಮರ್ಮ ಅರಿವಾಗದಿರದು.

[1]ಹರಣವ ಸೂರೆಗೊಂಡರಸ ನೀನುರೆ ಮೊಗ | ದಿರುಹಿದರಾನು ಬಿಡುವೆನೆ ||
ತಿರುಗಿತ್ತಲೆಂದು ತನ್ನತ್ತ ತೆಗೆದಳು ನುಂ | ಗೊರಳನೆಡದ ತೋಳೊಳಪ್ಪಿ || ೪೯ ||
ತೆಗೆದಂತೆ ಮೊಗವ ಸಮ್ಮುಖಿಕೆ ಕೊಟ್ಟನು ಕಣ್ಣ | ಮುಗಿದು ಮೌನದೊಳಿರ್ದನಾಗಾ ||
ಮುಗಿದ ಕಣ್ಣಾಗಿಯು ಮೊಗದಕಾಂತಿಯ ನೋಡಿ | ನಗುತ ನಗುತ ಚುಂಬಿಸುವಳು || ೫೦ ||
ನೊಸಲೊಳು ನೊಸಲ ತಾಟಿಸುತ ಮುಂಡಾಡಿ ಚುಂ | ಬಿಸುವಳು ಕೊರಳನಪ್ಪುವಳು ||
ಸಸಿನೆ ಕಣ್ದೆರೆದೊಲ್ದು ನೋಡೆನ್ನಪ್ರಾಣದ | ಬೆಸುಗೆಕಾರಾಯೆಂಬಳೊಡನೆ || ೫೧ ||
ಉಗುರಿಕ್ಕುವಳು ನೇಮನೇಮಕವನ ಮೈಯ | ದುಗುಲವ ನೂಂಕಿ ತನ್ನೆದೆಯ ||
ದುಗುಲವ ತೆಗೆದಮರ್ದಪ್ಪಿಕೊಂಬಳು ರೋಮ | ನೆಗೆದು ಮೈಯೊಳು ತುಂಬುವಂತೆ || ೫೩ ||
ಚೀರುಚೀರೆಂದು ಚೆಂದುಟಿಗರ್ಚಿ ಸುಧೆಯನು | ಹೀರುವಳಿನಿಸು ಗುದ್ದುವಳು ||
ಮಾರನ ಮದವನಂಡಲೆವ ಚಲ್ವಿನ ಹೊಂತ | ಕಾರಿ ನೋಡೆಂದು ಮುದ್ದಿಪಳು || ೫೪ ||
ಪದ್ಮಿಯ ಪ್ರಾಣದೊಡೆಯನೆ ಕಣ್ದೆರೆ ಬೇಗ | ಪದ್ಮಿಯ ಸಿರಿಯೆ ಮಾತಾಡು ||
ಪದ್ಮಿನಿಗರ್ತಿದೋರೆಂದು ಮುದ್ದಿಸಿ ಮುಖ | ಪದ್ಮವ ತಡವಿ ನೋಡುವಳು || ೫೫ ||
ಗಿಳಿಯಂತೆ ನುಡಿವಳು ಲತೆಯಂತೆ ತಬ್ಬುವ | ಳಿಳಿದು ಹರಿವ ಹೊಳೆಯಂತೆ ||
ಗಳರವತೋರುವಳಪ್ಪಿ ತೂಗಾಡಿ ಕಂ | ಗಳ ತೆರೆಯೆಂದು ಕಾಡುವಳು || ೫೬ ||
ಆ ನೀರೆಮಾಡುವ ಕಲೆಗೆ ಮೈಮಿಸುಕದೆ | ತಾನೊಂದು ಪುತ್ತಳಿಯಂತೆ ||
ಜ್ಞಾನಾತ್ಮನೊಳಗಿದ್ದನಾ ರಾಯನೆನಲಾತ್ಮ | ಧ್ಯಾನದಶಕ್ತಿ ಸದರವೆ ? || ೫೭ ||
ಏನಸಾಧಿಸಿದನೊ ಭರತರಾಜೇಂದ್ರ ಹಂ | ಸಾನುಭವವ ಮಝು ಮಮ್ಮಾ ||
ಮೀನಾಕ್ಷಿ ಕೆಲದೊಳಗಿದ್ದು ನೆನೆದರಾತ್ಮ | ಧ್ಯಾನ ತೋರುವುದರಿದಲ್ತೆ[1] || ೫೮ ||

ಭರತೇಶನ ಅಲೌಕಿಕವಾದ ಧ್ಯಾನಾವಸ್ಥೆಯನ್ನು ರತ್ನಾಕರ ಹೃದಯಸ್ಪರ್ಶಿಯಾಗುವಂತೆ ವಿವರಿಸಿರುವನು. ಸಮಾಧಿಯ ಸುತ್ತಲೂ ಶೃಂಗಾರದ ಚೆಂಬೊನ್ನ ಹೊಳೆಯನ್ನು ಹರಸಿ ಮಹಾಕವಿ ಕೃತಕೃತ್ಯನಾಗಿರುವನು. ಐಹಿಕಸುಖ ಸಂಪದಕ್ಕೆ ವಶವರ್ತಿಯಾಗದಂದು, ಲಾವಣ್ಯವತಿಯರ ಪ್ರೇಮಪಾಶಕ್ಕೂ ಸಿಗದಂದು, ತನ್ನೊಳಗೇ ಅಡಗಿರುವ ಹಿತಶತ್ರುಗಳಾದ ಕಾಮಕ್ರೋಧ ಮಾನಮಾಯಾಲೋಭ ಭಯಾದಿ ಕಾಳರಕ್ಕಸರಿಗೆ ತಲೆಬಾಗದಂದು ಮುಕುತಿ ವನಿತೆ ಅನಂತಸಿರಿ ಸಪರಿವಾರಸಮೇತ ದಿವ್ಯಧ್ವನಿಯ ನಾದಮಾಧುರ್ಯವನ್ನು ಕರೆಯುತ್ತಾ ವೀರಕೇಸರಿಯಾದ ಮಹಾಯೋಗಿಗೆ ದರ್ಶನವೀಯುವಳು! ತನ್ನ ಕಲ್ಪನೆಯ ಕನಕಪುತ್ತಳಿಯಾದ ಭರತೇಶನ ದಿವ್ಯಪಾತ್ರ ಸದಾರತ್ನಾಕರನ ಹೃದಯಾಂತರಾಳದಲ್ಲಿ ವಿರಾಜಮಾನವಾಗಿದೆ. ಒಬ್ಬೊಬ್ಬನ ಹೃದಯದಲ್ಲೂ ಭರತೇಶವೈಭವ ಬುಗ್ಗೆಯಾಗಿ ಚಿಮ್ಮಿಬರಬೇಕೆಂದು ಈ ರಸಋಷಿ ಆಶಿಸಿರುವನು.

ಗುರುವೆ ರತ್ನಾಕರಸಿದ್ಧನ ಮನದ ಸಿಂ | ಗರವೆ ಮತ್ತವನ ಸೌಂದರವೆ ||
ಭರತೇಶನೆದೆಯೊಳಿದ್ದಂತೆನ್ನೊಳಿರು ಪಾಪ | ಹರನೆ ಚಿದಂಬರ ಪುರುಷ[2] ||

ಭರತೇಶವೈಭವಕ್ಕೆ ರತ್ನಾಕರಶತಕ ಹಾಗೂ ಅಪರಾಜಿತಶತಕಗಳು ಪೂರಕವಾಗಿವೆ. ಈ ಶತಕಗಳಿಗಾದರೋ ಭರತೇಶವೈಭವ ಪ್ರೇರಕವಾಗಿದೆ.

೧. ಈ ಚಿನ್ನೆಯ ನಡುವಣ ಪದ್ಯಗಳನ್ನು ಭ. ವೈ. ೧೫ನೇ ಸಂ.ಯಿಂದ ಆರಿಸಿದೆ.
೨. ಭ. ವೈ. ೧೧ನೇ ಸಂ. ೧೩೯.

ಒಂದೇ ಅಭಿಪ್ರಾಯವನ್ನು ವಿವಿಧ ರೀತಿಯಲ್ಲಿ ಬಣ್ಣಿಸಿ ರಸತರಂಗವನ್ನೆಬ್ಬಿಸುವುದೇ ರತ್ನಾಕರನ ವೈಶಿಷ್ಟ್ಯ. ಸಂಗ್ರಹಿಸುವುದರಲ್ಲಿ ಹೇಗೆ ಪಂಪಮಹಾಕವಿ ಪರಿಣತನೋ ಹಾಗೆ ವಿಸ್ತರಿಸುವುದರಲ್ಲಿ ರತ್ನಾಕರ ಕುಶಲ. ಅತಿ ಸಂಗ್ರಹಿಸಿದ್ದರೂ ಪಂಪನ ಕಾವ್ಯ ಸಾಮಾನ್ಯವಾಗಿ ಎಲ್ಲೂ ಕೆಟ್ಟಿಲ್ಲ. ಅಂತೆ ರತ್ನಾಕರನ ಕೃತಿಗಳಲ್ಲಿ ಅತಿವಿಸ್ತಾರ ಅತಿ ವಿವರಗಳು ಬಂದಿದ್ದರೂ ಕಾವ್ಯಸೌಂದರ್ಯಕ್ಕೆ ಬಹುಮಟ್ಟಿಗೆ ಎಲ್ಲೂ ಊನವಾಗಿಲ್ಲ. ಭರತೇಶವೈಭವದ ಅಲೌಕಿಕ ರಸ ಪ್ರವಾಹದ ನಟ್ಟನಡುವೆಯೂ ಮಜ್ಜಿಗೆಯಲ್ಲಿ ಬೆಣ್ಣೆ ತೇಲುವಂತೆ ಸಿದ್ಧಾಂತ ಕಾಣಿಸಿಕೊಳ್ಳುವುದು. ಹಾಗೇ ಈತನ ಶತಕಗಳ ಸಿದ್ಧಾಂತ ಪ್ರವಾಹದಲ್ಲೂ ಅಲ್ಲಲ್ಲೆ ಕಾವ್ಯಾಂಶದಿಂದ ಕಳೆಗೊಂಡಿರುವ ಕಲ್ಪನಾ ಕುಸುಮಗಳಿಗೆ ಕೊರತೆಯಿಲ್ಲ!

ಇರುತಿರುತಿರ್ದು ಚಿಂತಿಸಿ ಶರೀರದ ಕರ್ಮದ ರೂಪನಂತೆ ಕೊ |
ಕ್ಕರಿಸಿ ತಪೋಗ್ನಿಯಿಂ ಸುಡುವೆನೀ ಭವಬಂಧಮನೆಂದು ಧೈರ್ಯಮಂ ||
ಕುರಿಸಿ 'ಪರೀಷಹಂ'ಬರಿಸಿ ದೇಹಮನೊಡ್ಡಿ ನಿಜಾತ್ಮ ದೃಷ್ಟಿಯೊಳ್ |
ತೆರಳದೆ ನಿಂದು ಗೆಲ್ವವನೇ ಧನ್ಯನಲಾ ಅಪರಾಜಿತೇಶ್ವರಾ || ೯೩ ||

"'ಶರೀರ' ಹಾಗೂ 'ಕರ್ಮ'ದ ಸ್ವರೂಪವನ್ನು ಪದೇಪದೇ ಚಿಂತಿಸುತ್ತ ತನ್ನವಸ್ಥೆಗೆ ತಾನೇ ಹೇಸಿಕೊಂಡು, ತಪಸ್ಸಿನ ಜ್ವಾಲೆಯಲ್ಲಿ ಭವಮಾಲೆಯನ್ನು ದಹಿಸುವ ಸಂಕಲ್ಪ ಮಾಡಿ, ಗಂಡೆದೆಯಿಂದ ನಾನಾ ಸಂಕಷ್ಟಗಳನ್ನು ಆಹ್ವಾನಿಸಿ ಅವುಗಳಿಗೆ ದೇಹವನ್ನೊಡ್ಡಿ ಜಯಪ್ರದವಾಗಿ ಆತ್ಮತತ್ವದಲ್ಲಿ ತನ್ಮಯನಾಗುವಾತನೆ ನಿಜವಾಗೂ ಧನ್ಯ!"

ಒಪ್ಪಿಸಿ ದೇಹಮಂ ತಪದ ತಾಪಕೆ ತನ್ನ ನಭಸ್ವರೂಪಮಂ |
ನಪ್ಪರಿದಪ್ಪಿಕೊಂಡು ನಿಲೆ ಲೋಕದ ಕಣ್ಗಿದು ಯೋಗಿವೇಷಮೋ ||
ಲೆಪ್ಪದರೂಪೊ ಕಲ್ಲಪರಿಜೋಯೆನೆ ತೋರ್ಪಿನಮಷ್ಟಕರ್ಮಮುಂ |
ಕಪ್ಪನೆ ಕಂದಿ ಬೆಂದು ತಪನಂಬುಗವೇ ಅಪರಾಜಿತೇಶ್ವರಾ || ೯೪ ||

"ಶರೀರವನ್ನು ತಪಸ್ಸಿನ ಬೇಗೆಗೊಪ್ಪಿಸಿಬಿಡಬೇಕು; ಆಗಸದಂತಿರುವ ತನ್ನ ಸ್ವರೂಪವನ್ನು ಚಿಂತಿಸುತ್ತಾ ಆ ಚಿಂತನೆಯಲ್ಲಿ ಮುಳುಗಿಬಿಡಬೇಕು. ನೋಡಿದವರು ಇದೇನು ಯೋಗಿಯ ರೂಪವೋ, ಲೆಪ್ಪದ ಬೊಂಬೆಯೋ, ಕಲ್ಲಿನ ಮೂರ್ತಿಯೋ ಎಂದು ಭ್ರಮೆಗೊಳ್ಳುವಂತಿರಬೇಕು. ಇಂತೆಸಗಿದಾಗ ಅಷ್ಟಕರ್ಮಗಳೂ ಕರಿಕಾಗಿ ಬೆಂದು ಬೂದಿಯಾಗದಿರುತ್ತವೆಯೆ?"
—ಈ ಸಂದರ್ಭದಲ್ಲಿ ಪೂರ್ವಪುರಾಣದಲ್ಲಿ ಬರುವ ಬಾಹುಬಲಿಯ ಉಗ್ರತಪಸ್ಸಿನ ಜೀವಂತ ಚಿತ್ರವನ್ನು ನೋಡಿದರೆ ರತ್ನಾಕರನ ತಪೋಕಾಂಕ್ಷೆ ನಮಗೆ ಮನದಟ್ಟಾಗಬಹುದು.

"ಬಾಹುಬಲಿ ಒಂದು ವರ್ಷದ ವರೆಗೆ 'ಪ್ರತಿಮಾಯೋಗ'ದಲ್ಲಿ ನಿಂತನು.[1] ದೃಢವ್ರತಿಯಾಗಿ ಉಪವಾಸಿಯಾಗಿ ಒಂದು ವರ್ಷ ನಿಂತಲ್ಲೇ ನಿಂತು ಧ್ಯಾನಾಸಕ್ತನಾದಾಗ ಮೈಮೇಲೆ ಬಳ್ಳಿಗಳಡರಿ ಬಳಸಿದವು; ಸುತ್ತಲೂ ಹುತ್ತಗಳೆದ್ದವು; ಸರ್ಪಗಳು ಈ ಯೋಗಿಯ ಸುತ್ತ ಓಡಾಡಿ ಚೇಷ್ಟೆಮಾಡಿದವು! ಬಾಹುಬಲಿಯ ತಲೆಗೂದಲು ಬೆಳೆದು ಬೊಂತೆಯಾಗಿರಲು ಕೃಷ್ಣಸರ್ಪಗಳು ಜೋಲಾಡುವ ಚಂದನವೃಕ್ಷದಂತೆ ಕಂಗೊಳಿಸಿದವು. ತಪಸ್ಸಿನ ಜ್ವಾಲೆಯಿಂದ

೧. ನೆಟ್ಟ ಕಲ್ಲಂತೆ ನಿಂತು ತಪವೆಸಗುವುದಕ್ಕೆ 'ಪ್ರತಿಮಾಯೋಗ'ವೆನ್ನುವರು.

ಬಾಹುಬಲಿಯ ದೇಹ ಕೃಶವಾಗುವುದರ ಜೊತೆಗೆ ಆತನ ಕರ್ಮಗಳೂ ಕೃಶವಾದವು. ಕಠಿಣ ತಪವೆಸಗುವ ಈ ಯೋಗಿಗೆ ಯಾವ ಉಪದ್ರವವೂ ಉಂಟಾಗಲಿಲ್ಲ. ಗಾಳಿಗೆ ಅದುರದೆ ಬೇಗೆಗೆ ಅಳುಕದೆ, ಮಳೆಗೆ ನಡುಗದೆ ನೆಟ್ಟನೆ ನಿಂತಿದ್ದನು. ಬಂದ ಪರೀಷಹಗಳನ್ನೂ ತಾಳ್ಮೆಯಿಂದ ಸಹಿಸಿದನು. ತಪಸ್ಸಿನ ಪ್ರಭಾವದಿಂದ ನಿಗಿನಿಗಿ ಹೊಳೆದನು! ಒಂದೊಂದಾಗಿ ಯೋಗ ಮಹಿಮೆಗಳು ಲಭಿಸಿದವು. ಮೂರುಲೋಕವನ್ನೂ ನಡುಗಿಸುವ ಶಕ್ತಿ ಆವಿರ್ಭವಿಸಿತು.... ದೀಪದ ಕಾಡಿಗೆ ಹೊರಟುಹೋಗುವಂತೆ ಧ್ಯಾನದಿಂದ 'ಕರ್ಮರಜಸ್ಸು' ನಶಿಸಿತು. ತಪೋವನದಲ್ಲಿ ಗರುಡೋದ್ಗಾರಮಣಿಯ ಕಾಂತಿ ಹರಡಿದಂತೆ ಬಾಹುಬಲಿಯ ದೇಹಕಾಂತಿ ವ್ಯಾಪಿಸಿತು! ಪರಸ್ಪರ ಬದ್ಧದ್ವೇಷಿಗಳಾದ ಮೃಗಗಳು ಹಗೆತನವನ್ನು ಮರೆತು ಯೋಗಿಯ ಸುತ್ತ ನೆರೆದು ಅನ್ಯೋನ್ಯವಾಗಿದ್ದವು. ಆನೆಗಳು ತಾವರೆಗಳನ್ನು ತಂದು ಬಾಹುಬಲಿಯ ಪಾದಕ್ಕರ್ಪಿಸಿದವು. ಯೋಗಿಯ ಪಾದಕ್ಕರ್ಪಿಸಿದ ನೀಲೋತ್ಪಲಗಳಂತೆ ಹೆಡೆಬಿಚ್ಚಿದ ಕೃಷ್ಣಸರ್ಪಗಳು ಕಾಣಿಸಿದವು. ಖೇಚರರ ವಿಮಾನಗಳು ಈತನ ತಪಃಪ್ರಭಾವದಿಂದ ಕೀಲಿಸಿದುದರಿಂದ ಅವರು ಕೆಳಗಿಳಿದು ಈ ಮಹಾಯೋಗಿಗೆ ನಮಸ್ಕರಿಸಿ ಹೋಗುತ್ತಿದ್ದರು.''[1]

---

೧. ಸ ಶಂಸಿತ ವ್ರತೋ ನಾಶ್ವಾನ್ವನ ವಲ್ಲೀತತಾಂತಿಕಃ |
ವಲ್ಮೀಕರಂಧ್ರ ನಿಃ ಸರ್ಪತ್ಸರ್ಪೈರಾಸೀದ್ಭಯಾನಕಃ || ೧೦೭ ||
ಶ್ವಸದಾವಿರ್ಭವದ್ಭೋಗ ಭುಜಂಗಶಿಶು ಜೃಂಭಿತೈಃ |
ವಿಷಾಂಕುರ್ಯೈರಿ ವೋಪಾಂಘ್ರಿ ಸ ರೇಜೇ ವೇಷ್ಟಿತೋಭಿತಃ || ೧೦೮ ||
ದಧಾನಃ ಸ್ಕಂಧಪರ್ಯಂತಲಂಬಿನೀಃ ಕೇಶವಲ್ಲರೀಃ |
ಸೋನ್ವಗಾದೂಢ ಕೃಷ್ಣಾಹಿ ಮಂಡಲಂ ಹರಿಚಂದನಂ || ೧೦೯ ||
ತಪಸ್ತನೂನ ಪಾತ್ತಾಪಸಂತಪ್ತಸ್ಯಾಸ್ಯ ಕೇವಲಂ |
ಶರೀರಮಶುಷನ್ನೋರ್ಧ್ವ ಶೋಷಂ ಕರ್ಮಾಪ್ಯಶರ್ಮದಂ || ೧೧೩ ||
ತೀವ್ರಂ ತಪಸ್ಯತೋಪ್ಯಸ್ಯ ನಾಸೀತ್ಕಶ್ಚಿ ದುಪಪ್ಲವಃ |
ಅಚಿಂತ್ಯಂ ಮಹತಾಂ ಧೈರ್ಯಂ ಯೇನ ನಾಯಾಂತಿ ವಿಕ್ರಿಯಾಂ || ೧೧೪ ||
ಸರ್ವಂಸಹಃ ಕ್ಷಮಾಭಾರಂ ಪ್ರಶಾಂತಃ ಶೀತಲಂ ಜಲಂ |
ನಿಃಸಂಗಃ ಪವನಂ ದೀಪ್ತಃ ಸ ಜಿಗಾಯ ಹುತಾಶನಂ || ೧೧೫ ||
ಏತೇಷ್ವ ಹಾಪಯನ್ಕಿಂ ಚಿದ್ವ್ರತಶುದ್ಧಿ ಪರಾಂಶ್ರಿತಃ |
ಸೋದೀಪಿ ಕಿರಣೈರ್ಭಾಸ್ವಾನಿವ ದೀಪ್ರೈಸ್ತಪೋಂಶುಭಿಃ || ೧೩೬ ||
ಯೋಗಜಾಶ್ಚರ್ದ್ಧಯಸ್ತಸ್ಯ ಪ್ರಾದುರಾಸಂಸ್ತಪೋಬಲಾತ್ |
ಯತೋಸ್ಯಾವಿರಭೂಚ್ಛಕ್ತಿ ಸ್ತ್ರೈಲೋಕ್ಯ ಕ್ಷೋಭಣಂ ಪ್ರತಿ || ೧೪೪ ||
ದೀಪಿಕಾಯಾಮಿವಾಮುಷ್ಯಾಂ ಧ್ಯಾನದೀಪ್ತೌ ನಿರೀಕ್ಷಿತಾಃ |
ಕ್ಷಣಂ ವಿಶೀರ್ಣಾಃ ಕರ್ಮಾಂಶಾಃ ಕಜ್ಜಲಾಂಶಾ ಇವಾಭಿತಃ || ೧೬೨ ||
ತದ್ದೇಹ ದೀಪ್ತಿಪ್ರಸರೋ ದಿಙ್ಮುಖೇಷು ಪರಿಸ್ಫುರನ್ |
ತದ್ವನಂ ಗಾರುಡಗ್ರಾವ ಚ್ಛಾಯಾತತಮಿವಾತನೋತ್ || ೧೬೩ ||
ವಿರೋಧಿನೋಪ್ಯಮೀ ಮುಕ್ತ ವಿರೋಧಂ ಸ್ವೈರ ಮಾಸಿತಾಃ |
ತಸ್ಯೋ ಪಾಂಘ್ರೀಭ ಸಿಂಹಾದ್ಯಾಃ ಶಶಂಸುರ್ವೈಭವಂ ಮುನೇಃ || ೧೬೫ ||

ಆದಿಯ ವಜ್ರಕಾಯದವರ್ಗಲ್ಲದ ತಾಳ್ವುದಶಕ್ಯಮುಷ್ಣವಾ |
ತಾದಿ ಪರೀಷಹಂಗಳನದೇಂ ಬಿಸವಂದಮೊ ಈಗಳುಂ ಕೆಲರ್ ||
ಈ ದೊರೆಮೆಯ್ಯೊಳುಗ್ರತರ ಘೋರ ಮಹಾತಪಮಂ ನೆಗಳ್ಚುಗುಂ |
ಮೇದಿನಿಗೀ ಮುನೀಂದ್ರರೆ ಜಿನೇಂದ್ರರಲಾ ಅಪರಾಜಿತೇಶ್ವರಾ || ೯೫ ||

ಸೆಕೆ ಗಾಳಿ ಮುಂತಾದ ಪರೀಷಹಗಳನ್ನು ಹಿಂದಿನ ಕಾಲದಲ್ಲಿ 'ವಜ್ರವೃಷಭನಾರಾಚ ಸಂಹನನ'ದವರು (ವಿಶಿಷ್ಟವಾದ ದೃಢಕಾಯವುಳ್ಳವರು) ಮಾತ್ರ ಸಹಿಸಬಲ್ಲವರಾಗಿದ್ದರು. ಈ ಕಾಲದಲ್ಲೂ ಅನ್ನಗತಪ್ರಣವಾಗಿಯು (ಸಾಮಾನ್ಯ ದೇಹಗಳು) ಅಲ್ಲೊಬ್ಬರು ಇಲ್ಲೊಬ್ಬರು ಉಗ್ರತಪವನ್ನಾಚರಿಸುವರಲ್ಲ! ಲೋಕಕ್ಕೆ ಇಂಥ ಮಹರ್ಷಿಗಳೇ ಜಿನೇಂದ್ರರಲ್ಲವೆ?—ರತ್ನಾಕರನ ಮಾತು ಇಂದಿಗೂ ಸತ್ಯ. ಕಳೆದ ಶತಮಾನದ ಉತ್ತರಾರ್ಧದಲ್ಲಿ ಕೋಲಾರ ಜಿಲ್ಲೆಯಲ್ಲಿರುವ ಗೌರೀಬಿದನೂರು ತಾಲ್ಲೂಕಿಗೆ ಸೇರಿದ ಮುದುಗೆರೆಯಲ್ಲಿ ಒಬ್ಬ ಜೈನ ಸದ್ಗೃಹಸ್ಥರಿದ್ದರು. ಒಮ್ಮೆ ಊರಿಗೆ ಪ್ಲೇಗು ಜಾಡ್ಯ ಬಂದು ಊರನ್ನೇ ಗುಡಿಸಿಹಾಕಿತು! ದಿನದಿನವೂ ಸಾಯುತ್ತಿದ್ದ ಶ್ರಾವಕರನ್ನು ಈ ಸದ್ಗೃಹಸ್ಥ ಮಸಣವನ್ನು ಮುಟ್ಟಿಸುವಾಗ, ಶವಗಳಿಗೆ ಬೆಂಕಿಯಿಡುವಾಗ ವೈರಾಗ್ಯ ತಾನಾಗೆ ಅಂಕುರಾರ್ಪಣವಾಯಿತು. ಒಂದು ದಿನ ಅನೇಕ ಶವಗಳನ್ನು ಶ್ಮಶಾನಕ್ಕೆ ಸಾಗಿಸಿ ಹಿಂದಿರುಗಿ ಬಂದಾಗ ಇವರ ಹೆಂಡತಿ "ಮನೆಯ ಮಕ್ಕಳಿಗೂ ರೋಗವನ್ನು ತಂದೊಡ್ಡುತ್ತಿರುವಿರಿ! ಹೊರಗೇ ನಿಂತು ನೀವೇನಾದರೂ ಮಾಡಿಕೊಳ್ಳಿ" ಎಂದು ಕಟ್ಟುವಾಗಿ ಆಕ್ಷೇಪಿಸಿದಳು. ಆ ಕ್ಷಣವೇ ಇವರು ಮನೆಯನ್ನು ತೊರೆದು ಯತಿದೀಕ್ಷೆಯಾಂತು ಚಂದ್ರಕೀರ್ತಿಗಳಾದರು! ಆದಿದೇವನಂತೆ ಇವರೂ ಕೈಯಾರೆ ತಲೆಗೂದಲನ್ನು ಕಿತ್ತೊಗೆದು ದಿಗಂಬರಮುನಿಯಾಗಿ ಗುಡಿಬಂಡೆ[1] ಜಿನಾಲಯದಲ್ಲಿ ಉಗ್ರತಪವೆಸಗಿದರು. ಇವರ ಪೀಳಿಗೆಯವರು ಈಗಲೂ ನಮ್ಮೂರಿನಲ್ಲಿದ್ದಾರೆ.[2]

ಅಷ್ಟೇಕೆ ಮೊನ್ನೆಮೊನ್ನೆ ಕುಂಥಲಗಿರಿಯಲ್ಲಿ ೮೩ವರ್ಷದ ಮುದುಕರಾದ ಶಾಂತಿಸಾಗರರು ಯಮಸಲ್ಲೇಖನವ್ರತವನ್ನು ಸ್ವೀಕರಿಸಿ ದೇಹತ್ಯಾಗ ಮಾಡಲಿಲ್ಲವೆ[3]? ಶ್ರೀ ಚಂದ್ರಕೀರ್ತಿಗಳೊ, ಶ್ರೀ ಶಾಂತಿಸಾಗರರೂ ಅಚ್ಚಕನ್ನಡಿಗರು. ತಪಸ್ಸಿನಲ್ಲಾಗಲಿ, ನಿಷ್ಠೆಯಲ್ಲಾಗಲಿ ಹಿಂದಿನ ಯಾವ ಮುನಿಗೂ ಈ ಕನ್ನಡಮುನಿಗಳು ಕಡಮೆಯೇನಲ್ಲ!

ಪುಷ್ಕರೈಃ ಪುಷ್ಕರೋದಸ್ತೈರ್ನ್ಯ ಸ್ತೈರಧಿಪದ ದ್ವಯಂ |
ಸ್ತಂಬೇರಮಾ ಮುನಿಂ ಭೇಜುರಹೋ ಶಮಕರಂ ತಪಃ || ೧೭೦ ||
ಉಪಾಂಘ್ರಿ ಭೋಗಿನಾಂ ಭೋಗೈರ್ವಿನೀಲೈರ್ವ್ಯರುಚನ್ಮುನಿಃ |
ವಿನ್ಯಸ್ತೈರರ್ಚನಾಯೇವ ನೀಲೈರುತ್ಪಲ ದಾಮಕೈಃ || ೧೭೧ ||
—ಜಿನಸೇನರ ಪೂ. ಪು., ಪರ್ವ. ೩೬, ಸಂ. ಶ್ರೀ ಎ. ಶಾಂತಿರಾಜಶಾಸ್ತ್ರಿಗಳು.

೧. ಗುಡಿಬಂಡೆ ಕೋಲಾರ ಜಿಲ್ಲೆಯಲ್ಲಿದೆ. ತಾಲ್ಲೋಕಿನ ಮುಖ್ಯ ಸ್ಥಳವಾಗಿದೆ.

೨. ಅ ರಸಾಪುರ, ಕೊರಟಗೆರೆ ತಾಲ್ಲೋಕು.

೧. ಸೋಲಾಪುರದ ಬಳಿ ಕುಂಥಲಗಿರಿಯಲ್ಲಿ ೧೯೫೫ನೇ ಸೆಪ್ಟಂಬರ್ ತಿಂಗಳಲ್ಲಿ ಶಾಂತಿಸಾಗರರು ಪರಂಧಾಮವನ್ನೈದಿದರು.

ನರಕದೊಳಟ್ಟಿ ಮೆಟ್ಟಿ ಕಡು ಕಾಸುವ ಕೀಸುವ ಸರ್ವಬಾಧೆಯಂ |
ಸ್ಮರಿಸಿದೊಡೊತ್ತಿ ಹೇರಿ ಪಶುವಂ ಮೃಗವಾದೊಡೆ ಯೆಚ್ಚುಕೊಚ್ಚಿ ಗೋ ||
ಣರಿವುದನಬ್ಬೆಯುಬ್ಬರದ ಗಬ್ಬದೊಳುಬ್ಬಸದಿಂ ಬಳಲ್ದ ತ |
ನ್ನಿರವನೆ ಚಿಂತಿಪಂಗೆ ತಪದೊಳ್ಪಿರಿಸೇಕಪರಾಜಿತೇಶ್ವರಾ || ೯೬ ||

ಭವಮಾಲೆಯ ತೊಡಕನ್ನು ಮಾನವ ಜನುಮದಲ್ಲಿ ಬಿಡಿಸಿಕೊಳ್ಳದೇ ಹೋದರೆ ದಿನ ದಿನಕ್ಕೂ ತೊಡಕು ಹೆಚ್ಚುತ್ತಾ ಹೋಗುವುದು. **'ಚತುರ್ಗತಿ'**ಗಳಲ್ಲಿ ಅಂಡಲೆಯಬೇಕಾಗುವುದು. ನರಕದ ಪಾಡಂತು ನಾಯಿಗೂ ಬೇಡ ! ಆ ವಿಚಿತ್ರ ಹಿಂಸಾಪ್ರಪಂಚವನ್ನು ತಿಳಿದೂ ತಿಳಿದೂ ಎಚ್ಚರತಪ್ಪಿದ ತಿಳಿಗೇಡಿಗಳಿಗಾಗಿ ರತ್ನಾಕರ ರಚ್ಚೆಗೆದ್ದಿರುವನು! "ನರಕದಲ್ಲಿ ಅಟ್ಟಿಸಿಕೊಂಡು ಬಂದು ಮೆಟ್ಟುವರು! ಬೆಂಕಿಯಲ್ಲಿ ಜೀವಿಯನ್ನು ಸುಡುವರು, ಚರ್ಮ ಸುಲಿದು ನಜ್ಜೀಬಿಜ್ಜಿ ಮಾಡುವರು! ಮೂಕ ಜಂತುವಾಗಿ ಪಶುವಾದರೆ ಭಾರವನ್ನು ಹೇರಿ ಗೋಳಾಡಿಸುವರು; ಮೃಗವಾದರೆ ಬಾಣದಿಂದ ಕೊಂದು ಕುತ್ತಿಗೆ ಕೊಯ್ದು ಚೂರಾಗುವಂತೆ ಕೊಚ್ಚುವರು! ಗರ್ಭದಲ್ಲಿ ಮೊಳೆವಾಗ ಉಬ್ಬಸಗೊಂಡು ಜೀವಿ ತಳಮಳಗೊಳ್ಳದಿರದು. ಭವಭವದ ಈ ನರಳಾಟವನ್ನು ತಿಳಿದ ಮೇಲೂ ತಪಸ್ಸಿನಲ್ಲಿ ಬಿಗುಮಾನವೇಕೆ?"—ಮುಂದಿನ ಸುಖಕ್ಕಾಗಿ ಸಾಧಕ ಇಂದು ತನ್ನ ಹೃದಯವನ್ನು ತತ್ತ್ವಚಿಂತನೆಯಿಂದ ಹದಗೊಳಿಸಿ ಸತ್ಪರಿಣಾಮವನ್ನು ಬಿತ್ತಿ ಧ್ಯಾನಜಲದಿಂದ ಪೋಷಿಸಬೇಕಾಗುವುದು. ಮಾನವರಾದಂದು ಆತ್ಮೋನ್ನತಿಗಾಗಿ ದುಡಿಯದವರು ಭವಭ್ರಮಣರಾಗಿ ಬಾಯ್‌ಬಾಯ್ ಬಿಡಬೇಕಾಗುವುದು. **'ಸಂಸಾರಾನುಪ್ರೇಕ್ಷೆ'**ಯನ್ನು ಮತ್ತೆ ಮತ್ತೆ ರತ್ನಾಕರ ಸಾಧಕರ ನೆನಪಿಗೆ ತರುತ್ತಿರುವನು.

ಸ್ವಾಮಿಕುಮಾರನಾ ಗಜಕುಮಾರನಾ ಸುಕುಮಾರನಾತ್ಮ ಚಿಂ |
ತಾಮಯ ಸಂಜಯಂತ ಗುರುದತ್ತ ಚಿಲಾತಜ ಧರ್ಮಪುತ್ರರಾ ||
ಸ್ವಾಮಿಸುವರ್ಣಭದ್ರ ಶಿವಭೂತಿ ಸುದರ್ಶನ ಪಾರ್ಶ್ವನಾಥರಾ ||
ನೇಮವಿದೆಂದು ನಿಂದೊಡೆದಯೊಳ್ಭಯವೇ ಅಪರಾಜಿತೇಶ್ವರಾ || ೯೭ ||

"ಹಿಂದೆ ಸಾಧಕರಾಗಿದ್ದು ಸಿದ್ಧಿಹೊಂದಿದ (೧) ಕುಮಾರಸ್ವಾಮಿ, (೨) ಗಜಕುಮಾರ, (೩) ಸುಕುಮಾರ, ಆತ್ಮಚಿಂತನೆಯಲ್ಲಿ ತನ್ಮಯನಾಗಿದ್ದ (೪) ಸಂಜಯಂತ, (೫) ಗುರುದತ್ತ, (೬) ಚಿಲಾತಪುತ್ರ, (೭) ಧರ್ಮರಾಯ, (೮) ಸುವರ್ಣಭದ್ರಸ್ವಾಮಿ, (೯) ಶಿವಭೂತಿ, (೧೦) ಸುದರ್ಶನ, (೧೧) ಪಾರ್ಶ್ವನಾಥ, ಈ ಮಹಾಮಹಿಮರನ್ನು ನೆನೆದು ತಪವೆಸಗಿದಾಗ ಭಯವೆಂದರೇನು?"—ಪೌರಾಣಿಕ ಪುಣ್ಯಪುರುಷರು ದೈಹಿಕವಾಗಿ ಕಣ್ಮರೆಯಾದರೂ ಅವರ ತಪೋಶಕ್ತಿ ಮಾತ್ರ ಜೀವನದಿಯಾಗಿ ಪ್ರವಹಿಸುತ್ತಿದೆ. ನೆನೆದವರ ಹೃದಯಾಂತರಾಳಕ್ಕೆ ಆ ಮಹಾಸಾಧಕರ ದಿವ್ಯಶಕ್ತಿ ಧುಳಧುಳನಿಳಿದು ಬಂದು ಸಾಧಕನ ಭಯಭೀತಿಗಳನ್ನು ಹೊಡೆದೋಡಿಸಿ ನವಚೈತನ್ಯವನ್ನಿತ್ತು ಮುನ್ನಡೆಸದಿರದು! ಆನೆ ಇದ್ದರೂ ಸಾವಿರ, ಸತ್ತರೂ ಸಾವಿರ ಎಂಬಂತೆ ದಿವ್ಯಪುರುಷರು ಬದುಕಿದ್ದಾಗಲೂ ಲೋಕಕಲ್ಯಾಣವೆಸಗಿ ಸತ್ತ ಮೇಲೂ ತಮ್ಮ ಕಾಯಕವನ್ನು ಬಿಡದೆ ಮುಂದುವರಿಸುವರು. ಏಸುಕ್ರಿಸ್ತ ಇದ್ದಾಗ ಸಾಧಿಸಿದುದಕ್ಕಿಂತ ಹೆಚ್ಚಾಗಿ ಸತ್ತ ಮೇಲೆ ಸಾಧಿಸಿದನು; ಭೂಗೋಳದ ಬಹುಭಾಗವನ್ನು ಧಾರ್ಮಿಕವಾಗಿ ಆಕ್ರಮಿಸಿದನು.

ಅಷ್ಟೇಕೆ ಅಂಥ ಮಹಾಪುರುಷರ ನಾಮಸ್ಮರಣೆಯೇ ಸಾಕು ಸಾಧಕನ ದಿವ್ಯಚೇತನ ಉದ್ದೀಪನಗೊಳ್ಳಲು!

(೧) ಕುಮಾರಸ್ವಾಮಿ:—ಕಾರ್ತಿಕಪುರದ ರಾಜ ಅಗ್ನಿದತ್ತನಿಗೂ, ರಾಣಿ ವೀರಮತಿಗೂ ಕೃತಿಕಾ ಎಂಬಾಕೆ ಪುತ್ರಿಯಾಗಿ ಜನಿಸಿ ಹರಯಕ್ಕೆ ಬಂದಾಗ ಆಕೆಯ ತಂದೆಯೇ ಮರುಳಾಗಿ ಮೋಹಿಸಿ ಆಕೆಯೊಡನೆ ಕೂಡಿ ಸಂಸಾರವೆಸಗುವನು; ಈ ವಿಚಿತ್ರ ಸಂಸಾರದಲ್ಲಿ ಸ್ವಾಮಿಕುಮಾರನ ಜನನವಾಯಿತು; ಈತನಿಗೆ ಕಾರ್ತಿಕೇಯನೆಂಬ ಇನ್ನೊಂದು ಹೆಸರೂ ಇತ್ತು. ಕಾರ್ತಿಕೇಯ ಯೌವ್ವನಕ್ಕೆ ಬಂದಾಗ ತನ್ನ ತಾಯಿಯ ಅಕ್ರಮ ಪ್ರಣಯ ಅರಿವಾಗಿ ಸಂಸಾರದಲ್ಲಿ ಜುಗುಪ್ಸೆಯುಂಟಾಗಿ ದಿಗಂಬರ ಮುನಿಯಾದನು. ಈತನ ತಂಗಿ ಮದುವೆಯಾಗಿ ಗಂಡನ ಮನೆಗೆ ಹೋದಳು. ಇತ್ತ ಕೃತ್ತಿಕೆ ಮಗನ ಅಗಲಿಕೆಯನ್ನು ಸಹಿಸದೆ **'ಆರ್ತಧ್ಯಾನ'**ದಲ್ಲಿ ಸತ್ತು **'ವ್ಯಂತರ ದೇವತೆ'**ಯಾದಳು. ಒಮ್ಮೆ ಕಾರ್ತಿಕೇಯ ಮುನಿ ಸಂಚರಿಸುತ್ತ ತನ್ನ ತಂಗಿಯಿದ್ದ ಊರಿಗೆ ಬರುವನು; ಈ ಮುನಿಯನ್ನು ಈತನ ತಂಗಿ ತುಂಬ ಭಕ್ತಿಯಿಂದ ಉಪಚರಿಸುವಳು. ಇದನ್ನು ಕಂಡು ಈಕೆಯ ಪತಿ ಮುಳಿದು ದಿಗಂಬರ ಯತಿಯನ್ನು ಮೂರ್ಛೆ ಬರುವ ತನಕ ಚೆನ್ನಾಗಿ ಹೊಡೆದು ಹಿಂಸಿಸುವನು; ಕೊನೆಗೆ ಈತನ ತಾಯಿ (ವ್ಯಂತರದೇವತೆ) ಅವಧಿಯಿಂದ ಈ ಉಪಸರ್ಗವನ್ನರಿತು ಅಲ್ಲಿಗೆ ಬಂದು ಮಗನನ್ನು ಉಪಚರಿಸುವಳು. ಆದರೂ ಕಾರ್ತಿಕೇಯ ಉಳಿಯಲಿಲ್ಲ; ಸಮಾಧಿಮರಣದಿಂದ ಇವನು ದೇಹತ್ಯಾಗ ಮಾಡಿದ ಸ್ಥಳ ಕಾರ್ತಿಕೇಯ ತೀರ್ಥವೆಂದು ಪ್ರಖ್ಯಾತವಾಯಿತು. [ಉದಯಲಾಲ್ ಕಾಶಲೀವಾಲ್, ಆರಾಧನಾ ಕಥಾಕೋಶ, ೬೬ನೇ ಕಥೆ, ಸಂಗ್ರಹಿಸಿರುವೆನು.]

(೨) ಗಜಕುಮಾರ:—ಅರ್ಧಚಕ್ರಿಯಾದ ವಿಷ್ಣು ತನ್ನ ಹಗೆಯಾದ ಪೌದನದರಸು ಅಪರಾಜಿತನನ್ನು ಹಿಡಿದು ತಂದವರಿಗೆ ಕೇಳಿದುದನ್ನು ಕೊಡುವುದಾಗಿ ಡಂಗುರ ಹಾಕಿಸಿದ್ದನ್ನು ಕೇಳಿ ವಿಷ್ಣುವಿನ ತಮ್ಮ ಗಜಕುಮಾರ ಸಾಹಸದಿಂದ ಅಪರಾಜಿತನನ್ನು ಎಳೆದು ತಂದು ಅಣ್ಣನಿಗೊಪ್ಪಿಸಿದನು; ರಾಜಧಾನಿಯ ಅಂತಃಪುರವೊಂದನ್ನುಳಿದು ಮಿಕ್ಕ ಸ್ತ್ರೀಯರಲ್ಲಿ ತನಗೆ ಬೇಕಾದವರೊಡನೆ ಕ್ರೀಡಿಸಲು ಗಜಕುಮಾರ ತನ್ನಣ್ಣನ ಅನುಮತಿ ಪಡೆದು ಊರಿನಲ್ಲಿ ಕಣ್ಣಿಗೆ ಕಂಡವರನ್ನೆಲ್ಲ ಕೆಡಿಸಿದನು. ಒಮ್ಮೆ ಪಂಗುಲನೆಂಬಾತನ ಮಡದಿಯ ಮಾನಭಂಗವೆಸಗಿದನು; ಆಗ ಪಂಗುಲ ಮರುಗಿದುದು ಅಷ್ಟಿಷ್ಟಲ್ಲ; ಯುವರಾಜನನ್ನು ಏನೂ ಮಾಡಲಾಗದೆ ಒಳಗೊಳಗೇ ಕುದಿದನು. ಹೀಗಿರುವಾಗ ಒಂದುದಿನ ಅರಿಷ್ಟನೇಮಿಗಳ 'ಸಮವಸರಣ' ದ್ವಾರಕೆಗೆ ಬಂದುದನ್ನು ಕೇಳಿ ಗಜಕುಮಾರನೂ ತೀರ್ಥಂಕರವಾಣಿಗೆ ಕಿವಿಯಿತ್ತು ವೈರಾಗ್ಯಹೊಂದಿ ಹಿಂದೆ ತನ್ನಿಂದಾದ ಮನೆ ಮುರುಕತನಕ್ಕೆ ಪಶ್ಚಾತ್ತಾಪಗೊಂಡು ಕೊನೆಗೆ ಯತಿದೀಕ್ಷೆಯಾಂತು ತಪವೆಸಗುತ್ತ ಸಂಚರಿಸಿದನು. ಒಮ್ಮೆ ಗಜಕುಮಾರಮುನಿ ದ್ವಾರಕೆಗೆ ಬರುವನು. ಇದನ್ನು ತಿಳಿದು ಪಂಗುಲನು ಸೇಡಿನ ಕಿಡಿಗಾರುತ್ತ ಕೆಂಪಗೆ ಕಾಸಿದ ಸಲಾಕೆಯಿಂದ ಮುನಿಯ ದೇಹದ ತುಂಬ ಬರೆಯೆಳೆದನು. ಆಗ ಧ್ಯಾನಾರೂಢನಾಗಿದ್ದ ಮುನಿ ಕ್ಷಮಾಶೀಲನಾಗಿ ಸಮಾಧಿ ಮರಣವನ್ನು ಪಡೆದು ಅಹಮಿಂದ್ರನಾದನು! [ಬಿ.ಶಂಕರಭಟ್ಟರು, ವಡ್ಡಾರಾಧನೆಯ ಕಥೆಗಳು, ಪು. ೩೪,—ಇದರಿಂದ ಸಂಗ್ರಹಿಸಿರುವೆನು.]

(೩) ಸುಕುಮಾರ :—ಕಾಶ್ಯಪಿ ಎಂಬಾಕೆ ವಿಧವೆಯಾದ ಮೇಲೆ ತನ್ನ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿ ಎಂಬವರನ್ನು ತನ್ನ ಸೋದರನಾದ ಸೂರ್ಯಮಿತ್ರನ ಬಳಿ ವ್ಯಾಸಂಗಕ್ಕಾಗಿ ಕಳಿಸಿದಳು. ತಾನು ಮಾವನೆಂದು ಅವರಿಗೆ ಗೊತ್ತಾದರೆ ಸಲುಗೆ ಹೆಚ್ಚಿ ವ್ಯಾಸಂಗ ಕುಂಠಿತವಾಗ ಬಹುದೆಂದು ಯೋಚಿಸಿ ಸೂರ್ಯಮಿತ್ರ ಬಂದ ಅಳಿಯಂದಿರಿದಿರು ತನಗೂ ಅವರ ತಾಯಿಗೂ ಯಾವ ಸೋದರ ಸಂಬಂಧವಿಲ್ಲವೆಂದೂ ಆದರೂ ಕಲಿಯಲು ಬರುವಂಥವರಿಗೆ ತಾನು ಬೇಡವೆನ್ನಲಾರೆನೆಂದೂ ಹೇಳಿ ಅವರಿಗೆ ಸಕಲವಿದ್ಯೆಗಳನ್ನೂ ಕಲಿಸಿ ಬೀಳ್ಕೊಡುವಾಗ ನಿಜ ಸಂಗತಿಯನ್ನು ತಿಳಿಸಿದನು. ಮಾವನ ಜಾಣ್ಮೆಗೆ ಅಗ್ನಿಭೂತಿ ಸಂತಸಗೊಂಡರೆ ವಾಯುಭೂತಿ ಅಪಾರ್ಥವನ್ನು ಕಲ್ಪಿಸಿ ಒಳಗೊಳಗೇ ಕುದಿದನು. ಬಹುಕಾಲ ಕಳೆದ ಮೇಲೆ ಸೂರ್ಯಮಿತ್ರ ದಿಗಂಬರ ಯತಿಯಾಗಿ ತನ್ನಳಿಯಂದಿರನ್ನು ನೋಡಿಕೊಂಡುಹೋಗಲು ಬಂದಾಗ ವಾಯು ಭೂತಿ ಆತನನ್ನು ಅಪಮಾನಗೊಳಿಸಿದನು. ಅಗ್ನಿಭೂತಿ ಸತ್ಕರಿಸಿ ತಾನೂ ಯತಿದೀಕ್ಷೆ ಯಾಂತನು. ಇತ್ತ ವಾಯುಭೂತಿ ಕುಷ್ಠರೋಗಕ್ಕೆ ತುತ್ತಾಗಿ ಸತ್ತು ಒಬ್ಬ ಮಾದಿಗನ ಮನೆಯಲ್ಲಿ ಹುಟ್ಟುಕುರುಡಿಯಾಗಿ ಜನಿಸಿ ಪಡಬಾರದ ಪಾಡನ್ನು ಪಟ್ಟನು. ಇತ್ತ ಅಗ್ನಿಭೂತಿ ಒಮ್ಮೆ ಅನಾಮಿಕೆಯನ್ನು ನೋಡಿ ಮನಕರಗಿ ಪಂಚಾಣುವ್ರತಗಳನ್ನು ಬೋಧಿಸಿದನು. ಮರುಭವದಲ್ಲಿ ಅನಾಮಿಕೆ ಸದ್ವಂಶಸಂಭೂತಳಾಗಿ ನಾಗಶ್ರೀಯಾದಳು. ಈ ಭವದಲ್ಲೂ ಈಕೆಗೆ ಪಂಚಾಣು ವ್ರತಗಳನ್ನು ಅಗ್ನಿಭೂತಿ ಮತ್ತು ಸೂರ್ಯಮಿತ್ರರು ಬೋಧಿಸಿದರು. ಅನಂತರ ಇವಳೂ ತಪವೆಸಗಿ ಸಮಾಧಿಮರಣವನ್ನು ಪಡೆದು ಸುಕುಮಾರಸ್ವಾಮಿಯಾಗಿ ಆಗರ್ಭ ಶ್ರೀಮಂತರ ಹೊಟ್ಟೆಯಲ್ಲಿ ಜನಿಸಿ ಹೆಸರಿಗೆ ತಕ್ಕಂತೆ ಭೋಗದಲ್ಲಿ ತನ್ಮಯನಾಗಿರುತ್ತಾ ಒಂದುದಿನ ದಯಾಭದ್ರ ಮುನಿಗಳು ತ್ರಿಲೋಕ ಪ್ರಜ್ಞಪ್ತಿಯನ್ನು ಉಚ್ಚಕಂಠದಲ್ಲಿ ಪಾರಾಯಣ ಮಾಡು ವುದನ್ನು ಕೇಳಿಸಿಕೊಂಡು ಸುಕುಮಾರನಿಗೆ ಭವಾಂತರ ಸ್ಮರಣೆಯಾಗಿ ತಾನೂ ಸನ್ಯಾಸವನ್ನು ಸ್ವೀಕರಿಸಿ ತಪಸ್ಸಿಗೆ ನಿಂತನು. ಆಗ ಇವನ ಜನ್ಮಾಂತರ ಶತ್ರುವಾದ ಒಂದು ಹೆಣ್ಣು ನರಿ (ಹಿಂದೆ ಅಗ್ನಿಭೂತಿಯ ಹೆಂಡತಿಯಾದ ಸೋಮದತ್ತೆ) ಬಂದು ಈತನ ಕೈಕಾಲುಗಳನ್ನು ಕಡಿದು ದಿನವೂ ಸ್ವಲ್ಪಸ್ವಲ್ಪ ದೇಹವನ್ನು ತಿನ್ನುತ್ತಾ ಹೋಯಿತು. ಮೂರು ದಿನದ ತನಕ ಈ ಉಪಸರ್ಗವನ್ನು ಶಾಂತಚಿತ್ತನಾಗಿ ಸಹಿಸಿ ಸುಕುಮಾರಸ್ವಾಮಿ ಶುಕ್ಲ ಧ್ಯಾನವನ್ನೆಸಗುತ್ತ ಸತ್ತು ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾದನು. [ವ. ಕ., ಪು. ೧ ಅಥವಾ ಶಾಂತಿನಾಥನ ಸು. ಮಾ. ಚ. ನೋಡುವುದು.]

(೫) ಗುರುದತ್ತ:—ಸಾವಸ್ತಿನಗರದ ಮಹಾರಾಜ ಉಪರಿಚರ ತನ್ನ ಮಡದಿಯರೊಡನೆ ಜಲಕ್ರೀಡೆಯಾಡುತ್ತಿರುವಾಗ ವಜ್ರದಾಡನೆಂಬ ವಿದ್ಯಾಧರ, ಜಲಾಶಯದ ಮೇಲೆ ಹಾಸುಗಲ್ಲು ಮುಚ್ಚಿ ಪ್ರಣಯಿಗಳನ್ನೆಲ್ಲ ಕೊಂದುಹಾಕಿದನು. ಮರುಭವದಲ್ಲಿ ಉಪರಿಚರ ಹೆಬ್ಬಾವಾಗಿ ಹುಟ್ಟಿ ಸಾರಸ್ವತಾಚಾರ್ಯರ ಬೋಧನೆಗೆ ಕಿವಿಯಿತ್ತು ಉಪವಾಸವನ್ನಾಚರಿಸಿ ನಾಗೇಂದ್ರನಾಗಿ ಜನಿಸಿದನು. ಭವಾಂತರ ದ್ವೇಷ ಮರುಕಳಿಸಿ ನಾಗೇಂದ್ರ, ವಜ್ರದಾಡನನ್ನು ಕೊಂದುಹಾಕಿದನು. ವಜ್ರದಾಡ ಕೊನೆಗೆ ಹುಲಿಯಾಗಿ ಹುಟ್ಟಿದನು. ಇತ್ತ ನಾಗೇಂದ್ರ ಹಸ್ತಿನಾಪುರದ ರಾಜನ ಮಗನಾಗಿ ಗುರುದತ್ತನಾದನು; ಕಳೆದ ಭವದ ಸೇಡು ಹೆಡೆಯೆತ್ತಿದಾಗ ಗುರುದತ್ತ ಹುಲಿಯನ್ನು

ಕೊಂದನು. ಅತ್ತ ಹುಲಿ ಹಲಿಮುಖನೆಂಬ ಹಾರವನಾಗಿ ಜನಿಸಿತು. ಅಮೃತಾಸ್ರವಮುನಿಯ ಉಪದೇಶಕ್ಕೆ ಕಿವಿಯಿತ್ತು ಗುರುದತ್ತ ಸನ್ಯಾಸಿಯಾದನು. ಒಂದುದಿನ ಸಮಾಧಿಯಲ್ಲಿದ್ದ ಗುರುದತ್ತ ಮುನಿಯನ್ನು ಕಂಡು ಹಲಿಮುಖ ಪ್ರತೀಕಾರಬುದ್ಧಿಯಿಂದ ಸುತ್ತಲೂ ಬೆಂಕಿ ಯೊಡ್ಡಿದನು. ಮುನಿಯ ತಪೋಮಹಿಮೆಯಿಂದ ಜ್ವಾಲೆ ನಂದಿಹೋಯಿತು. ಈ ಪವಾಡ ವನ್ನು ಕಂಡು ಅಚ್ಚರಿಗೊಂಡ ಹಲಧರ ಕೊನೆಗೆ ಗುರುದತ್ತಮುನಿಯ ಕೈಯಾರೆ ದೀಕ್ಷೆ ಪಡೆದನು. [ವ. ಕ., ಪು. ೯೦.]

(೬) ಚಿಲಾತಪುತ್ರ:—ರಾಜಗೃಹದ ಅರಸು ಉಪಶ್ರೇಣಿಕ, ಬೇಡರೊಡೆಯನ ಪುತ್ರಿಯಾದ ಚಿಲಾತೆಯನ್ನು ಮೋಹಿಸಿ ಮದುವೆಯಾದನು. ಆ ನಾಡಿನ ನಂದಿಮಿತ್ರ ಸೆಟ್ಟಿ ಒಮ್ಮೆ ಜಿನ ಮುನಿಗೆ ಎಳ್ಳುಂಡೆಯನ್ನು ಆಹಾರದಾನವಾಗಿತ್ತು ಭೋಗಭೂಮಿಜನಾಗಿ ಆಮೇಲೆ ವ್ಯಂತರ ನಾಗಿ ಮರುಭವದಲ್ಲಿ ಚಿಲಾತಾಪುತ್ರನಾದನು. ಉಪಶ್ರೇಣಿಕನ ಕಡುವಗೆಯಾದ ಪ್ರದ್ಯೋತ ನನ್ನು ಚಿಲಾತಾಪುತ್ರ ಸೆರೆಹಿಡಿದು ತಂದು ತನ್ನ ತಂದೆಗೊಪ್ಪಿಸಿ ಆತನ ಮೆಚ್ಚಿಗೆಗೆ ಪಾತ್ರನಾದನು; ಅಂದಿನಿಂದ ಕಾಮೋನ್ಮತ್ತನಾಗಿ ಈತನು ಊರಿನ ಕನ್ನೆಯರನ್ನೆಲ್ಲ ಕಂಡಕಂಡ ಕಡೆ ಮಾನ ಭಂಗವೆಸಗುತ್ತಾ ಉಪಟಳವೆಸಗಿದನು. ಉಪಶ್ರೇಣಿಕ ಈತನನ್ನು ತನ್ನ ನಾಡಿನಿಂದ ಹೊರಗಟ್ಟಿ ಇನ್ನೊಬ್ಬ ಮಗನಾದ ಶ್ರೇಣಿಕನಿಗೆ ಪಟ್ಟಗಟ್ಟಿದನು. ಇತ್ತ ಚಿಲಾತಪುತ್ರ ಒಮ್ಮೆ ಸುಭದ್ರೆ ಯೆಂಬಾಕೆಯನ್ನು ಅಪಹರಿಸುವಾಗ ರಾಜಭಟರು ಅಟ್ಟಿಸಿಕೊಂಡು ಬರಲು ಆಕೆಯನ್ನು ತುಂಡುತುಂಡು ಮಾಡಿ ಪಲಾಯನವೆಸಗಿ ಕೊನೆಗೆ ಪಶ್ಚಾತ್ತಾಪಗೊಂಡು ಜಿನಮುನಿಯಾದನು. ಇತ್ತ ಸುಭದ್ರೆ ಸತ್ತು ವ್ಯಂತರದೇವತೆಯಾದಳು. ಕಳೆದ ಭವದ ಪ್ರತೀಕಾರದಿಂದ ವ್ಯಂತರ ದೇವತೆ, ಚಿಲಾತಾಪುತ್ರಮುನಿಯ ಕಣ್ಣುಗಳನ್ನುಕಿತ್ತಳು; ಗಾಯಕ್ಕೆ ಇರುವೆ ಮುತ್ತಿದವು; ಇಷ್ಟಾದರೂ ಮಹಾಮುನಿ ಕಂಗೆಡದೆ ಶುಭಪರಿಣಾಮದಲ್ಲಿ ಸತ್ತು ಅಹಮಿಂದ್ರನಾದನು! [ವ. ಕ., ಪು. ೧೦೨]

(೭) ಧರ್ಮರಾಯ:—ದ್ವಾರಾವತಿ ಅಗ್ನಿಗಾಹುತಿಯಾದುದನ್ನು ಕೇಳಿ ಪಾಂಡವರು ವ್ಯಾಕುಲರಾಗಿ ಅಭಿಮನ್ಯುವಿನ ಪುತ್ರನಾದ ಪರೀಕ್ಷಿತನಿಗೆ ಪಟ್ಟಗಟ್ಟಿ ತಾವು ನೇಮಿತೀರ್ಥಂಕರರ ಸಮವಸರಣಕ್ಕೆ ಬಂದು ತಮ್ಮ ಭವಾವಳಿಯನ್ನು ಬೆಸಗೊಂಡರು. 'ಮೇಘರಾಜನ ಮಂತ್ರಿ ಸೋಮನಿಗೆ ಸೋಮದತ್ತ, ಸೋಮಿಲ, ಸೋಮಭೂತಿ ಎಂದು ಮೂವರು ಮಕ್ಕಳಿದ್ದರು. ತಂದೆಯ ನಂತರ ಇವರೇ ಮಂತ್ರಿಗಳಾದರು. ಹೇಮಶ್ರೀ, ಮಿತಶ್ರೀ, ನಾಗಶ್ರೀ ಎಂಬ ಕನ್ನೆ ಯರು ಕ್ರಮವಾಗಿ ಸೋಮನ ಸೊಸೆಯರಾಗಿದ್ದರು. ಒಂದು ದಿನ ಈ ದಂಪತಿಗಳು ವನಕೇಳಿಗೆ ಹೊರಡುವ ಆಲೋಚನೆ ಮಾಡಿ ಸಿಂಗರಿಸಿಕೊಂಡು ಹೊರಡುವಾಗ ನಾಗಶ್ರೀ ತುಸು ತಡಮಾಡಿ ದಳು. ಈ ವೇಳೆಗೆ ಅಲ್ಲಿಗೆ ಬಂದ ದಿಗಂಬರಮುನಿಯನ್ನು ಸೋಮಭೂತಿ ಕಂಡು ಆಹಾರದಾನ ವೀಯಲು ಆಹ್ವಾನಿಸಿ ನಾಗಶ್ರೀಗೆ ತಿಳಿಸಿದನು. ತನ್ನ ವನಕೇಳಿಗೆ ಅಡ್ಡಿಯಾಗಿ ಬಂದನಲ್ಲ ಎಂದುಕೊಂಡು ಆ ಮುನಿಯನ್ನು ನಾಗಶ್ರೀ ವಿಷವಿಟ್ಟು ಕೊಂದುಹಾಕಿದಳು. ಈ ಸಮಾಚಾರ ವನ್ನು ತಿಳಿದು ಸೋಮನ ಮೂವರು ಮಕ್ಕಳೂ ಇಬ್ಬರು ಸೊಸೆಯರೂ ಜೈನದೀಕ್ಷೆಯನ್ನು ಪಡೆದು ತಪವೆಸಗಿ ಸಗ್ಗಕ್ಕಡರಿ ಕೊನೆಗೆ ಇವರೇ ಕ್ರಮವಾಗಿ ಪಾಂಡವರಾದರು.

ಇತ್ತ ನಾಗಶ್ರೀ ನರಕಕ್ಕಿಳಿದು ಅನಂತರ ನಾನಾ ಭವದಲ್ಲಿ ತಿರ್ಯಗ್ಗತಿಯಲ್ಲಿ ಜನಿಸಿ ಆ ಮೇಲೆ ಚಂಡಾಲ ಕನ್ನೆಯಾಗಿ ಹುಟ್ಟಿ ಅಹಿಂಸಾಣುವ್ರತವನ್ನು ಪರಿಪಾಲಿಸಿ ವೈಶ್ಯಕನ್ನೆಯಾಗಿ ಸುಕುಮಾರಿಯೆನಿಸಿದಳು. ಈಕೆಯನ್ನು ಮದುವೆಯಾದವನು ಇವಳ ಮೈಯ ದುರ್ಗಂಧಕ್ಕೆ ಅಸಹ್ಯಪಟ್ಟು ಸನ್ಯಾಸಿಯಾದಾಗ ಈಕೆ ಸಂಸಾರದಲ್ಲಿ ನಿರ್ವೇಗಹೊಂದಿ ತಾನೂ ತಪವೆಸಗಿ ಅಚ್ಯುತಕಲ್ಪದಲ್ಲಿದ್ದ ತನ್ನ ಹಿಂದಣ ಭವದ ಗಂಡನಾದ ಸೋಮಭೂತಿಯ ಹೆಂಡತಿಯಾದಳು. ಕಾಲಕ್ರಮೇಣ ಈ ಸುಕುಮಾರಿಯೇ ಪಾಂಚಾಲಿಯಾಗಿ ಅರ್ಜುನನನ್ನು ವರಿಸಿದಳು.

ಇತ್ತ ಪಾಂಡವರು ಶತ್ರುಂಜಯ ಪರ್ವತದಲ್ಲಿ ತಪವೆಸಗುತ್ತಿರಲು ಕೌರವರಲ್ಲುಳಿದು ಕೊಂಡಿದ್ದ ಕುಯವರನೆಂಬುವನು ಬಂದು ಈ ಮುನಿಗಳಿಗೆ ಕಾಸಿದ ಕಬ್ಬಿಣದ ಆಭರಣಗಳನ್ನು ತೊಡಿಸಿ ನಾನಾ ಹಿಂಸೆಯಿತ್ತು ಪೀಡಿಸಿದರೂ ಇವರು ಶಾಂತಚಿತ್ತರಾಗಿ ಕ್ಷಮಾಶೀಲರಾಗಿ ಕೊನೆಗೆ ಧರ್ಮರಾಯ, ಭೀಮ ಮತ್ತು ಅರ್ಜುನ ಈ ಮೂವರು ಅರಹಂತರಾದರು; ನಕುಲ ಸಹದೇವರು ದೇಹತ್ಯಾಗ ಮಾಡಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರರಾದರು. [ಮಂಗರಸನ, ನೇ. ಜಿ. ಸಂ., ೩೫ನೇ ಸಂಧಿ.]

(೧೦) ಸುದರ್ಶನ:—ಈತ ವರ್ತಮಾನಕಾಲದ ಐದನೆ ಬಲದೇವ.

(೧೧) ಪಾರ್ಶ್ವನಾಥ:—ಕಮಠನ ತಮ್ಮ ಮರುಭೂತಿ ಸ್ನೇಹಪರ, ಉದಾರಿ ಮತ್ತು ಉದಾತ್ತಚರಿತನಾಗಿದ್ದನು. ಕಮಠ ಮಹಾಮಾಯಾವಿ ಹಾಗೂ ವಿಷಯಲಂಪಟನಾಗಿದ್ದನು. ಅನೂಚಾನವಾಗಿ ಬಂದಿದ್ದ ಮಂತ್ರಿಪದವಿ ಸದಾಚಾರಸಂಪನ್ನನಾದ ಮರುಭೂತಿಗೆ ದೊರೆಯಿತು. ಮೊದಲೇ ಮಾಯಾವಿಯಾಗಿದ್ದ ಕಮಠನಿಗೆ ಇದರಿಂದ ತಮ್ಮನ ಮೇಲೆ ಬದ್ಧದ್ವೇಷವುಂಟಾಯಿತು. ಒಮ್ಮೆ ಮರುಭೂತಿಯೊಡನೆ ಆ ಊರಿನ ಅರಸು ಅರವಿಂದನೂ ಕಾಳಗಕ್ಕೆ ಹೋಗಬೇಕಾಯಿತು. ಆಗ ಅನಿವಾರ್ಯವಾಗಿ ರಾಜ್ಯಸೂತ್ರ ಕಮಠನ ಕೈಗೆ ಸಿಕ್ಕಿ ಕೋತಿಗೆ ಹೆಂಡ ಕುಡಿಸಿದಂತಾಗಿ ರಾಜ್ಯವನ್ನೆಲ್ಲ ತೊತ್ತಳದುಳಿದನು; ತಮ್ಮನ ಮಡದಿಯಾದ ವಸುಂಧರೆಯನ್ನೂ ಕಮಠ ಕೆಡಿಸಿದನು. ಶತ್ರುಗಳನ್ನು ಗೆದ್ದು ಅರವಿಂದನೂ ಮರುಭೂತಿಯೂ ಹಿಂದಿರುಗಿ ಅನಾಯಕತ್ವವನ್ನು ಗಮನಿಸಿದರು. ಅಣ್ಣನ ತಪ್ಪನ್ನು ಮರುಭೂತಿ ಮುಚ್ಚಲು ಪ್ರಯತ್ನಿಸಿದರೂ ಮಹಾರಾಜ ಆತನನ್ನು ವಿಧಿಯಿಲ್ಲದೆ ರಾಜ್ಯದಿಂದ ಬಹಿಷ್ಕರಿಸಿದನು. ಅಣ್ಣನ ಗತಿ ಇಂತಾದುದೇ ಎಂದು ತಮ್ಮ ಸಂಕಟಪಟ್ಟರೆ, ಇನ್ನೊಂದುಕಡೆ ಮರುಭೂತಿಯೇ ತನ್ನವಸ್ಥೆಗೆ ಮೂಲಕಾರಣನೆಂದು ಕಮಠ ಒಳಗೊಳಗೇ ಕುದಿದು ಭೂತಗಿರಿಗೆ ಪಲಾಯನವೆಸಗಿ ಜೋಗಿಯ ವೇಷವನ್ನು ಧರಿಸಿ ತಲೆಯ ಮೇಲೆ ಹೆಬ್ಬಂಡೆಯನ್ನು ಧರಿಸಿ ಮಹಾತಪಸ್ವಿಯಂತೆ ನಟಿಸುತ್ತಿದ್ದನು.

ಕೊನೆಗಾದರೂ ಕಮಠನಿಗೆ ಆತ್ಮೋದ್ಧಾರಚಿಂತೆ ಹುಟ್ಟಿತಲ್ಲ ಎಂದುಕೊಂಡು ಮರುಭೂತಿ ಅಣ್ಣನಿದ್ದೆಡೆ ಬಂದು ಭಕ್ತಿಯಿಂದ ಅಡ್ಡಬಿದ್ದನು. ಇಂಥ ಸಮಯಕ್ಕಾಗೇ ಕಾದಿದ್ದ ಆ ಬಕಮುನಿ ತನ್ನ ತಲೆಯ ಮೇಲಿದ್ದ ಹೆಬ್ಬಂಡೆಯನ್ನು ನಿರ್ದಯನಾಗಿ ತಮ್ಮನ ತಲೆಯ ಮೇಲೆ ಎತ್ತಿಹಾಕಿದನು! ಅಡ್ಡಬಿದ್ದವನಿಗೆ ಈ ರೀತಿ ಆಶೀರ್ವದಿಸಿದನು. ಮರುಭೂತಿಯ ತಲೆ ನುಚ್ಚುನೂರಾಯಿತು!

ಮರುಭೂತಿ ಸತ್ತು ಗಂಡಾನೆಯಾದನು. ಕಮಠನ ಮಡದಿ ಮರುಭವದಲ್ಲಿ ಹೆಣ್ಣಾನೆಯಾದಳು. ಕಮಠನಾದರೂ ಕುಕ್ಕುಟಸರ್ಪವಾಗಿ ಜನಿಸಿದನು. ಇತ್ತ ಅರವಿಂದ ಮಹಾರಾಜ ಜಿನಮುನಿಯಾಗಿ ಗಂಡಾನೆಗೂ ಧರ್ಮೋಪದೇಶವೆಸಗಿದನು. ಇತ್ತ ಕುಕ್ಕುಟೋರಗನಾಗಿದ್ದ ಕಮಠ, ಗಂಡಾನೆಯನ್ನು ಕೊಂದುಹಾಕಿತು. ಶುಭಪರಿಣಾಮದಲ್ಲಿ ಸತ್ತ ಮರುಭೂತಿಯಾತ್ಮ (ಗಂಡಾನೆ) ಸಗ್ಗಕ್ಕಡರಿ ದೇವನಾಗುವುದು; ಸಗ್ಗಸುಖ ಮುಗಿದ ಮೇಲೆ ಈ ಜೀವ ರಶ್ಮಿವೇಗನೆಂಬ ರಾಜಕುಮಾರನಾಗಿ ಬಾಲ್ಯದಲ್ಲೇ ತತ್ವಚಿಂತನೆಯೆಸಗುತ್ತ ಕೊನೆಗೆ ದಿಗಂಬರದೀಕ್ಷೆ ಧರಿಸುವನು. ಅತ್ತ ಕುಕ್ಕುಟಸರ್ಪ ನರಕಕ್ಕಿಳಿದು ಬಹುಕಾಲದ ಮೇಲೆ ಮತ್ತೆ ಹೆಬ್ಬಾವಾಗಿ ಬಂದು ರಶ್ಮಿವೇಗಮುನಿಯನ್ನು ಸಮಾಧಿಯಲ್ಲಿದ್ದಾಗ ನುಂಗುವುದು! ಮುನಿಯ ಜೀವ ದೇಹಪಂಜರದಿಂದ ಪಾರಾಗಿ ಅಚ್ಯುತೇಂದ್ರನಾಗಿ ಜನಿಸುವುದು; ಆ ಮೇಲೆ ಈ ಚೇತನ ವಜ್ರನಾಭಿಯಾಗಿ ಹುಟ್ಟಿ ಚಕ್ರವರ್ತಿಯಾಗಿ ಕೊನೆಯಲ್ಲಿ ನಿರ್ವೇಗ ಬಂದು ವಿರಾಗಿಯಾಗುವುದು.

ಸಿಡಿಲೆರಗಿ ವಿಷಸರ್ಪ (ಕಮಠ) ಸತ್ತು ಮತ್ತೆ ನರಕಕ್ಕಿಳಿದು ಅನಂತರ ಕುರಂಗಕನೆಂಬ ಬೇಡನಾಗಿ ಹುಟ್ಟಿ ತಪವೆಸಗುತ್ತಿದ್ದ ವಜ್ರನಾಭಿ ಮುನಿಯನ್ನು ಬಾಣವರ್ಷದಿಂದ ಕೊಂದು ಹಾಕಿದನು!

ವಜ್ರನಾಭಿ (ಮರುಭೂತಿ) ಸಮಾಧಿಮರಣವನ್ನು ಪಡೆದು ಅಹಮಿಂದ್ರನಾಗಿ ಜನಿಸಿ ಆ ಮೇಲೆ ಭೂಲೋಕದಲ್ಲಿ ರಾಜಕುಮಾರನಾಗಿ ಆನಂದನೆನಿಸುವನು; ಈ ಚೇತನ ಆತ್ಮೋನ್ನತಿಯನ್ನು ಸಾಧಿಸಲು ಜೈನದೀಕ್ಷೆಯಾಂತು ತಪವೆಸಗಿತು. ಅತ್ತ ಕುರಂಗಕ (ಕಮಠ) ನರಕಕ್ಕಿಳಿದು ಅನಂತರ ಸಿಂಹವಾಗಿ ಜನಿಸಿದನು. ಆನಂದಮುನಿಯನ್ನು ಕಂಡಾಕ್ಷಣ ಈ ಸಿಂಹ (ಕಮಠ) ಮೇಲೆರಗಿ ಕೊಂದುಹಾಕಿತು. ಮುನಿ—ಶುಭಪರಿಣಾಮದಲ್ಲಿ ಸತ್ತು ದೇವಲೋಕದಲ್ಲಿ ಜನಿಸಿದನು. ಅಲ್ಲಿಂದ ಚ್ಯುತನಾದ ಮೇಲೆ ಕಾಶಿಯಲ್ಲಿ ವಿಶ್ವಸೇನ ಮಹಾರಾಜನಿಗೂ ಆತನ ಮಡದಿ ಬ್ರಾಹ್ಮೀದೇವಿಗೂ ಗಂಡು ಕೂಸಾಗಿ ಪಾರ್ಶ್ವನಾಥನೆನಿಸುವನು.

ತನ್ನ ಸೋದರಮಾವನಾದ ಮಹೀಪಾಲ ಪಂಚಾಗ್ನಿ ತಪವೆಸಗುವುದನ್ನು ನೋಡಿ ಪಾರ್ಶ್ವನಾಥ ಆಕ್ಷೇಪಿಸಿ ಪ್ರಾಣಿಹಿಂಸೆಯಾಗುವುದನ್ನು ಮಾವನಿಗೆ ಪ್ರತ್ಯಕ್ಷವಾಗಿ ತೋರಿಸಿದನು. ಮಹೀಪಾಲನು ಬೆಂಕಿಗೊಡ್ಡಲು ಕಟ್ಟಿಗೆ ಸೀಳುವಾಗ ಅದರಲ್ಲಿದ್ದ ನಾಗದಂಪತಿಗಳು ತುಂಡು ತುಂಡಾಗಿ ಹೋದವು. ಆಗ ಪಾರ್ಶ್ವನಾಥನ ಕೃಪಾದೃಷ್ಟಿ ತುಂಡಾದ ಹಾವುಗಳ ಕಡೆ ಹರಿದಾಗ ಅವಕ್ಕೆಷ್ಟೋ ಶಾಂತಿಯಾಗಿ ಸಮಾಧಾನದಿಂದ ಸತ್ತುಹೋದವು. ಇಷ್ಟಾದರೂ ಮಹೀಪಾಲ (ಕಮಠ)ನಿಗೆ ಧರ್ಮಾನುರಾಗ ಹುಟ್ಟಲಿಲ್ಲ.

ಪಾರ್ಶ್ವನಾಥ ತನ್ನ ಮೂವತ್ತನೇ ವಯಸ್ಸಿನಲ್ಲಿ ವೈರಾಗ್ಯಗೊಂಡು ದಿಗಂಬರ ಮುನಿಯಾದನು. ಅತ್ತ ಮಹೀಪಾಲ ಸತ್ತು ಶಂಬರದೇವನಾಗಿ ಜನಿಸಿ ತಪವೆಸಗುತ್ತಿದ್ದ ಪಾರ್ಶ್ವನಾಥನ ಮೇಲೆ ಬೆಂಕಿಯ ಮಳೆಯನ್ನು ಸುರಿಸಿದನು. ಆಗ ಪಾತಾಳೇಂದ್ರನೂ ಆತನ ಮಡದಿ ಪದ್ಮಾವತಿಯೂ (ಹಿಂದೆ ಪಾರ್ಶ್ವನಾಥನಿಂದ ಧರ್ಮೋಪದೇಶ ಪಡೆದು ಸತ್ತಿದ್ದ ಹಾವುಗಳು) ಬಂದು ಈ ಉಪಸರ್ಗವನ್ನು ತಡೆದರು. ಇತ್ತ ಪಾರ್ಶ್ವನಾಥನಿಗೆ ಕೇವಲಜ್ಞಾನವಾಗಿ ಅರಹಂತ

ನೆನಿಸಿ ತೀರ್ಥಂಕರನಾಗಿ ಸಮವಸರಣದಲ್ಲಿ ವಿರಾಜಮಾನನಾಗಿ ಲೋಕಕಲ್ಯಾಣಕ್ಕಾಗಿ ದಿವ್ಯ ಧ್ವನಿಯನ್ನು ಹರಿಸಿದನು! ಈ ದಿವ್ಯಧ್ವನಿಯಲ್ಲಿ ಶಂಬರನ ಕೃಷ್ಣಲೇಶ್ಯೆ ಕೊಚ್ಚಿಹೋಗಿ ಆ ಮಹಾಪಾಪಿಷ್ಠನಿಗೂ ಧರ್ಮಾನುರಾಗ ಹುಟ್ಟಿತು! ಕಮಠನ ಪ್ರತೀಕಾರ ಜ್ವಾಲೆಯಲ್ಲೇ ಜನುಮ ಜನುಮಕ್ಕೂ ಬೆಂದು ಮರುಭೂತಿ ಪುಟಕ್ಕಿಟ್ಟ ಚಿನ್ನವಾಗಿ ತನ್ನಣ್ಣನನ್ನೂ ಉದ್ಧರಿಸಿದನು! [ಜಿ. ಬ್ರಹ್ಮಪ್ಪ, 'ಪಾರ್ಶ್ವನಾಥ', ವಿವೇಕಾಭ್ಯುದಯ, ೧೯೫೩ನೇ ಜುಲೈ ಮತ್ತು ಆಗೋಸ್ಟು ಸಂಚಿಕೆಗಳಿಂದ ಸಂಗ್ರಹಿಸಿರುವೆನು.]

ಮೆಯ್ಯ ನಿರಾಶೆ ಘೋರತಪಮುತ್ತಮ ಸಂಯಮಮಾತ್ಮತತ್ತ್ವಮಂ |
ಕೆಯ್ಯೊಳಗಿರ್ದ ಕನ್ನಡಿಯ ನೋಳ್ಪವೊಲೀಕ್ಷಿಪ ಬೋಧೆ ಕೂಡಿದಾ ||
ಸಂಯಮಿಗೆಲ್ಲಿ ಕಾಂಕ್ಷೆಯಿದರಿಂ ಕ್ಷಣದೊಳ್ಭವವೃಕ್ಷ ಮೂಲಮಂ |
ಕುಯ್ಯನೆ ಸುಟ್ಟು ತೂರಿ ಶಿವನಾಗಿರನೇ ಅಪರಾಜಿತೇಶ್ವರಾ || ೯೮ ||

"ದೇಹದ ಮೇಲೆ ನಿರಾಶೆವುಟ್ಟಿ ಕಠಿಣವಾದ ತಪಸ್ಸನ್ನು ಸಾಧಿಸಿ, ಉತ್ತಮ ಸಂಯಮಶಾಲಿಯಾಗಿ, ಆತ್ಮಸ್ವರೂಪವನ್ನು ಕೈಯ್ಗನ್ನಡಿಯಂತೆ ನೋಡಬಲ್ಲ ವಿರಾಗಿಯೆಡೆ ಯಾವ ಕಾಂಕ್ಷೆ ತಾನೆ ಸುಳಿದೀತು? ಇಂಥ ಮಹರ್ಷಿ ಕ್ಷಣದಲ್ಲಿ ಭವವೃಕ್ಷವನ್ನು ಬೇರು ಸಹಿತ ಕತ್ತರಿಸಿ, ಸುಟ್ಟು ಬೂದಿಮಾಡಿ, ಗಾಳಿಗೆ ತೂರಿ ಕೈವಲ್ಯವನ್ನು ಪಡೆಯದಿರುತ್ತಾನೆಯೆ?" ತೀವ್ರವೈರಾಗ್ಯ ಭೋರ್ಗರೆದು ಬಂದಾಗ ಲೌಕಿಕಪಾಶಗಳೆಲ್ಲ ತಾವಾಗೆ ಕಳಚಿಕೊಳ್ಳದಿರವು; ಆಗ ಜೀವಿ ಆತ್ಮೋದ್ಧಾರಕ್ಕಾಗಿ ತಳಮಳಗೊಳ್ಳದಿರನು. ನರ್ತನ ಮಾಡುತ್ತಿರುವಾಗಲೇ ಮಧುರಾಕಾರ ಲತಾಕೋಮಲೆ ನೀಲಾಂಜನೆ ಜವನ ಕರೆಯೋಲೆಯನ್ನು ಕಂಡು ಕರಗಿಹೋದಳು! ಈ ದೃಶ್ಯವನ್ನು ಕಂಡು ಆದಿದೇವನ ಭೋಗಕಾಂಕ್ಷೆ ತಾನಾಗೆ ಹಿಂಗಿಹೋಯಿತು! ವನಿತಾಕಟಾಕ್ಷದಿದಿರು ಕರಗುತ್ತಿದ್ದ ಆದಿದೇವನ ರಸಲೋಲುಪತೆ ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ತೂರಿಹೋಯಿತು! "ಎಷ್ಟೋ ಸಗ್ಗಗಳಲ್ಲಿ ಜನ್ಮವೆತ್ತಿದೆ; ಅಲ್ಲೆಲ್ಲ ಸುಖಸಾಗರದಲ್ಲಿ ಓಲಾಡಿದೆ; ಇಷ್ಟಾದರೂ ನನ್ನ ಭೋಗಾಕಾಂಕ್ಷೆ ಹಿಂಗಲೆ ಇಲ್ಲ! ಈ ನರಜನುಮದಲ್ಲಿ ಸಿಗಬಹುದಾದ ಸುಖವಾದರೂ ಎಷ್ಟು? ಕೇವಲ ಹುಲ್ಲುಮೇಲಿನ ಹನಿಯಂತೆ ಲಭಿಸುವ ಈ ಭೋಗದಿಂದ ನನ್ನ ಕಾಂಕ್ಷೆ ಹಿಂಗೀತೆ? ಸಂಸಾರವೆಂದರೆ ಸುಖದ ಸುಪ್ಪತ್ತಿಗೆಯೆ? ಇದರಲ್ಲಿ ದುರಂತಮಯವಾದ ದುಃಖ ತುಂಬಿ ತುಳುಕಾಡುತ್ತಿರುವುದಲ್ಲ! ಈ ಸಂಸಾರೀಜೀವಿ ಅವಕ್ಕೆ ಸಿಕ್ಕಿ ಚಿಂದಿಚಿಂದಿಯಾಗುತ್ತಿರುವನು! ದುರ್ಮೋಹವೆಂಬ ಮೀನುಗಳು ಜೀವಿಯನ್ನು ಬೆನ್ನಟ್ಟಿ ನುಂಗುತ್ತಿವೆ! ಲೋಭವೆಂಬ ಮೊಸಳೆವಿಂಡು ಜೀವಿಯನ್ನು ಕಡಿದಿಕ್ಕುತ್ತಿವೆ! ಕಾಮವಿಕಾರವೆಂಬ ವಿಜಾತಿ ಮೀನು ಮೇಲೆ ಬಿದ್ದು ಮಾನವನನ್ನು ಪಕ್ಕನೆ ಹಿಡಿದು ನುಂಗುತ್ತಿವೆ! ಇಂಥ ಮಹೋಗ್ರ ವಿಪತ್ ಪರಂಪರೆಗೆ ತಲೆಯೊಡ್ಡಿ ಇದುವರಿವಿಗೂ ತೊಳಲಾಡಿದೆನು! ಇನ್ನು

ವಿ. ಸೂ:—ಸಂಜಯಂತ, ಸುವರ್ಣಭದ್ರ, ಶಿವಭೂತಿ ಇವರ ವಿವರ ನನಗೆ ದೊರೆಯಲಿಲ್ಲ. ಮೇಲೆ ಕೊಟ್ಟಿರುವ ವಿವರಕ್ಕೆ ಆಕರವಾದ ಗ್ರಂಥಗಳನ್ನು ಪೂಜ್ಯ ಅ. ನೇ. ಉಪಾಧ್ಯೆ, ಎಂ.ಎ., ಡಿ.ಲಿಟ್. ಅವರು ಸೂಚಿಸಿ ಮಾರ್ಗದರ್ಶನ ಮಾಡಿರುವರು.

ಭಯಾನಕವಾದ ಭವಾಬ್ಧಿಯಲ್ಲಿ ಬೀಳಲಾರೆ; ಖಂಡಿತ ಭ್ರಮಿಸಲಾರೆ![1]" ಎಂದು ಆದಿದೇವ ಆಕ್ರಂದಿಸುವನು. ಭೋಗವೇ ಮಹಾಭಾಗ್ಯವೆಂದು ಭಾವಿಸಿ ಅನಂತಕಾಲ ನಾನಾಭವದಲ್ಲಿ ನಾನಾಲೋಕದಲ್ಲಿ ವಿಹರಿಸಿದ ಆದಿದೇವನಿಗೆ ಇಂದು ತಾನೆಂಥ ಹೀನ ಕಾರ್ಯವೆಸಗಿದೆನೆಂದು ಸಂಕಟವಾಗಿದೆ. ಓದುಗರೂ ಆತನ ಹಿಂದಣ ಭವಗಳ ಭೋಗಾಕಾಂಕ್ಷೆಯತ್ತ ದೃಷ್ಟಿಹಾಯಿಸಬೇಕು. ಸಗ್ಗದಲ್ಲಿ ಲಲಿತಾಂಗದೇವನಾಗಿ ಜನಿಸಿದಾಗ 'ಇದು ಸುಖದೊಂದು ತುತ್ತತುದಿ! ರಾಗದ ಮೊತ್ತಮೊದಲ್! ನಿರಂತರಾಭ್ಯುದಯಸಾಗರಂ! ವಿಭವದಾಗರಂ! ಈ ದಿವಿಜೇಂದ್ರರುಂದ್ರಲೋಕದೊಳ್ ಇದೊಂದೆ ಸಾರಂ![2]' ಎಂದು ನಂಬಿಕೊಂಡು ಬಾಳಿದನು. ಇಂಥ ಭಾಗ್ಯಗಳನ್ನೇ ಮತ್ತೆ ಮತ್ತೆ ನೀಡೆಂದು ಜಿನೇಂದ್ರನನ್ನು ಪ್ರಾರ್ಥಿಸಿದನು. ವಜ್ರಜಂಘನಾದಾಗ, ಶ್ರೀಮತಿಯೊಡನೆ ಪ್ರಣಯೋನ್ಮಾದದಲ್ಲಿರುವಾಗಲೆ ದುರಂತ ಮರಣಕ್ಕೀಡಾಗುವನು.[3] ಅದೂ ಪ್ರಾಣವಲ್ಲಭೆಯೊಡನೆ ಪ್ರಾಣವನ್ನು ನೀಗುವನು! ಅಷ್ಟೇಕೆ ಜಯವರ್ಮನಾದಾಗ[4] ತಪಸ್ಸನ್ನೂ ಖೇಚರಸುಖಕ್ಕಾಗಿ ಸಾಟವೆ ಮಾಡಿದ ಈ ಮಹಾರಾಯ ನೀಲಾಂಜನೆಯ ಸಾವನ್ನು ಕಂಡು 'ತಿರಿಯಲಾರೆಂ ಭವಾಂಬೋಧಿಯೊಳ್' ಎಂದು ಕೊಕ್ಕರಿಸಿ ನುಡಿದಿರುನು! ಕಾಲಲಬ್ಧಿ ದೊರೆತಾಗ ಜೀವಿಯ ಮೊದಲಿನ ವಿಚಾರಲಹರಿ ತಲೆಕೆಳಗಾಗದಿರದು.

ಕವಿದಮುಗಿಲ್ಗಳೇ ಪರಿಯಲೆಂದುರೆ ಚಿಂತಿಸವೇಳ್ಕುಮಲ್ಲ ದೇ |
ರವಿಗಧಿಕ ಪ್ರಕಾಶಗುಣವಾಗಲಿಯೆಂದೆನವೇಳ್ಕೆಯಾತ್ಮನುಂ ||
ಭವವಿಕೃತಾಷ್ಟಕರ್ಮವನೆ ನಷ್ಟಮನೆಯ್ದಿಪನೆಂಬುದಲ್ಲದೇ |
ಶಿವಸುಖಮೆಂಬುದಂ ಬಯಸಲೇಕೆ ನಿಜಕ್ಕಪರಾಜಿತೇಶ್ವರಾ || ೯೯ ||

"ಸೂರ್ಯನಿಗೆ ಮುಸುಕಿರುವ ಮೋಡ ಓರೆಯಾದರೆ ಪ್ರಭೆ ತಾನಾಗೇ ಪ್ರಜ್ವಲಿಸುವುದು. ಅದರಿಂದ ಮೋಡ ಕರಗಿಹೋಗಲೆಂದು ಯೋಚಿಸಬೇಕಲ್ಲದೆ ಸೂರ್ಯಕಾಂತಿ ಹೆಚ್ಚಲೆಂದು ಯೋಚಿಸಬಾರದು. ಅಂತೆ ಆತ್ಮನೂ ತನಗೆ ಭವವಿಕಾರದಿಂದ ಪ್ರಾಪ್ತಿಯಾಗಿರುವ 'ಕರ್ಮಾಷ್ಟಕ'ವನ್ನು ನಷ್ಟಗೊಳಿಸುವ ಆಲೋಚನೆ ಮಾಡಬೇಕಲ್ಲದೆ ಮುಕುತಿಸುಖಕ್ಕಾಗಿ ಬಾತು ಬಾಯಿಬಿಡಬಾರದು." ವೀತರಾಗನಾದ ಮಹರ್ಷಿಗೆ ಮುಕುತಿ ಬೇಕೆಂಬ ಆಶೆಯೂ ಹುಟ್ಟಬಾರದು. ಕರ್ಮಗಳನ್ನು ಧ್ವಂಸಮಾಡುವುದೊಂದೇ ಆತನ ಗುರಿಯಾಗಿರಬೇಕು.

೧. ಎನಿತಾನು ಮಂಜುನಿಧಿಗಳ | ನನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತಿ ||
ಲ್ಲೆನಗೆ ನರಭೋಗಮೆಂಬೀ | ಪನಿಪುಲ್ಲಂ ನಕ್ಕೆತೃಷ್ಣೆಪೇಳ್ ಪೋದಪುದೇ || ೫೭ ||
ಬಗೆದೀಡಾಡೆ ದುರಂತ ದುಃಖತತಿಗಳ್ ಬೆನ್ನಟ್ಟೆದುರ್ಮೋಹಮ |
ತ್ಸ್ಯಗಣಂಗಳ್ ಕಡಿದಿಕ್ಕೆ ಲೋಭ ಮಕರಾನೀಕಂಗಳಾಟಂದು ನು ||
ಣ್ಣಗೆ ನುಂಗುತ್ತಿರೆ ಮಾರರಾಗ ಶಿಶುಮಾರಂಗಳ್ ಮಹೋಗ್ರಂಗಳಿ |
ನ್ನೆಗಮೋರಂತೆ ತೊಳಲ್ದೆನಿಂ ತಿರಿಯಲಾರೇಂ ಭವಾಂಬೋಧಿಯೊಳ್ || ೬೦ ||
—ಪಂಪ, ಆ. ಪು. IX.

೨. ಆ. ಪು. II-೬೯;

೩. ಆ. ಪು. V-೨೩, ೨೪;

೪. ಪಂಪ, ಆ. ಪು. II-೩೭-೪೨.

ಅನಂತರ ಕೈವಲ್ಯ ತಾನಾಗೆ ಲಭಿಸುವುದು. ಇಲ್ಲಿ ಲಭಿಸುವುದು ಎಂಬ ಮಾತು ತಪ್ಪಾಗುವುದು. ತನ್ನ ಪಟ್ಟಣವನ್ನು ಮುತ್ತಿರುವ ಶತ್ರುಗಳನ್ನು ಓಡಿಸಿದ ಮೇಲೆ ತನ್ನ ಪಟ್ಟಣ ಮತ್ತೆ ತನ್ನದಾಗುವುದಷ್ಟೆ. ಸ್ವಭಾವತಃ ಪ್ರತಿಯೊಂದು ಜೀವಿಯೂ ಅವ್ಯಕ್ತ ಪರಮಾತ್ಮ! ಕರ್ಮಗ್ರಹಣಕ್ಕೆ ತುತ್ತಾಗಿರುವ ಅನಂತಸಿರಿಗಡಲೊಡೆಯ! ವ್ಯಕ್ತಪರಮಾತ್ಮನಾಗಲು ಕರ್ಮದೊಡನೆ ಹಣಾಹಣಿಯಾಡುವ ಆಧ್ಯಾತ್ಮಿಕ ರಣರಂಗವೇ ಜಪತಪ ಧ್ಯಾನಾದಿಗಳು! ಸೂಕ್ಷ್ಮಾತಿಸೂಕ್ಷ್ಮವಾದ ಕರ್ಮಪುದ್ಗಲಗಳನ್ನು ಅತ್ಯಂತ ಸೂಕ್ಷ್ಮವೂ ತೀಕ್ಷ್ಣವೂ ಆದ ಜ್ಞಾನಾಸ್ತ್ರದಿಂದ ನುಚ್ಚುನೂರು ಮಾಡಬೇಕಾಗುವುದು.

ಶುದ್ಧನಿಜಾತ್ಮನಂ ಬಿಡದೆ ಕಾಣ್ಬ ಸುಭವ್ಯನ ಸೌಖ್ಯಮೆಂಬುದಾ |
ಸಿದ್ಧರ ಸೌಖ್ಯದಂಶಮೆನವೇಳ್ಕುಮಲ್ಲದೆ ನಾಗದೇವ ಮ ||
ರ್ತ್ಯೋದ್ಧತ ಸೌಖ್ಯದಲ್ಲಿ ಸರಿಹೋಲಿಸಲಾಗದೇಕೆ ಕರ್ಮಸಂ |
ಬದ್ಧ ವದಿಂತಿದಸ್ತಮಲಮಪ್ಪುದರಿಂದಪರಾಜಿತೇಶ್ವರಾ || ೧೦೦ ||

“ಶುದ್ಧಾತ್ಮನನ್ನು ನಿರಂತರ ಅವಲೋಕಿಸುವ ಭವ್ಯಾತ್ಮನ ಆನಂದವೆಂಬುದು ಬ್ರಹ್ಮಾನಂದದ ಅಂಶವೆಂದೇ ಹೇಳಬೇಕು. ಭೋಗವಾಸಿಗಳ, ಕಲ್ಪವಾಸಿಗಳ ಹಾಗೂ ಮಾನವರ ಸುಖಕ್ಕೆ ಯೋಗಿಯ ಆನಂದವನ್ನು ಎಂದಿಗೂ ಹೋಲಿಸಬಾರದು, ಏಕೆಂದರೆ ನಾಗಾದಿಗಳ ಸೌಖ್ಯಕ್ಕೆ ಪುಣ್ಯ ಕರ್ಮಬಂಧವೇ ತಾಯ್ಬೇರು! ಭವ್ಯಾತ್ಮನಾದ ಮಹರ್ಷಿಯ ಸುಖವಾದರೋ ಕರ್ಮಮಲರಹಿತವಾದುದು.”

‘ಅಡಿಗಡಿಗಾನಂದವೆಂಬ ಸಾಗರವನೊ | ಕ್ಕುಡಿತೆಯ ಮಾಡಿ ಸೇವಿಪನು ||
ಒಡನೊಡನೀಂಟಿದಷ್ಟಕೆ ಹೆಚ್ಚಿ ಕಡಲು ಬ | ಲ್ಗಡಲಾಗುತಿಹುದೇನನೆಂಬೆ || ೬೦ ||
ಬೊಲ್ಲನಿಲ್ಲದೆ ವೈಹಾಳಿಮಾಳ್ಪನು ಮಿಣಿ | ಯಿಲ್ಲದುಯ್ಯಲಾಡುತಿಹನು ||
ನಲ್ಲಳಿಲ್ಲದೆ ರತಿಸುಖವ ಸುಖಿಸುವನ | ದೆಲ್ಲಿ ಕಲಿತನೊ ರಾಜೇಂದ್ರ || ೬೬ ||
ಬಾಯಹಂಗಿಲ್ಲದೆ ಚಿದ್ಗುಣಾನ್ನವನುಂಬ | ಕಾಯವಿಲ್ಲದೆ ರೂಪದೋರ್ಪಾ ||
ಶ್ರೀಯಿಲ್ಲದತಿ ಸಿರಿವಂತನಾಗಿಹನೇನು | ಮಾಯಕಾರನೊ ಸಾರ್ವಭೌಮಾ’ || ೬೭ ||
‘ಆಕಾಶದೊಳು ಹರಿದಾಡುವಂತಾ ಸಿದ್ಧ | ಲೋಕದೊಳೆಡೆಯಾಡುವಂತೆ ||
ಬೇಕಾದ ಸಿದ್ಧರೊಳೇಕಾಂತ ಮಾಳ್ಪಂತೆ | ಭೂಕಾಂತ ನಿರ್ದನಾತ್ಮನೊಳು’ || ೪೩ ||
‘ಭೋಗಿಸಬಹುದಾತ್ಮ ಸುಖವ ನಿಂತಿಹುದೆಂದು | ಲೋಗರಿಗರುಹಲಶಕ್ಯಾ ||
ಹೋಗಬಹುದು ಗಗನದೊಳು ಚಾರಣರು ಕ | ಣ್ಣಾಗಿಸಬಹುದೆ ಹೆಜ್ಜೆಗಳಾ’ || ೬೪ ||

ಅನಿರ್ವಚನೀಯವಾದ ಆತ್ಮಾನಂದವನ್ನು ರತ್ನಾಕರ, ಭರತೇಶವೈಭವದಲ್ಲಿ ಓದುಗ ತಣಿಯುವಷ್ಟು ವಿವರಿಸಿದ್ದಾನೆ. ಮಾತುಗಳಲ್ಲಿ ರಚಿಸಿದ್ದಾನೆ; ಕಣ್ಣಿಗೆ ಕಟ್ಟುವ ಬಣ್ಣಗಳಲ್ಲಿ ಚಿತ್ರಿಸಿದ್ದಾನೆ; ಭಾವದಲ್ಲಿ ಕೋದುಕೋರ್ಯೆಸಿದ್ದಾನೆ. ಇಷ್ಟಾದರೂ ‘ಭೋಗಿಸಬಹುದಾತ್ಮಸುಖವ ನಿಂತಹುದೆಂದು ಲೋಗರಿಗರುಹಲಶಕ್ಯಾ’ ಎಂದು ಕೊನೆಯ ತೀರ್ಮಾನವನ್ನೂ ಹೇಳಿಬಿಟ್ಟಿರು

೧. ಭ. ವೈ. ೧೮ನೇ ಸಂ.
೨. ಭ. ವೈ. ೭೨ನೇ ಸಂ.

ವನು! “ಭಗವಂತನ ದರ್ಶನ ದೊರೆತುದೇ ಆದರೆ ಹೆಂಗಸಿನ ಸುಖಕ್ಕಿಂತ ಕೋಟಿಪಾಲು ಅಧಿಕವಾಗಿ ಸುಖ ದೊರೆಯುತ್ತದೆ. ಗೌರೀ ಪಂಡಿತ ಹೇಳುತ್ತಿದ್ದ, ಮಹಾಭಾವವುಂಟಾದರೆ ಚರ್ಮದ ಎಲ್ಲ ರಂಧ್ರಗಳೂ—ರೋಮ ಕೂಪಗಳೂ ಕೂಡ—ಮಹಾಯೋನಿಗಳಾಗಿ ಬಿಡುತ್ತವೆ. ಪ್ರತಿಯೊಂದು ರಂಧ್ರದ ಮೂಲಕವೂ ಸಾಧಕ ಆತ್ಮನೊಡನೆ ರಮಿಸುತ್ತಿರುವಂತೆ ಬೋಧೆಯಾಗುತ್ತದೆ[1]” ಶ್ರೀ ರಾಮಕೃಷ್ಣ ಪರಮಹಂಸರು ಭಗವದ್ಭಕ್ತನ ಪರಮಾನಂದವನ್ನು ಸೊಗಸಾಗಿ ವಿವರಿಸಿರುವರು.

ಚಿಂತೆಯೊಳೊಂದಿದಾವ ಬರ್ದುಕುಂ ಬಹುದುಃಖಮೆ ಯೆಂಬರೆಂದುಮಾ |
ಚಿತೆಯ ಬಾಳೊಳೇ ಬರ್ದುಕುತಿರ್ಪರದೇಕೆ ಸುಖಸ್ಥಳಾಂಧಕರ್ ||
ಚಿಂತಿಪ ಮಾಳ್ಪ ಮಾತುಲಿವ ದಂದುಗಮಿಲ್ಲದೆ ತನ್ನ ರೂಪಿನೊಳ್ |
ಶಾಂತದೆ ತೆಪ್ಪಗಿರ್ಪ ಬಗೆದೋರದಲಾ ಅಪರಾಜಿತೇಶ್ವರಾ || ೧೦೧ ||

ಹಂಸಕಲೆಯಿಂದ ದೊರೆವ ಆನಂದದಿದಿರು ದೇವತೆಗಳ ಸೊಗವೆಲ್ಲ ಏನೇನೂ ಅಲ್ಲ. ಹೀಗಿದ್ದೂ ಲೋಕ ಎಚ್ಚರಗೊಳ್ಳದೆ ವಿಷಯಸುಖದ ಕೊಚ್ಚೆಯಲ್ಲುರುಳಾಡುತ್ತಿದೆಯಲ್ಲ ಎಂದು ರತ್ನಾಕರ ಸಂಕಟಪಡುವನು. “ಚಿಂತೆಯಿಂದೊಡಗೂಡಿದ ಯಾವ ಬದುಕೇ ಆಗಲಿ ದುಃಖತರವಾದುದು ಎಂದು ಬಾಯಲ್ಲೇನೋ ಹೇಳುವರು. ಆದರೆ ತಾಪತ್ರಯವಾದ ಬಾಳ್ವೆಯನ್ನು ಯಾರೂ ತೊರೆಯಲೊಲ್ಲರು. ಸುಖದ ನೆಲೆಯರಿಯದ ಮೂಢರಿಗೇನು ಮಾಡಬೇಕು? ಯಾವ ಚಿಂತೆಯೂ ಇಲ್ಲದೆ, ಮಾತಾಡುವ ಗೋಜಿಲ್ಲದೆ ತೆಪ್ಪಗಿದ್ದು ತನ್ನ ರೂಪದಲ್ಲೇ ಅಡಗಿ ‘ಸಮಾಧಿ’ ಅವಸ್ಥೆಯನ್ನು ಅನುಭವಿಸಲು ಮನಸ್ಸು ಬಾರದಲ್ಲ!” ಎಂದು ರತ್ನಾಕರ ವಿಷಯಾಸಕ್ತರಿಗಾಗಿ ಮರುಕತೋರಿರುವನು.

ಲೋಕವನ್ನು ಅತಿಯಾಗಿ ಮೈಗೆ ಹಚ್ಚಿಸಿಕೊಂಡೆನೇನೋ ಎಂದು ರತ್ನಾಕರ ಆಗಾಗ ಚಿಂತೆಗೊಳಗಾಗುವನು; ತನ್ನ ಪಾಡನ್ನು ತಾನು ನೋಡಿಕೊಳ್ಳದೆ ಅನ್ಯರ ಗೊಡವೆಗೆ ತಲೆಹಾಕುತ್ತಿರುವೆನಲ್ಲ ಎಂದು ಬೇಸರಪಟ್ಟುಕೊಳ್ಳುವನು.

ನೋಡಿದು ಚಿತ್ರಮೀಕ್ಷಿಸುವುದೆನ್ನ ನಿಜತ್ವಮದರ್ಕೆ ದೇಹಮ |
ಲ್ಲಾಡದೆ ಕುಳ್ಳಿತಿರ್ಪ ಕೆಲಸಂ ದೊರೆಕೊಂಬುದು ಮೋಕ್ಷಮಿಂತಿದಂ ||
ಮಾಡುವುದರ್ಕೆ ನಾನಲಸಿ ಮೆಯ್ಮನಮಾತುಗಳಂ ಬಯಲ್ಗೆ ರೋ |
ಡಾಡಿಸಿ ಕರ್ಮಮಂ ಕರೆವೆನಜ್ಞತೆಯಿಂದಪರಾಜಿತೇಶ್ವರಾ || ೧೦೨ ||

“ಸ್ವಸ್ವರೂಪವನ್ನು ನೋಡುವುದಾದರೆ ಅಚಲನಾಗಿ ಸಮಾಧಿಸ್ಥನಾಗಬೇಕು. ಸಮಾಧಿಸ್ಥನಾಗಿದ್ದುಕೊಂಡೇ ಕೈವಲ್ಯಸುಖವನ್ನನುಭವಿಸಬೇಕು. ಈ ರೀತಿ ಅಚಲನಾಗಿ ಅಂತರ್ಮುಖಿಯಾಗಿರಲು ಆಲಸ್ಯಪಟ್ಟುಕೊಂಡು ಕಾಯವಚನಮನಗಳನ್ನು ರೋಡಾಡಿಸಿ ವೃಥಾಕರ್ಮದ ಮಳೆಗರೆಯುತ್ತಿರುವೆನಲ್ಲ! ಎಂಥ ಮೂರ್ಖತನ ಇದು?”

ಧ್ಯಾನಕೆ ಬೇಸರಾದಾಗ ನನ್ನಾತ್ಮಲೀ | ಲಾನುವೃದ್ಧಿಗೆ ಪೇಳ್ದೆನ್ನೆಸೆ ||
ನಾನೊಬ್ಬರೊಡನೆ ಮತ್ಸರಕೆ ಪೇಳ್ದವನಲ್ಲ | ಮೋನದೊಳಿಹೆನದು ಸಾಕು[2] || ೧೦೬ ||

೧. ಶ್ರೀ ರಾ. ಕೃ. ವ. ವೇ., ಪೂ, ಪು. ೩೧೯-೨೦; ೨. ಭ. ವೈ. ೮೦-೧೦೬

ರತ್ನಾಕರನ ಸುಧಾರಣಾ ಮನೋಭಾವವನ್ನೂ ಔದಾರ್ಯಪೂರ್ಣವೂ ಕ್ರಾಂತಿಯುಕ್ತವೂ ಆದ ವಿಚಾರಲಹರಿಯನ್ನೂ ಕಂಡು ಆ ಕಾಲದಲ್ಲೇ ಕಂದಾಚಾರದ ಕೆಲಮಂದಿ ಅಪಾರ್ಥ ಕಲ್ಪಿಸಿ ಈತನನ್ನು ವಿರೋಧಿಸಿರಬಹುದು. ಅಂಥ ವೇಳೆಯಲ್ಲಿ ರತ್ನಾಕರ ಬೇಸರಗೊಂಡು ಲೋಕದ ಹವ್ಯಾಸವನ್ನೇ ತೊರೆದು ನನ್ನ ಪಾಡಿಗೆ ನಾನೇಕಿರಬಾರದು ಎಂದು ಎಷ್ಟೋ ಸಾರೆ ತಾನೇ ಪ್ರಶ್ನೆ ಹಾಕಿಕೊಂಡಿರುವನು.

ಚಿಂತಿಸವೇಳ್ಪೊಡಂ ಬಿಡದೆಚಿಂತಿಕೆ ದೇಹದ ಕಷ್ಟಮಂ ಸುಖ |
ಭ್ರಾಂತಿಯನ್ಯೆದು ಭೇದಭವಮಂ ನವಭೇದಪದಾರ್ಥಮಂ ವ್ರತಾ ||
ನಂತವನರ್ಹದಾದಿಗಳನಾತ್ಮನ ಕರ್ಮದ ರೂಪನೇಕೆನಲ್ |
ಚಿಂತೆಯಿದಸ್ತ ಚಿಂತೆಯನೆ ಮಾಳ್ಪುದರಿಂದಪರಾಜಿತೇಶ್ವರಾ || ೧೦೩ ||

"ಚಿಂತೆ ಮಾಡುವುದಾದರೆ ದೇಹಕ್ಕೆ ಬರಬಹುದಾದ ವಿಪತ್ತುಗಳನ್ನು ಚಿಂತಿಸು; ಸಂಸಾರದಲ್ಲಿ ಸುಖವೆಲ್ಲಿ ಬಂತು, ಅದು ಕೇವಲ ಭ್ರಮೆಯೆಂದು ಯೋಚಿಸಲು; ದ್ರವ್ಯ ಕ್ಷೇತ್ರ ಕಾಲ ಭವ ಭಾವ ಈ ಐದು ದೃಷ್ಟಿಯಿಂದ ಸಂಸಾರದ ಜಂಜಾಟವನ್ನು ಯೋಚಿಸು; ಜೀವಾಜೀವ ಮುಂತಾದ ಒಂಭತ್ತು ಪದಾರ್ಥಗಳನ್ನು ಮೆಲುಕುಹಾಕು; ಅನಂತವ್ರತಗಳನ್ನೂ ಅರಹಂತನೇ ಮೊದಲಾದ ಪರಮೇಷ್ಠಿಗಳನ್ನೂ ಸ್ಮರಿಸು; ಆತ್ಮಸ್ವರೂಪವನ್ನೂ ಕರ್ಮದ ಸ್ವಭಾವವನ್ನೂ ಅಕ್ಕಪಕ್ಕದಲ್ಲಿಟ್ಟು ತುಲನೆ ಮಾಡು. ಈ ರೀತಿ ಪಾರಮಾರ್ಥಿಕ ಯೋಚನಾ ತರಂಗವೆದ್ದರೆ ಲೌಕಿಕವಾದ ಚಿಂತೆಗಳ ಅಬ್ಬರವೆಲ್ಲಾ ತಗ್ಗಿ ಹೋಗುವುದು!"—ಏನಾದರೂ ಮಾಡಿ ಹಾರಾಡುವ ಮನವನ್ನು ಪಾರಮಾರ್ಥಿಕರಂಗದಲ್ಲಿ ಹಾರಾಡಿಸಿ ಪಾವನಗೊಳಿಸಬೇಕು. "ಯಾರಿಗೆ ಇನ್ನೂ ಭೋಗೇಚ್ಛೆ ಇದೆಯೊ ಅವರು ಸಂಸಾರದಲ್ಲಿದ್ದೇ ಭಗವಂತನನ್ನು ಕರೆಯಲಿ....ಆದರೆ ನಿಜವಾದ ಸನ್ಯಾಸಿಗಳ ವಿಷಯವೇ ಬೇರೆ. ಜೇನು ಹುಳು ಹೂವನ್ನು ಬಿಟ್ಟು ಬೇರೆ ಯಾವುದರ ಮೇಲೂ ಕುಳಿತುಕೊಳ್ಳದು. ಚಾತಕ ಪಕ್ಷಿಯ ಸುತ್ತಲೂ ಬೇಕಾದಷ್ಟು ನೀರು ಸುಮ್ಮನೆ ತುಂಬಿದೆ. ಅದು ಅದಾವುದನ್ನೂ ಮುಟ್ಟದು. ಅದು ಕೇವಲ ಸ್ವಾತೀ ನಕ್ಷತ್ರದ ಮಳೆಗಾಗಿ ಬಾಯಿ ತೆರೆದು ಕಾದಿರುತ್ತದೆ. ನಿಜವಾದ ಸನ್ಯಾಸಿ ಜೇನುಹುಳುವಿನ ಹಾಗೆ. ಆದರೆ ಗೃಹಸ್ಥ ಸಾಮಾನ್ಯ ನೊಣದ ಹಾಗೆ. ಅದು ಸಿಹಿತಿಂಡಿಯ ಮೇಲೂ ಕುಳಿತುಕೊಳ್ಳುತ್ತದೆ, ಕೊಳೆತು ನಾರುವ ವ್ರಣದ ಮೇಲೂ ಕುಳಿತುಕೊಳ್ಳುತ್ತದೆ."[೧] ಶ್ರೀ ರಾಮಕೃಷ್ಣ ಪರಮಹಂಸರು ಗೃಹಸ್ಥನ ಹಾಗೂ ಸನ್ಯಾಸಿಯ ರುಚಿಕಟ್ಟನ್ನು ತುಲನಾತ್ಮಕವಾಗಿ ವಿವೇಚಿಸಿರುವರು. ಹರಿವ ಸ್ವಭಾವವೇ ರೂಪವೆತ್ತು 'ಮನ'ವಾಯಿತೋ ಏನೋ! ಅಂಥ ಮನವನ್ನು ಪರಮಾತ್ಮನ ಕಡೆ ಹರಿವಂತೆ ಮಾಡಿದರೆ ಸಾಧಕ ಉದ್ಧಾರವಾಗುವನು. ಈ ರೀತಿಯಾದ ಚಿಂತನೆಗೆ ಧರ್ಮಧ್ಯಾನವೆನ್ನುವರು. 'ಧರ್ಮಧ್ಯಾನ'ದಿಂದಲೂ **'ಕರ್ಮನಿರ್ಜರೆ'**ಯಾಗುವುದು ಇಲ್ಲವೆ **'ಉಪಶಮ'**ವಾಗುವುದು!

ಚಿತ್ತ ನಿನ್ನ ಚಿಂತೆಯೊಳಿರಲಿ ಸದಾ ಚಿಂತೆ ಇತರ ಬಿಡಲಿ
ಅಂತರಂಗದಲ್ಲಾನಂದಿರಲಿ ಅಹಂಕೃತಿಯನು ಬಿಡಲಿ

೧. ಶ್ರೀ ರಾ. ಕೃ. ವ. ವೇ., ಪೂ, ಪು. ೩೧೯-೨೦;

ಸಂತತ ನಿನ್ನ ಪಾದಾಕ್ರಾಂತನಾಗಿರುವಂತೆ ಪಂಥವ ಪಾಲಿಸೋ ಪರಮಪುರುಷ ಹರೇ |
....ಸಜ್ಜನರೊಳಗೆನ್ನನಿರುತವು ನಿಲ್ಲಿಸೊ ನೀರಜಾಕ್ಷ ಹರೇ[೧]

—ಎಂದು ಶ್ರೀ ವಿಜಯದಾಸರು ಭಗವಂತನಲ್ಲಿ ಮೊರೆಯಿಟ್ಟಿರುವರು. ಹರಿವ ಮನ ಹರಿಪಾದಾಂಬುದಜಲ್ಲಿ ಹರಿಯಲೆಂದು ಪ್ರಾರ್ಥಿಸಿರುವರು.

ಅಳೆದಿರಿಸಿರ್ದುದಂ ಕುಡುವನಂತೆ ಪವಣ್ನುಡಿಯಿಂದೆ ಭವ್ಯರಂ |
ತಿಳಿಪುವ ಸುಮ್ಮನಿರ್ಪ ನಿಜಕಾರ್ಯಕೆ ಪುರುಷಮೃಗಂಬೊಲುರ್ವಿಯೊಳ್ ||
ಪೊಳೆವ ವಿವಕ್ತಮಂ ಪುಗುವ ಬೈತ ನಿಧಾನವನೀಕ್ಷಿಪಾತನಂ |
ತೊಳಗನೆ ಕಾಣ್ಮನೇ ಸಫಲಜನ್ಮನಲಾ ಅಪರಾಜಿತೇಶ್ವರಾ || ೧೦೪ ||

ಮೊದಲೆ ಅಳೆದು ಸಿದ್ಧಪಡಿಸಿಕೊಂಡಿರುವುದನ್ನು ಕೊಡುವಂತೆ ಯೋಗಿ ತನ್ನ ಬಳಿ ಸುಳಿವ ಭವ್ಯಾತ್ಮರೊಡನೆ ಹಿತವಾಗಿ ಮಿತವಾಗಿ ಮಾತಾಡಿ ಅನಂತರ ಮೌನಿಯಾಗುವನು. ಆತ್ಮಾನುಸಂಧಾನ ಕಾರ್ಯದಲ್ಲಿ ಪುರುಷಮೃಗದಂತೆ ನುಗ್ಗುವನು; ನಿರ್ಜನ ಪ್ರದೇಶದಲ್ಲಿ ಸಾಧನೆಯೆಸಗುವನು. ಹೂಳಿಟ್ಟ ನಿಧಿಯನ್ನು ಹುಡುಕುವವನಂತೆ ಆತ್ಮಸ್ವರೂಪವನ್ನೀಕ್ಷಿಸುವನು. ಇಂಥ ಮಹಾನುಭಾವನ ಬಾಳೇ ಸಫಲವಾದುದು"—ಚಿಂತೆಯಿಲ್ಲದವನಿಗೆ ಸಂತೆಯಲ್ಲಿ ನಿದ್ದೆ ಬರುವಂತೆ ಕರ್ಮಾಸುರನ ದುರಾಕ್ರಮಣವನ್ನು ನೋಡುವ ದಿವ್ಯಲೋಚನವಿಲ್ಲದ ಸಂಸಾರಿಜೀವ ವಿಷಯದ ಹೊಂಡದಲ್ಲಿ ಮೈಮರೆತು ಬಿಡುವುದು ಸಹಜ. ಆದರೆ ಯೋಗಿಯ ಒಳಗಣ್ಣು ಸದಾ ಜಾಗೃತವಾಗಿರುತ್ತದೆ. ಮನೆಗೆ ಬೆಂಕಿಬಿದ್ದಾಗ ಯಾರು ತಾನೆ ಸುಮ್ಮನಿದ್ದಾರು? ಆತ್ಮಸಿರಿಯನ್ನು ಕರ್ಮಜ್ವಾಲೆ ಆವರಿಸಿಕೊಂಡು ದಹಿಸುತ್ತಿರುವುದನ್ನು ಯೋಗಿ ನೋಡಬಲ್ಲನು. ಅಷ್ಟೇ ಅಲ್ಲ ಆ ಜ್ವಾಲೆಯನ್ನು ನಂದಿಸಲು ತನ್ನಲ್ಲೇ ಜ್ಞಾನಜಲನಿಧಿಯಿರುವುದನ್ನೂ ಯೋಗಿ ಬಲ್ಲ.

ಮಳೆ ಸುರಿದಾಗಳೆಂತು ಪನಿ ಗಾಳಿ ಸಿಡಿಲ್ದನಿಗಳ್ಕಿ ಬಾಹ್ಯದೊಳ್ |
ಸುಳಿಯದೆ ಗೇಹದೊಳ್ ಶಿಶುಗಳಿರ್ದಪುವಂತೆಲೆ ಯೋಗಿ ನೀನುಮ ||
ಗ್ಗಳಿಪ ವಿಕಾರಜೃಂಭಣದ ದುಷ್ಷಮದೊಳ್ಪೊರಗಾಡಬೇಡ ಪ |
ಜ್ಜಳಿಸುತೆ ನಿನ್ನೊಳಿರ್ದು ಜಯಿಸೆಂದೆಯಲಾ ಅಪರಾಜಿತೇಶ್ವರಾ || ೧೦೫ ||

"ಮಳೆಗಾಲದಲ್ಲಿ ಮಳೆಹನಿಗೂ, ಗಾಳಿಗೂ, ಸಿಡಿಲನಬ್ಬರಕ್ಕೂ ಅಂಜಿ ಮಕ್ಕಳು ಹೊರಬರಲಾರದೆ ಮನೆಯೊಳಗೆ ಇದ್ದುಬಿಡುವಂತೆ ಈ ದೃಷ್ಷಮಕಾಲದಲ್ಲಿ ಅಯ್ಯಾಯೋಗಿ, ಬಾಹ್ಯ ವ್ಯಾಪಾರದಲ್ಲಿ ಅತಿಯಾಗಿ ಬೆರೆಯಬೇಡ. ಏಕೆಂದರೆ ಈ ಕಲಿಕಾಲದಲ್ಲಿ ಎತ್ತ ನೋಡಿದರೂ ವಿಕಾರದ ಹುಚ್ಚುಕುಣಿತವೇ ತುಂಬಿದೆ. ಅದರಿಂದ ಅಂತರ್ಮುಖಿಯಾಗಿದ್ದುಕೊಂಡು ಉಜ್ವಲಿಸುತ್ತ ಕರ್ಮವನ್ನು ಜಯಿಸು ಎಂಬುದಾಗಿ ಅಪರಾಜಿತ, ನೀನೇ ಅಪ್ಪಣೆ ಕೊಡಿಸಿರುವೆಯಲ್ಲ!"

ಹಂಸಕಲೆಯ ಅಭಿರುಚಿ ಒಮ್ಮೆ ಹುಟ್ಟಿದರೆ ಮುಗಿಯಿತು ಅನಂತರ ಇನ್ನಾವ ಕಲೆಯೂ ಮಾನವನಿಗೆ ರುಚಿಸದು. ಅಪ್ಪಿತಪ್ಪಿ ಬ್ರಹ್ಮಾನಂದದ ಮೊಗಸಾಲೆಯ ದರ್ಶನವಾದರೆ,

೧. ಶ್ರೀ ಜ. ದಾ., ಪು. ೧೩೦